ರಂಜನ ಬೋಧನ ಪ್ರಚೋದನೆ

ಲಂಕೇಶ್

ಡಿಸೆಂಬರ್ 10, 2008 ರೂ. 12/-



ದಾಳಿ
ಯಾಕೆ?
ಯಾರು?

ಮುಂಬೈ ಮೇರಿ ಜಾನ್!

ರೇಂದ್ರಸ್ವಾಮಿಯ
ರಿಡಾರ್
ಬರಿ!

ಬೆಳಗಾವಿ:
ಸೆಕ್ಸ್ ಸಿನಿಮಾಗಳ
ನಗ್ನ ಸಾಮ್ರಾಜ್ಯ

ಬಾಗಲಕೋಟೆ:
ಎಸ್ಪಿ ರಮೇಶನ
ಸಂಧ್ಯಾವಂದನೆ




ಶೋಭಾ-ಯಡ್ಡಿ ವಿರುದ್ಧ ಬಂಡೆದ್ದ 36 ಶಾಸಕರು



ಕಾರ್ಟೂನ್ ಕಾರ್ನರ್

ಮುಂಬೈನಲ್ಲಿ ನಡೆದ ಉಗ್ರರ ಅಟ್ಟಹಾಸದ ಸಂದರ್ಭದಲ್ಲಿ ಕಲಾವಿದರ ಕುಂಚದಿಂದ ಮೂಡಿಬಂದ ಚಿತ್ರಗಳು







ಮಾಧ್ಯಮಗಳ ಪಕ್ಷಪಾತ

ಮುಂಬಯಿಯಲ್ಲಿ ಭಯೋತ್ಪಾದಕರ ಅಟ್ಟಹಾಸದಿಂದಾಗಿ ನೂರಾರು ಜನ ಪ್ರಾಣ ಕಳೆದುಕೊಂಡರು. ಭಯೋತ್ಪಾದಕರ ದಾಳಿಗೆ ಛತ್ರಪತಿ ಶಿವಾಜಿ ಟರ್ಮಿನಸ್ (ಸಿಎಸ್‌ಟಿ) ಎಂಬ ಜನನಿಬಿಡ ರೈಲ್ವೇ ಸ್ಟೇಷನ್, ನಾರಿಮನ್ ಹೌಸ್ ಎಂಬ ತಂಗುದಾಣಗಳ ಜೊತೆಗೆ ಆಗರ್ಭ ಶ್ರೀಮಂತರ ಹೋಟೆಲ್ಲುಗಳಾದ ತಾಜ್ ಮತ್ತು ಒಬೆರಾಯ್ ಟ್ರೈಡೆಂಟ್‌ಗಳೂ ಗುರಿಯಾಗಿದ್ದವು. ವಾಸ್ತವದಲ್ಲಿ ಹೆಚ್ಚು ಪ್ರಾಣಹಾನಿಯಾಗಿದ್ದು ಸಿಎಸ್‌ಟಿ ರೈಲ್ವೇ ನಿಲ್ದಾಣದಲ್ಲಾದರೂ ಮಾಧ್ಯಮಗಳ ದೃಷ್ಟಿ ಸಿಎಸ್‌ಟಿ ಮತ್ತು ನಾರಿಮನ್ ಹೌಸ್‌ಗಳಿಗಿಂತ ಹೆಚ್ಚಾಗಿ ಕೇಂದ್ರೀಕೃತವಾಗಿದ್ದು ತಾಜ್ ಮತ್ತು ಒಬೆರಾಯ್ ಟ್ರೈಡೆಂಟ್ ಹೋಟೆಲ್ಲುಗಳ ಮೇಲೆಯೇ.

ಇದಕ್ಕೆ ಕಾರಣ ಇಲ್ಲದಿಲ್ಲ, ಸಿಎಸ್‌ಟಿ ಸ್ಟೇಷನ್ ದಾಳಿಯಲ್ಲಿ ಸತ್ತವರೆಲ್ಲಾ ಜನಸಾಮಾನ್ಯರೇ. ಮುಂಬಯಿಯ ಉತ್ತರ ಭಾಗದಲ್ಲಿ ವಾಸಿಸುವ ಈ ಜನ ಮುಂಬಯಿಯ ದಕ್ಷಿಣ ಭಾಗದಲ್ಲಿರುವ ಕೊಲಾಬಾದಂತಹ **posh** ಏರಿಯಾಗಳಲ್ಲಿರುವ ದೊಡ್ಡ ದೊಡ್ಡ ಕಾರ್ಪೊರೇಟ್ ಆಫೀಸುಗಳಲ್ಲಿ ಕೆಲಸಕ್ಕೆ ಬರುತ್ತಾರೆ. ಭರ್ಜರಿ ಕಾರುಗಳನ್ನು ಹೊಂದಿಲ್ಲದ ಈ ಸಾಮಾನ್ಯ ಜನ ಸಂಜೆಯಾದ ಮೇಲೆ ತಮ್ಮತಮ್ಮ ಮನೆಗಳಿಗೆ ಹೋಗುವುದಕ್ಕಾಗಿ ಲೋಕಲ್ ಟ್ರೇನ್‌ಗಳನ್ನೇ ಬಳಸುತ್ತಾರೆ. ಅವತ್ತು ಕೂಡ ಕೆಲಸ ಮುಗಿಸಿಕೊಂಡು ಮನೆಗೆ ಹೊರಡುತ್ತಿದ್ದಾಗಲೇ ಭಯೋತ್ಪಾದಕರ ದ್ಹಾಳಿ ನಡೆದು ನೂರಾರು ಜನ ಸ್ಥಳದಲ್ಲೇ ಸತ್ತು ಹೋದರು. ಹಲವಾರು ಜನ ಗಂಭೀರವಾಗಿ ಗಾಯಗೊಂಡರು.

ಆದರೆ, ದುರಂತ ಎಂದರೆ ನಮ್ಮ ಟಿವಿಗಳಾಗಲೀ, ಪೇಪರ್‌ಗಳಾಗಲೀ ಈ ಸಾಮಾನ್ಯ ಜನರ ಬಗ್ಗೆ ವಿಶೇಷವಾಗಿ ಏನೂ ಬರೆಯಲಿಲ್ಲ, ಸಿಎಸ್‌ಟಿ ಸ್ಟೇಷನ್‌ನಲ್ಲಿ ಸತ್ತ ಜನರಿಗಾಗಿ, ಗಾಯಗೊಂಡವರಿಗಾಗಿ ಟಿವಿಗಳಲ್ಲಿ, ಪೇಪರುಗಳಲ್ಲಿ ಜಾಗವೇ ಇರಲಿಲ್ಲ. ಅವರ ಗಮನವಿದ್ದುದೆಲ್ಲಾ ತಾಜ್ ಮತ್ತು ಒಬೆರಾಯ್ ಟ್ರೈಡೆಂಟ್ ಐಷರಾಮಿ ಪಂಚತಾರಾ ಹೋಟೆಲ್‌ಗಳಲ್ಲಿ ಭಯೋತ್ಪಾದಕರ ಕಪಿಮುಷ್ಟಿಯಲ್ಲಿ ಬಂಧಿಯಾಗಿದ್ದ ಆಗರ್ಭ ಶ್ರೀಮಂತರ ಮೇಲೆ. ತಾಜ್ ಮತ್ತು ಟ್ರೈಡೆಂಟ್ ಹೋಟೆಲ್‌ಗಳ ಮೇಲಿನ ದಾಳಿ ಮುಗಿಯುವ ತನಕ, ಮುಗಿದ ಮೇಲೆ ನಿರಂತರವಾಗಿ ಪ್ರಸಾರ ಮಾಡುತ್ತಲೇ ಹೋದರು. ಇದು ಮಾಧ್ಯಮಗಳ ಶ್ರೀಮಂತ ಪರ ಪಕ್ಷಪಾತಿ ಧೋರಣೆಯಲ್ಲದೆ ಮತ್ತೇನಲ್ಲ,

ತಾಜ್ ಹೋಟೆಲ್ ಮೇಲೆ ಎನ್‌ಎಸ್‌ಜಿ ಕಮ್ಯಾಂಡೋಗಳು ಸಂಪೂರ್ಣ ಹತೋಟಿ ಪಡೆಯುವುದಕ್ಕೆ ಬರೋಬ್ಬರಿ ಮೂರು ದಿನಗಳನ್ನು ತೆಗೆದುಕೊಂಡರು. ಏಕಾಏಕಿ ಹಿಂದುಮುಂದು ನೋಡದೇ ಉಗ್ರರ ಮೇಲೆ ಎರಗಿದ್ದರೆ ಗುಂಡಿನ ಚಕಮಕಿಯಲ್ಲಿ ಹೋಟೆಲ್‌ನಲ್ಲಿ ಬಂಧಿಯಾಗಿರುವ ಶ್ರೀಮಂತ ಉದ್ಯಮಿಗಳು, ವಿದೇಶಿ ಜನ ಬಲಿಯಾಗುವ ಸಾಧ್ಯತೆಯಿದ್ದುದರಿಂದ ಸ್ವಲ್ಪ ತಾಳ್ಮೆಯಿಂದ ಕಮ್ಯಾಂಡೋಗಳು ಕಾರ್ಯಾಚರಣೆ ನಡೆಸಿದರು. ಉಗ್ರರನ್ನು ಕೊಲ್ಲುವ ಭರದಲ್ಲಿ ಅಮಾಯಕ ಜನರು ಬಲಿಯಾಗಬಹುದೆಂಬ ಅವರ ಕಾಳಜಿ ಸ್ವಾಗತಾರ್ಹವೇ. ಆದರೆ ಜನಸಾಮಾನ್ಯರು ತಂಗುವ ಹೋಟೆಲ್ ಮೇಲೇನಾದರೂ ಉಗ್ರರು ದಾಳಿ ನಡೆಸಿದ್ದರೆ ಈ ರೀತಿಯ ತಾಳ್ಮೆಯನ್ನು ಕಮ್ಯಾಂಡೋಗಳು ಪ್ರದರ್ಶಿಸುತ್ತಿದ್ದರೆ? ಕ್ರಾಸ್ ಫೈರಿಂಗ್‌ನಲ್ಲಿ ಜನ ಸತ್ತರೂ ಪರವಾಗಿಲ್ಲ ಉಗ್ರರನ್ನು ಶೀಘ್ರವಾಗಿ ಕೊಲ್ಲುವುದಕ್ಕೆ ಮುಂದಾಗುತ್ತಿದ್ದರು.


ಸಾರಾಂಶೀಕರಿಸಿ ಹೇಳುವುದಾದರೆ, ಮಾಧ್ಯಮಗಳೇ ಆಗಲಿ ಅಥವಾ ಮಿಲಿಟರಿಯೇ ಆಗಲಿ ಜನಸಾಮಾನ್ಯರ ಜೀವಗಳನ್ನು ಆಗರ್ಭ ಶ್ರೀಮಂತರ ಜೀವಗಳಿಗೆ ಸರಿಸಮನಾಗಿ ನೋಡುವುದಿಲ್ಲ, ಶ್ರೀಮಂತಪರ ಪಕ್ಷಪಾತಿ ಧೋರಣೆ ಇದ್ದೇ ಇರುತ್ತದೆ. ಭಯೋತ್ಪಾದಕರ ಮುಂಬೈ ದಾಳಿ ಇದನ್ನು ಮತ್ತೊಮ್ಮೆ ಸಾಬೀತುಪಡಿಸಿದೆ.



ಇಂಗ್ಲಿಷ್ ಟಿವಿ ಚಾನಲ್‌ಗಳಂತೂ ಈಗಲೂ ತಾಜ್ ಹೋಟೆಲ್‌ನ ಸಂದಿಗೊಂದಿ, ಕುರ್ಚಿ ಟೇಬಲ್, ತಟ್ಟೆ ಲೋಟಗಳನ್ನೆಲ್ಲಾ ತೋರಿಸುತ್ತಾ 'ಇಲ್ಲೊಬ್ಬರು ಕುಳಿತಿದ್ದರೆಂದು ಕಾಣುತ್ತದೆ. ಅಲ್ಲೊಬ್ಬ ತನ್ನ ಜೀವನದ ಕೊನೆ ಊಟ ಮಾಡಿದ ಕುರುಹುಗಳಿವೆ, ಎಂದೆಲ್ಲಾ ಬಂಬಿಸಿದರು. ಆದರೆ ಯಾವ ಟಿವಿ ಚಾನಲ್‌ನವರೂ ಶಿವಾಜಿ ರೇಲ್ವೆ ನಿಲ್ದಾಣಕ್ಕೆ ಹೋಗಲಿಲ್ಲ, ಅಲ್ಲಿ ಸತ್ತವರ ಅಂತ್ಯಸಂಸ್ಕಾರವಿರಲಿ ಕೊನೆಪಕ್ಷ ಹೆಸರುಗಳನ್ನು ಹೇಳುವ ಔದಾರ್ಯ ತೋರಲಿಲ್ಲ, ಟೆರರಿಸಂ ವಿರುದ್ಧದ ಹೋರಾಟದಲ್ಲಿ ಭಾರತೀಯರೆಲ್ಲಾ ಒಂದಾಗಬೇಕೆಂದು ಕರೆ ಕೊಡುವ ಮಾಧ್ಯಮಗಳಿಗೆ ಅದೇ ಭಯೋತ್ಪಾದನಾ ಕೃತ್ಯದಲ್ಲಿ ಮಡಿದ ಭಾರತೀಯರೆಲ್ಲಾ ಒಂದೇ ಎಂಬುದು ಗೊತ್ತಾಗಲಿಲ್ಲ ಏಕೆ?

Quote-Unquote

ನಂಬಿದರೆ ನಂಬಿ, ಬಿಟ್ಟರೆ ಬಿಡಿ




ಈಗ ರಾಜಕೀಯ ರಂಗವನ್ನು ಪ್ರವೇಶಿಸಿರುವ ತೆಲುಗು ಸೂಪರ್ ಸ್ಟಾರ್ ಚಿರಂಜೀವಿ ರ್‍ಯಾಲಿಗಳಲ್ಲಿ ತನ್ನ ಮೀಸೆ ತಿರುವುವುದನ್ನೇ ಚಾಳಿ ಮಾಡಿಕೊಂಡಿದ್ದಾರೆ. ಇದರ ಬಗ್ಗೆ ಪ್ರಶ್ನಿಸಿದವರಿಗೆ ಚಿರು ನೀಡಿದ ಉತ್ತರ: "ಮೀಸೆ ತಿರುರುವುವುದೂ ಗಾಂಧಿ ತತ್ವದ ಅಂಗ. ಅದು ಧೈರ್ಯದ ಸಂಕೇತ. ಗಾಂಧೀಜಿಯವರು ಎಂದೂ ತಮ್ಮ ಮೀಸೆ ತಿರುವಿರಲಿಲ್ಲವಾದರೂ ಅವರು ಧೈರ್ಯದ ಪ್ರತೀಕವಾಗಿದ್ದರು. ನಾನು ಅವರ ಹಾದಿಯಲ್ಲೇ ನಡೆಯುತ್ತಿದ್ದೇನೆ."

ಇದನ್ನು ಗಾಂಧಿಗಿರಿಯಲ್ಲ 'ಚಿರುಗಿರಿ' ಎಂದು ಕರೆಯಬಹುದೇ?

ಹೀಗೂ ಉಂಟು!

ರಾಜಕೀಯದಿಂದ ದೂರವೇ ಉಳಿದಿರುವ ತಮಿಳು ಚಿತ್ರನಟ ಅಜಿತ್ ಕಳೆದ ನವೆಂಬರ್ ಒಂದರಂದು ಶ್ರೀಲಂಕಾದ ತಮಿಳರ ಪರವಾಗಿ ತಮಿಳು ಚಿತ್ರರಂಗದವರು ಆಯೋಜಿಸಿದ್ದ ಉಪವಾಸ ಸತ್ಯಾಗ್ರಹದಲ್ಲಿ ತಾನು ಭಾಗವಹಿಸುವುದಿಲ್ಲ ಎಂದು ಘೋಷಿಸಿದ್ದ. ಅದರ ಮರುದಿನವೇ ಲಂಡನ್‌ಲ್ಲಿ ಅಜಿತ್ ನಟಿಸಿರುವ ಚಿತ್ರ 'ಏಗನ್' ಬಿಡುಗಡೆಯಾಗಲಿದ್ದ ಚಿತ್ರಮಂದಿರದ ಮೇಲೆ ದಾಳಿ ನಡೆಯಿತು. ಇದರಿಂದ ಕಂಗಾಲಾದ ಅಜಿತ್ ಮರುಮಾತಿಲ್ಲದೆ ರಜನಿಕಾಂತ್, ಕಮಲಹಾಸನ್, ವಿಕ್ರಮ್, ವಿಜಯ್, ಸೂರ್ಯ ಇತ್ಯಾದಿ ಜನರಿದ್ದ ಸತ್ಯಾಗ್ರಹಕ್ಕೆ ಹಾಜರಾದ.



ಇದಕ್ಕೆ ಕಾರಣವೂ ಇತ್ತು, ಅಜಿತ್ ನಟನೆಯ 'ಏಗನ್' ಚಿತ್ರದ ನಿರ್ಮಾಪಕ ಈಗ ಲಂಡನ್ ನಿವಾಸಿಯಾಗಿರುವ ಶ್ರೀಲಂಕಾದ ಪ್ರಭಾವಿ ತಮಿಳಿಗ ಕೆ. ಕರುಣಾಮೂರ್ತಿ!

ಅಂದಹಾಗೆ ರಜನಿ ಮತ್ತು ಐಶ್ವರ್ಯ ರಾಯ್ ನಟಿಸಲಿರುವ 'ರೊಬೋಟ್' ಸಿನಿಮಾವನ್ನು ನೂರು ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸುತ್ತಿರುವುದೂ ಇದೇ ಕರುಣಾಮೂರ್ತಿ!

ಇನ್ನು ಸತ್ಯಾಗ್ರಹಕ್ಕೆ ಅಜಿತ್ ಬಾರದಿರುತ್ತಾನೆಯೇ?!

ಮುಂಬೈ ಉಗ್ರರಿಗೆ ಬಲಿಯಾದ ಗೆಳತಿ ಸಬೀನಾ



ಕಂಡಹಾಗೆ

■ಗೌರಿ ಲಂಕೇಶ್

ರೆಗಷ್ಟೇ ಬೆಂಗಳೂರಿನಿಂದ ವರ್ಗಾವಣೆ ಪಡೆದು ಯ ದಿ ಟೈಮ್ಸ್ ಆಫ್ ಇಂಡಿಯಾ ಆಫೀಸಿಗೆ ಗಿದ್ದೆ. ಬೆಂಗಳೂರಿನಂತೆ ಅಲ್ಲಿಯೂ ವರದಿಗಾರ್ತಿ ದೆಹಲಿಯ ಸೆಖೆ ಮತ್ತು ಚಳಿಯಲ್ಲಿ ಅಲೆಯು ಬೇಡವೆಂದು ಉಪಸಂಪಾದಕೀಯ ಸ್ಥಾನ ದು ಆಗ ಟೈಮ್ಸ್ ಸಂಪಾದಕರಾಗಿದ್ದ ಅರುಣ್ ಅವರನ್ನು ಕೇಳಿಕೊಂಡಿದ್ದೆ. ಆದರೆ ಶೌರಿ ಅವರು ದಕೀಯ ಮಂಡಳಿಯಲ್ಲಿ ಈಗ ಸ್ಥಾನ ಖಾಲಿ ಬದಲಾಗಿ ಸಾಟರ್ಡೆ ಟೈಮ್ಸ್ ಎಂಬ ಹೊಸ ಂಟ್ ಅನ್ನು ಪ್ರಾರಂಭಿಸುತ್ತಿದ್ದೇವೆ. ಇಲ್ಲಿ ಜಾಗ ಆಗುವವರೆಗೂ ನೀನು ಅಲ್ಲಿರು. ಅದು ಯುವಕ ತಿಯರ ತಂಡವಾದ್ದರಿಂದ ನಿನಗೆ ಅಲ್ಲಿ ಇಷ್ಟವಾಗ ದು" ಎಂದು ಸೂಚಿಸಿದ್ದರು. ವಾರಕ್ಕೊಂದು ಬರುತ್ತಿದ್ದ ಸಾಟರ್ಡೇ ಟೈಮ್ಸ್‌ನಲ್ಲಿದ್ದರೆ ಸಂಪಾದ ಮಂಡಳಿಯಂತೆ ರಾತ್ರಿ ಪಾಳಿ ಮಾಡುವಂತಿಲ್ಲ ಖುಷಿಗೊಂಡ ನಾನು ಒಪ್ಪಿ ಆ ತಂಡವನ್ನು . ಆ ತಂಡದಲ್ಲಿದ್ದ ಎಲ್ಲರೂ 22-25ರ ಪ್ರಾಯ . ಅದರ ಸಂಪಾದಕಿಯಾಗಿದ್ದ ಮುನ್ನಿಕಾ ಚೋಪ್ರಾ 'ಹಿರಿಯಕ್ಕ'! ಎಲ್ಲರನ್ನೂ ಪರಿಚಯ ಮಾಡಿ ತ್ತಿದ್ದಾಗ ಒಂದು ದೊಡ್ಡ, ಬಣ್ಣಬಣ್ಣದ, ಗಹಗಹಿಸಿ ದ್ದ ಆಕಾರವೊಂದು ಸಾಟರ್ಡೆ ಟೈಮ್ಸ್ ಕೊಠಡಿ ಪ್ರವೇಶಿಸಿತು.

ಧ್ಯ ಬೈತಲೆ ತೆಗೆದು ಬಿಗಿಯಾಗಿ ಕಟ್ಟಿದ್ದ ಬು. ಪ್ರತಿ ಕಿವಿಯಲ್ಲಿ ಕನಿಷ್ಠ ಹತ್ತು ಓಲೆಗಳು. ಮೇಲೆ ದಟ್ಟಬಣ್ಣಗಳ ಕಾಟನ್ ಸೀರೆ. ಸ್ವಲ್ಪ ಕಪ್ಪಗಿದ್ದ ಣ್ಣ. ಹಣೆಯ ಮೇಲೆ ದೊಡ್ಡದಾದ ಕೆಂಪು ಅದರ ಸುತ್ತ ಬಣ್ಣಬಣ್ಣದ ಚಿತ್ತಾರ. ತುಟಿಯ ಲಿಪ್‌ಸ್ಟಿಕ್. ಪಾನ್ ತಿಂದೂ ತಿಂದೂ ಕೆಂಪಗಾ ನಾಲಿಗೆ ಮತ್ತು ಬಾಯಿ. ಕೈತುಂಬ ಬಳೆ, ಕಾಲಲ್ಲಿ

ನಾವೆಲ್ಲ ಜೀನ್ಸ್ ಪ್ಯಾಂಟ್, ಟಾಪ್ ತುಂಡು ಹೇರ್‌ಕಟ್ ಹೊಂದಿದ್ದ dern' ಯುವತಿಯರಾಗಿದ್ದರೆ ದೇಶಿ ಯನ್ನು ಅತಿರೇಕಕ್ಕೆ ತೆಗೆದುಕೊಂಡು ದಂತೆ ಕಾಣುತ್ತಿದ್ದ ನಮ್ಮ ವಾರಿಗೆ ಆಗಿದ್ದ ಆಕೆ ಆ ಕೊಠಡಿಯಲ್ಲಿ ನಾಗಿ ಕಾಣಿಸುತ್ತಿದ್ದಳು. ಹೊಸ ದಯಾಗಿದ್ದ ನನ್ನನ್ನು ಕಂಡು "Hi, ಮ್ ಸಬೀನಾ " ಎಂದು ದೊಡ್ಡನಗೆ ತ್ತಾ ಪರಿಚಯ ಮಾಡಿಕೊಂಡಳು.

ಮೊನ್ನೆ ಮುಂಬೈನ ತಾಜ್ ಹೋಟೆಲಿನ ಮಹಡಿಯಲ್ಲಿ ಹೆಣವಾದಳು ಇದೇ ನಾ ಸೆಹಗಲ್ ಸೈಕಿಯಾ. ಆಕೆ ತಂಗಿದ್ದ ಡಿ ಬೆಂಕಿಗೆ ಆಹುತಿಯಾಗಿ ಭಸ್ಮ ಯಿತ್ತು. ಎಲ್ಲೆಡೆ ಆವರಿಸಿದ್ದ ಹೊಗೆ ಗಿ ಸಬೀನಾ ಉಸಿರುಗಟ್ಟಿ ಸತ್ತಿದ್ದಳು. ಯುವ ಮುನ್ನ ತನ್ನ ಗಂಡನಿಗೆ, ಇತರೆ ತರಿಗೆ ಮೊಬೈಲ್ ಮೂಲಕ ದೂಕಿನ ಗುಂಡುಗಳು ಹಾರುತ್ತಿರುವ ಶಬ್ದ ಕೇಳಿಸು ನನ್ನ ಕೊಠಡಿಯ ಲೈಟ್‌ಗಳನ್ನು ಬಂದ್ ಮಾಡಿ ಚದ ಅಡಿ ಬಚ್ಚಿಟ್ಟುಕೊಂಡಿದ್ದೇನೆ. ಅವರು ದಲ್ಲೇ ಇದ್ದಾರೆ ಅನ್ನಿಸುತ್ತಿದೆ. ತುಂಬಾ ಭಯವಾಗು ನಾನು ಸಂಪೂರ್ಣ ಏಕಾಂಗಿ ಆಗಿದ್ದೇನೆ" ಎಂದು ಎಸ್ ಮಾಡಿದ್ದಳು. ರಾತ್ರಿ ಮೂರು ಗಂಟೆಗೆ ಶಾಂತನುಗೆ "ಐ ಲವ್ ಯು" ಎಂದು ಬ್ಬರದು ಎಸ್‌ಎಂಎಸ್ ಕಳುಹಿಸಿದ್ದಳು. ಅದು ನಾ ಕಳುಹಿಸಿದ ಕೊನೇ ಸಂದೇಶ. ಯಾವುದೋ ಚಮತ್ಕಾರ ನಡೆದು ಆಕೆ ಬದುಕಿರಲಿ ಎಂದು ಆಶಿಸಿದ್ದ, ಪ್ರಾರ್ಥಿಸಿದ್ದ, ಆಕೆಯ ಅಪಾರ ಸ್ನೇಹಿತರ ವನ್ನು ನಿರಾಶೆಗೊಳಿಸಿ ಹೊರಟುಹೋಗಿದ್ದಾಳೆ ನಾ.


ಸಬೀನಾ ಮತ್ತು ನಾನು ಎಲ್ಲ ರೀತಿಯಲ್ಲೂ ದ್ದ, ಆಕೆ ಎತ್ತರಕ್ಕೆ, ದಪ್ಪಗೆ, ಪಂಜಾಬಿಯಾಗಿದ್ದರೂ ಕಪ್ಪಗೆ ಇದ್ದಾಕೆ. ನಾನು ತೆಳ್ಳಗೆ, ಕುಳ್ಳಗೆ, ದಕ್ಷಿಣ ತೀಯಳಾದರೂ ಆಕೆಗಿಂತ ಬೆಳ್ಳಗಿದ್ದವಳು. ನನ್ನ ಬ್ಲಾಬ್ ದಿಲನ್ ಮತ್ತು ಬೀಟೆಲ್ಸ್ ತರಹದ ಮಾತ್ಯ ಸಂಗೀತವಾಗಿದ್ದರೆ, ಆಕೆಗೆ ಭಾರತೀಯ ಸಂಗೀತ ಅಚ್ಚುಮೆಚ್ಚು, ನನಗೆ ಅಡುಗೆ ಮಾಡು ಲೇಜಿಗೆ ಕೆಲಸ ಅನ್ನಿಸಿದ್ದರೆ, ಆಕೆಗೆ ರುಚಿರುಚಿ ಅಡುಗೆ ಮಾಡಿ ಎಲ್ಲರಿಗೆ ಉಣಬಡಿಸುವುದರಲ್ಲೇ ಸಂತೋಷ.

ಪ್ರತಿದಿನ ಟೈಮ್ಸ್ ಆಫೀಸಿನ ಹತ್ತಿರವಿದ್ದ ಒಂದು ಕೆಟ್ಟ ಉಡುಪಿ ಹೋಟೆಲ್, ಸುಮಾರಾಗಿದ್ದ ಚಾಟಾ ಅಥವಾ ಪರೋಟಾ ಅಂಗಡಿಯಲ್ಲಿ ಮಧ್ಯಾಹ್ನದ ಊಟ ಮಾಡಿ ಮಾಡಿ ನನಗೆ ರೋಸಿಹೋಗಿತ್ತು. ಆಗ ನಾನು ಮತ್ತು ಸಬೀನಾ ಒಂದು ಒಪ್ಪಂದ ಮಾಡಿಕೊಂಡಿದ್ದೆವು. ಅದರಂತೆ ಆಕೆ ಪ್ರತಿದಿನ ನನಗೆ ಮನೆಯಿಂದ ಊಟ ತರುತ್ತಿದ್ದಳು. ಅದಕ್ಕೆ ಪ್ರತಿಯಾಗಿ ನಾನು ಅವಳಿಗೆ ಇಷ್ಟವಾದ ಬನಾರಸಿ ಬೀಡ (ಅಂದಿನ ಊಟ ತುಂಬಾ ಚೆನ್ನಾಗಿದ್ದರೆ ಡಬಲ್ ಬೀಡ!) ಕೊಡಿಸುತ್ತಿದ್ದೆ.

ಆಗೆಲ್ಲ ನಮಗೆ ಹೆಚ್ಚು ಕೆಲಸ ಇರುತ್ತಿರಲಿಲ್ಲವಾದ್ದರಿಂದ ಹರಟೆ ಹೊಡೆಯುವುದರಲ್ಲೇ ಸಮಯ ಕಳೆಯುತ್ತಿದ್ದೆವು. ಮನೆಯಲ್ಲಿನ ಸಮಸ್ಯೆ, ಸ್ನೇಹಿತರ ಸರಸ ಸಲ್ಲಾಪ, ಆಫೀಸ್‌ನಲ್ಲಿನ ಆಗುಹೋಗುಗಳು, ಗಾಸಿಪ್ ಇಂತಹವುಗಳಲ್ಲಿ ಅದೆಷ್ಟೋ ದಿನಗಳನ್ನು ಸಬೀನಾ, ನಾನು ಕಳೆದಿದ್ದವು. ಬೇಸರವಾದಾಗ ಸಾಂತ್ವನ ನೀಡುತ್ತಿದ್ದ, ಜೋಕ್‌ಗಳನ್ನು ಹೇಳಿ ನಗಿಸುತ್ತಿದ್ದ, ಎಲ್ಲರನ್ನೂ ಆಪ್ತತೆಯಿಂದ ಕಾಣುತ್ತಿದ್ದ, ಕಾರಣವಿಲ್ಲದೆ ಹಲವೊಮ್ಮೆ ಸಿಟ್ಟಿಗೇಳುತ್ತಿದ್ದ, ಅಷ್ಟೇ ಬೇಗನೆ ದೊಡ್ಡದಾಗಿ ನಕ್ಕು ತನ್ನ ಕೋಪವನ್ನು ಮರೆಯುತ್ತಿದ್ದಳು ಸಬೀನಾ.

ಹಿಂದೂಸ್ತಾನಿ ಸಂಗೀತದಲ್ಲಿ ಅಪಾರ ಆಸಕ್ತಿ ಹೊಂದಿದ್ದ ಸಬೀನಾ ದಾಗರ್ ಸಹೋದರರ ಶಿಷ್ಯೆಯಾಗಿದ್ದಳು, ಅವರ ಮನೆಯ ಸದಸ್ಯೆ ಎಂಬಂತಾಗಿದ್ದಳು. ಪ್ರತಿ ದಿನ ರಿಯಾಜ್ ಮಾಡುತ್ತಿದ್ದಳು. ನನಗೋ, ಹಿಂದೂಸ್ತಾನಿ ಸಂಗೀತದ ಬಗ್ಗೆಯಾಗಲಿ, ಕರ್ನಾಟಕ ಸಂಗೀತದ ಬಗ್ಗೆಯಾಗಲಿ ಗಂಧ ಗಾಳಿ ಒಂದೂ ಗೊತ್ತಿರಲಿಲ್ಲ. ಆದ್ದರಿಂದ ನನ್ನನ್ನು 'ಸುಸಂಸ್ಕೃತ'ಳನ್ನಾಗಿಸಲು ಸಬೀನಾ ತುಂಬಾ ಪ್ರಯತ್ನ ಪಟ್ಟಿದ್ದಳು. ಹಿಂದೂಸ್ತಾನಿ ಸಂಗೀತದಲ್ಲಿನ ರಾಗ, ಆಲಾಪಗಳ





ಸಬೀನಾ ಸೆಹಗಲ್ ಸೈಕಿಯಾ

ಬಗ್ಗೆ ಹೇಳಿ ಅವುಗಳ ನಡುವಿನ ವ್ಯತ್ಯಾಸವನ್ನು ವಿವರಿಸುತ್ತಿದ್ದಳು. ಆದರೆ ನಾನು ಅವಳಿಗೆ ಸೂಕ್ತ ಶಿಷ್ಯೆಯಾಗದೆ ಆ ಸಂಗೀತದಿಂದ ದೂರವೇ ಉಳಿದೆ.

ಹೀಗೆ ಒಂದು ವರ್ಷ ಕಳೆದ ನಂತರ ನನಗೆ ಕೆಲಸವಿಲ್ಲದ, ಕೆಲಸಕ್ಕೆ ಬಾರದ ಸಾಟರ್ಡೆ ಟೈಮ್ಸ್‌ನಿಂದ ಮುಖ್ಯವಾಹಿನಿ ಪತ್ರಿಕೋದ್ಯಮಕ್ಕೆ ಹಿಂದಿರುಗಬೇಕೆನಿಸಿ ಉಪಸಂಪಾದಕಿಯಾಗಿ ದಿನಪತ್ರಿಕಾ ತಂಡ ಸೇರಿದೆ. ನನ್ನ ಮತ್ತು ಸಬೀನಾಳ ಸ್ನೇಹ ಮುಂದುವರೆಯಿತಾದರೂ, ದಿನಪತ್ರಿಕೆಯಲ್ಲಿ ಪಾಳಿ ಮೇಲೆ ಕೆಲಸ ಮಾಡಬೇಕಿದ್ದರಿಂದ ತಮ್ಮ ಮಧ್ಯಾಹ್ನ ಊಟದ ಒಪ್ಪಂದ, ಹರಟೆ session ಗಳಿಗೆ ಕಡಿವಾಣ ಬಿತ್ತು. ಆದರೂ ಹಲವೊಮ್ಮೆ ಆಕೆ ನನಗೆಂದು ಊಟ ತರುತ್ತಿದ್ದದ್ದು, ನಾನು ಅವಳಿಗೆ ಬನಾರಸಿ ಪಾನ್ ಕೊಡಿಸುತ್ತಿದ್ದದ್ದು, ನಾನು ಎಂದೂ ಉಡದೇ ಇದ್ದ ನನ್ನ ಕಂಚೀ ಸೀರೆಗಳನ್ನು ಆಕೆ ತನ್ನ ವಶಕ್ಕೆ ಪಡೆದು ಅವುಗಳನ್ನು ಲದ್ದು ಮಾಡಿ ವಾಪಸ್ಸು ಕೊಡುವುದು, ಆಗ ಆಕೆಯನ್ನು ವರಿಸುತ್ತಿದ್ದ ಅವಳ ಗಂಡ ಶಾಂತನುನೊಂದಿಗೆ ಗುಟ್ಟಾಗಿ ಹೋದಾಗಲೆಲ್ಲ ಅವಳ ತಂದೆ ತಾಯಿಗೆ ನನ್ನ ಮನೆಗೆ ಹೋಗುತ್ತಿದ್ದುದಾಗಿ ಹೇಳುತ್ತಿದ್ದದ್ದು, ನನ್ನ ಗಂಡನೊಂದಿಗೆ ಜಗಳವಾಡಿ ಅವಳ ಹೆಗಲ ಮೇಲೆ ಕಣ್ಣೀರಿಟ್ಟಾಗ ಅವಳು ನನಗೆ ಸಾಂತ್ವನ ಹೇಳುತ್ತಿದ್ದದ್ದು... ಇದೆಲ್ಲ ಮುಂದುವರೆದಿತ್ತು.

ನಾಲ್ಕೈದು ವರ್ಷಗಳ ನಂತರ ನಾನು ಬೆಂಗಳೂರಿಗೆ ಹಿಂದಿರುಗಿದ ನಂತರ ಸಬೀನಾ ಮತ್ತು ನನ್ನ ನಡುವಿನ ಸಂಪರ್ಕ ತೀರಾ ವಿರಳ ಎಂಬಂತಾಯಿತು. ನಾನು ಬೆಂಗಳೂರು, ಅಮೆರಿಕ, ಫ್ರಾನ್ಸ್ ಎಂದೆಲ್ಲ ಸುತ್ತಾಡುತ್ತಿದ್ದಾಗ ಆಕೆ ಟೈಮ್ಸ್ ಸಂಸ್ಥೆಯಲ್ಲಿ ಬಡ್ತಿ ಪಡೆಯುತ್ತಾ, ಮದುವೆಯಾಗಿ ಇಬ್ಬರು ಮಕ್ಕಳ ತಾಯಿಯಾದಳು. ನಾನು ಅರ್ಥಗರ್ಭಿತ ಪತ್ರಿಕೋದ್ಯಮದಲ್ಲಿ ತೊಡಗಲಾರಂಭಿಸಿದರೆ ಆಕೆ ಹೈಸೊಸೈಟಿ ಪತ್ರಿಕೋದ್ಯಮದ ಅಂಗವಾದಳು. ಸಾಮಾಜಿಕ, ಆರ್ಥಿಕ, ರಾಜಕೀಯದ ಬಗೆಗಿನ ನಮ್ಮ ನಿಲುವುಗಳ ನಡುವೆ ಅಂತರ ಹೆಚ್ಚಾಗುತ್ತಾ ಹೋಯಿತು. ನಮ್ಮ ಬದುಕುಗಳ ಹಾದಿಯೂ ಬೇರೆಬೇರೆ ಆಯಿತು.

ದೆಹಲಿಯ ಹೋಟೆಲ್‌ಗಳ ಬಗ್ಗೆ ಸಬೀನಾ ಬರೆದಿದ್ದ ಪುಸ್ತಕ ಸೂಪರ್ ಹಿಟ್ ಆಯಿತು. ಆಗ ಚಿದು ನಾನು ಕೂಡ ಬೆಂಗಳೂರಿನ ಹೋಟೆಲ್‌ಗಳ ಬಗ್ಗೆ ಅಂತಹದ್ದೇ ಪುಸ್ತಕ ಬರೆಯಬಾರದೇಕೆ ಎಂಬ ಸಲಹೆ ನೀಡಿದಾಗ ನಾನು ಜೋರಾಗಿ ನಕ್ಕು ಸುಮ್ಮನಾಗಿದ್ದೆ. ಸಬೀನಾ ಬರೆದಿದ್ದ ಪುಸ್ತಕವನ್ನು ಬೆಂಗಳೂರಿನ ಪಂಚತಾರಾ ಹೋಟೆಲ್ ಒಂದರಲ್ಲೂ ಬಿಡುಗಡೆ ಮಾಡಲಾಗಿತ್ತು. ಅದಕ್ಕೆಂದು ಬೆಂಗಳೂರಿಗೆ ಬಂದಿದ್ದ ಸಬೀನಾ ನನಗೆ ಫೋನ್ ಮಾಡಿ "ನೀನು ಬರಲೇಬೇಕು" ಎಂದು ಒತ್ತಾಯ ಮಾಡಿದ್ದಳು. ಆದರೆ ಅದ್ಯಾಕೋ ಆ ಕಾರ್ಯಕ್ರಮಕ್ಕೆ ಹೋಗುವ ಮನಸ್ಸಾಗಿರಲಿಲ್ಲ.

ನಾನು ಈಟೀವಿ ಚಾನೆಲ್ ಸೇರಿಕೊಂಡಾಗ ಮತ್ತೆ ನನ್ನ ವಾಸ್ತವ್ಯ ದೆಹಲಿಗೆ ವರ್ಗವಾಗಿತ್ತು. ದೆಹಲಿಯಲ್ಲಿ ಸೆಟಲ್ ಆದನಂತರ ಸಬೀನಾಳಿಗೆ ಫೋನ್ ಮಾಡಿ ಮತ್ತೆ ನಾನು ದೆಹಲಿ ವಾಸಿ ಆಗಿರುವ ಬಗ್ಗೆ ಹೇಳಿದಾಗ ಆಕೆ ಖುಷಿಗೊಂಡು ನನ್ನನ್ನು ತನ್ನ ಮನೆಗೆ ಆಹ್ವಾನಿಸಿದ್ದಳು. ಅದೂ ಇದೂ ಮಾತನಾಡುತ್ತಾ ಈಗ ಟೈಮ್ಸ್ ಶೈಲಿಯ ಪತ್ರಿಕೋದ್ಯಮದ ಬಗ್ಗೆ ನನ್ನ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿದೆ. ಅಷ್ಟೊತ್ತಿಗಾಗಲೇ ಟೈಮ್ಸ್‌ನ ಮುಖ್ಯ ಸಂಪಾದಕರಲ್ಲಿ ಒಬ್ಬಳಾಗಿದ್ದ ಸಬೀನಾಳಿಗೆ ನನ್ನ ಮಾತು ಇಷ್ಟವಾಗಲಿಲ್ಲ. "ನಿನ್ನಂಥವರು ಟೈಮ್ಸ್ ಓದದಿದ್ದರೇನಂತೆ, ಲಕ್ಷಾಂತರ ಜನ ಓದುತ್ತಾರೆ. ಏಕೆಂದರೆ ಅವರಿಗೆ ಬೇಕಾಗಿರುವುದನ್ನು ನಾವು ಪ್ರಕಟಿಸುತ್ತೇವೆ" ಎಂದಳು. ಆಕೆಯ ಮಾತು ನಮ್ಮ ಕೆಲ ಕನ್ನಡ ಚಿತ್ರ ನಿರ್ಮಾಪಕರ/ನಿರ್ದೇಶಕರ ವಾದದಂತಿತ್ತು: ಜನರಿಗೆ ಕೀಳುಮಟ್ಟದ ಚಿತ್ರಗಳೇ ಇಷ್ಟವಾಗುವುದರಿಂದ ನಾವು ಅಂತಹದ್ದನ್ನೇ ಕೊಡುತ್ತೇವೆ. ಹಾಗೆಂದು ನಾನು ಸಬೀನಾಳಿಗೆ ಹೇಳಿದಾಗ ಅವಳಿಗೆ ಮತ್ತಷ್ಟು ಉರಿದು ಹೋಗಿತ್ತು. ನಮ್ಮಿಬ್ಬರ ವಾದ-ವಿವಾದ ಹೆಚ್ಚಾಗಲಾರಂಭಿಸಿದಾಗ ಸಬೀನಾಳ ಗಂಡ ಶಾಂತನು ನನಗೆ ಕಣ್ಣು ಸನ್ನೆ ಮಾಡಿ ಆಕೆ ಸುಮ್ಮನಾಗುವುದಿಲ್ಲ, ನೀನಾದರೂ ಸುಮ್ಮನಿರು ಎಂದು ಸೂಚಿಸಿದ.

ಅವತ್ತು ಕೂಡ ಸಬೀನಾ ನಗುತ್ತಾ ಅಪ್ಪ ಅಪ್ಪುಗೆಯೊಂದಿಗೆ ನನ್ನನ್ನು ಬೀಳ್ಕೊಟ್ಟಿದ್ದರೂ ಆಕೆ ಮತ್ತು ನನ್ನ ನಡುವೆ ಯಾವ ಸಮಾನ ಆಸಕ್ತಿಗಳೂ ಉಳಿದಿಲ್ಲ ಅನ್ನಿಸಿತು. ಯುವತಿಯರಾಗಿದ್ದಾಗ ಇಂತಹ ಭಿನ್ನಾಭಿಪ್ರಾಯಗಳನ್ನು ಮರೆತು ಹರಟೆ ಹೊಡೆಯುತ್ತಿದ್ದಂತೆ ಈ ಘಟ್ಟದಲ್ಲೂ ಸ್ನೇಹಕ್ಕಾಗಿ ಸ್ನೇಹವನ್ನು ಮುಂದುವರೆಸಲು ವಯಸ್ಸು ಅಡ್ಡಿಬಂದಿತ್ತು. ಜೊತೆಗೆ ಇಬ್ಬರಿಗೂ ಕೆಲಸದ ಒತ್ತಡಗಳು, ಇತರೆ ಜವಾಬ್ದಾರಿಗಳು ಹೆಚ್ಚಾಗಿದ್ದವು. ಅದು ನಮ್ಮಿಬ್ಬರ ಕೊನೆ ಭೇಟಿಯಾಗಿತ್ತು.

ಮೊದಲಿನಿಂದಲೂ ಅಡುಗೆ ಮತ್ತು ಊಟದ ಬಗ್ಗೆ ಆಸಕ್ತಿ ಹೊಂದಿದ್ದ ಸಬೀನಾ ಇತ್ತೀಚೆಗೆ ಬಹಳ ಬೇಡಿಕೆಯಲ್ಲಿದ್ದ food critic ಆಗಿದ್ದಳು. ದೆಹಲಿ ಮತ್ತು ಮುಂಬೈನ ಖ್ಯಾತ ಹೋಟೆಲ್‌ಗಳಿಗೆ ಭೇಟಿ ನೀಡಿ ಅವುಗಳ ಬಗ್ಗೆ ವಿಮರ್ಶೆಗಳನ್ನು ಬರೆಯುತ್ತಿದ್ದಳು. ಆದ್ದರಿಂದ ಅವಳನ್ನು ಮೆಚ್ಚಿಸಲು, ಆಕೆಯಿಂದ ಹೊಗಳಿಕೆಯನ್ನು ಪಡೆಯಲು ಹೋಟೆಲ್‌ಗಳು ಮುಗಿಬೀಳುತ್ತಿದ್ದವು. ಅವಳಿಗೆ ರತ್ನಗಂಬಳಿ ಹಾಸುತ್ತಿದ್ದವು.


ಹಾಗೆಯೇ ಮುಂಬೈನ ತಾಜ್ ಕೂಡ ಆಹ್ವಾನಿಸಿತ್ತು, ತನ್ನಲ್ಲಿನ ಹೋಟೆಲ್‌ಗಳ ಬಗ್ಗೆ ವಿಮರ್ಶೆ ಬರೆಯಬೇಕೆಂದು ಆಹ್ವಾನಿಸಿತ್ತು. ಹೇಗಿದ್ದರೂ ನವೆಂಬರ್ 26ರಂದು ಮುಂಬೈಯಲ್ಲಿ ಟೈಮ್ಸ್ ಪತ್ರಿಕೆಯ ಹಿರಿಯ ಸಂಪಾದಕಿ ಬಚ್ಚಿ ಕರ್ಕಾರಿಯಾ ಅವರ ಪುತ್ರನ ಮದುವೆ ನಡೆಯಲಿತ್ತು. ಮದುವೆಗೂ ಹೋದಂತಾಗುತ್ತದೆ, ತಾಜ್‌ನಲ್ಲಿ ಹೋಟೆಲ್‌ಗಳನ್ನು ವಿಮರ್ಶೆ ಮಾಡಿದಂತಾಗುತ್ತದೆ ಎಂದು ಸಬೀನಾ ಹೋದಳು.

ಆ ಸಂಜೆ ತಾಜ್ ಹತ್ತಿರವೇ ಇದ್ದ ಪಾರ್ಸಿ ಸಮುದಾಯ ಭವನದಲ್ಲಿ ಮದುವೆಯ ರಿಸೆಪ್ಷನ್ ಇತ್ತು. ಅದಕ್ಕೆಂದು ಮುಂಬೈ ಪತ್ರಿಕೆಗಳ ಸಂಪಾದಕರೆಲ್ಲ ಹಾಜರಾಗಿದ್ದರು. ಸಬೀನಾ ಕೂಡ ಹೋದಳು. ಆದರೆ ಆಕೆಗೆ ಮೈ ಹುಷಾರಿರಲಿಲ್ಲವಾದ್ದರಿಂದ ಸ್ವಲ್ಪ ಹೊತ್ತು ಇದ್ದು ತಾಜ್‌ನಲ್ಲಿನ ಆರನೇ ಮಹಡಿಯಲ್ಲಿನ ಕೊಠಡಿಗೆ ಹಿಂದಿರುಗಿದಳು. ರೂಮ್‌ಬಾಯ್‌ನ್ನು ಕರೆದು ತನಗೆ ಔಷಧಿ ತರಬೇಕೆಂದು ಕೇಳಿದಳು. ಆದರೆ ಆತ ಹಿಂದಿರುಗಲೇ ಇಲ್ಲ. ಬದಲಾಗಿ ಸ್ವಲ್ಪ ಹೊತ್ತಿನಲ್ಲೇ ಕೆಳಗಿನಿಂದ ಗುಂಡುಗಳ ಶಬ್ದ ಸಬೀನಾಳಿಗೆ ಕೇಳಿಸಿತು. ಸ್ವಲ್ಪ ಹೊತ್ತಿನಲ್ಲೇ ಏನಾಗುತ್ತಿದೆ ಎಂದು ಸಬೀನಾಳಿಗೂ ಮದುವೆ ಸಂಭ್ರಮದಲ್ಲಿದ್ದ ಇತರೆ ಪತ್ರಕರ್ತರಿಗೂ ಗೊತ್ತಾಯಿತು. ಕೆಲ ಸ್ನೇಹಿತರು ಸಬೀನಾಳಿಗೆ ಫೋನ್ ಮಾಡಿ ತಾಜ್ ಮೇಲೆ ಭಯೋತ್ಪಾದಕರ ದಾಳಿ ನಡೆಯುತ್ತಿದೆ, ಅಲ್ಲಿಗೆ ಹೋಗಬೇಡ, ಬದಲಿಗೆ ತಮ್ಮ ಮನೆಗೆ ಬಂದಿರಲು ಹೇಳಿದರು. ಆದರೆ ಸಬೀನಾ "ನಾನಾಗಲೇ ನನ್ನ ಕೊಠಡಿಯಲ್ಲಿದ್ದೇನೆ" ಎಂದು ಅಸಹಾಯಕತೆ ವ್ಯಕ್ತಪಡಿಸಿದಳು.

ಸಬೀನಾಳಿಗೆ ಬೇರೆ ವಿಧಿ ಇರಲಿಲ್ಲ. ತನ್ನ ಕೊಠಡಿಯ ಬಾಗಿಲನ್ನು ಭದ್ರವಾಗಿ ಮುಚ್ಚಿ ಲೈಟ್‌ಗಳನ್ನು ಆಫ್ ಮಾಡಿ, ಟೀವಿಯನ್ನು ಬಂದ್ ಮಾಡಿ ಮಂಚದ ಅಡಿ ಬಚ್ಚಿಟ್ಟುಕೊಂಡಳು. ಸೈಲೆನ್ಸ್ ಮಾಡಿದ್ದ ತನ್ನ ಮೊಬೈಲ್ ಮೂಲಕ ತನ್ನ ಗಂಡನಿಗೆ, ಇತರೆ ಸ್ನೇಹಿತರಿಗೆ ತಾನಿರುವ ಪರಿಸ್ಥಿತಿ ಬಗ್ಗೆ ಎಸ್‌ಎಂಎಸ್ ಕಳುಹಿಸಿದಳು.

ತಾಜ್‌ನ ನೆಲಮಹಡಿಯಲ್ಲಿದ್ದ ಜನರ ಮೇಲೆ ಗುಂಡು ಹಾರಿಸಿ ಹಲವಾರು ಜನರನ್ನು ಬಲಿ ತೆಗೆದುಕೊಂಡ ಭಯೋತ್ಪಾದಕರು ಅನಂತರ ಹೋಗಿದ್ದೇ ಸಬೀನಾಳಿದ್ದ ಆರನೇ ಮಹಡಿಗೆ. ಅವರು ಎಸೆಯುತ್ತಿದ್ದ ಗ್ರೆನೆಡ್‌ಗಳ ಶಬ್ದ ಕೇಳಿ ಸಬೀನಾ ತನ್ನ ರೂಮಿನ ಬಾತ್‌ರೂಮ್‌ನಲ್ಲಿ ಬಚ್ಚಿಟ್ಟುಕೊಂಡಳು. ಆಕೆಯ ದುರಾದೃಷ್ಟ ಎಂತಹದ್ದಾಗಿತ್ತೆಂದರೆ ಆಕೆ ಇದ್ದ ಕೊಠಡಿ ಮತ್ತು ಅದರ ಪಕ್ಕದಲ್ಲಿದ್ದ ಮತ್ತೊಂದು ಕೊಠಡಿಗೆ ಭಯೋತ್ಪಾದಕರು ಬೆಂಕಿ ಹಚ್ಚಿದರು. ಅತ್ತ ಪಕ್ಕದ ರೂಮಿನಲ್ಲಿದ್ದ ತಾಜ್ ಹೋಟೆಲ್‌ನ ಹಿರಿಯ ಅಧಿಕಾರಿಯ ಹೆಂಡತಿ ಮತ್ತು ಇಬ್ಬರು ಮಕ್ಕಳು ಸುಟ್ಟು ಭಸ್ಮವಾದರು. ಇತ್ತ ಬಾತ್‌ರೂಮ್‌ನಲ್ಲಿದ್ದ ಸಬೀನಾ ಉಸಿರುಗಟ್ಟಿ ಸಾವನ್ನಪ್ಪಿದ್ದಳು.

ಸದಾ ಗಹಗಹಿಸಿ ನಗುತ್ತಿದ್ದ, ತಾಯಿಯಂತೆ ಎಲ್ಲರಿಗೂ ರುಚಿಯಾದ ಅಡುಗೆ ಮಾಡಿ ತಿನ್ನಿಸುತ್ತಿದ್ದ, ಹಿಂದೂಸ್ತಾನಿ ಸಂಗೀತದಲ್ಲಿ ಮೈಮರೆತು ಮುಳುಗುತ್ತಿದ್ದ, ಬನಾರಸಿ ಪಾನ್‌ಗಳನ್ನು ಜಗಿದು ತನ್ನ ಕೆಂಪು ತುಟಿಗಳಿಂದ ಗಲ್ಲಕ್ಕೆ ಮುತ್ತಿಡುತ್ತಿದ್ದ, ಆಪ್ತತೆಯ ಪ್ರತೀಕವಾಗಿದ್ದ ಗೆಳತಿ ಸಬೀನಾಳಿಗೆ ಕಂಬನಿಯ ವಿದಾಯ. ■



ಆಚಾರ್ಯರ ಬ್ಲಾಗ್ ಸ್ಪಾಟ್

ಗೃಹಸಚಿವರೂ ಮತ್ತು ನಕ್ಸಲ್ ಹೋರಾಟವೂ!

ರಾಜ್ಯದ ಗೃಹ ಸಚಿವ ವಿ.ಎಸ್.ಆಚಾರ್ಯಗೆ ಮಲೆನಾಡಿನಲ್ಲಿ ನಕ್ಸಲ್ ಚಳವಳಿ ಏಕೆ ಆರಂಭವಾಗಿದೆ ಎಂಬ ಸತ್ಯ ಕೊನೆಗೂ ಗೊತ್ತಾಗಿದೆ. ಅವರನ್ನು ಯಾರು ಬೆಂಬಲಿಸುತ್ತಿದ್ದಾರೆ ಎಂಬ ಮಾಹಿತಿಯೂ ಅವರ ಬಳಿ ಇದೆ! ಆದರೆ ಇದನ್ನು ಬಹಿರಂಗಪಡಿಸಬಾರದೆಂಬ ಕಾರಣಕ್ಕೆ ಅವರು ಸುಮ್ಮನಿದ್ದಾರೆ! ಇದು ಸತ್ಯ, ನಮ್ಮನ್ನು ನಂಬಿ ಪ್ಲೀಸ್...!

ಈ ಜ್ಞಾನೋದಯವಾದ ನಂತರ ಗೃಹಸಚಿವರು ಹೋದಲ್ಲಿ, ಬಂದಲ್ಲಿ 'ನಕ್ಸಲ್ ಚಟುವಟಿಕೆಯ ಹಿಂದೆ ಕಾಣದ ಕೈಗಳ ಷಡ್ಯಂತ್ರವಿದೆ', 'ಕೆಲ ಪಟ್ಟಭದ್ರ ಹಿತಾಸಕ್ತಿಗಳು ನಕ್ಸಲರನ್ನು ಬೆಂಬಲಿಸುತ್ತಿದ್ದಾರೆ', 'ನಕ್ಸಲರು ಏಕೆ ಹಿಂಸಾಚಾರ ನಡೆಸುತ್ತಿದ್ದಾರೆ ಎಂಬುದು ಗೊತ್ತಾಗಿದೆ' ಎಂಬಂತಹ ಹೇಳಿಕೆಗಳನ್ನು ನೀಡುತ್ತಿದ್ದಾರೆ.

ಆದರೆ ಆಚಾರ್ಯರು ಹೇಳುತ್ತಿರುವ 'ಪಟ್ಟಭದ್ರರು', 'ಕಾಣದ ಕೈಗಳು', 'ಹೋರಾಟದ ಉದ್ದೇಶಗಳು' ಯಾವುದೆಂದು ನಿಮಗೆ ಗೊತ್ತಾದರೆ ನೀವು ಖಂಡಿತವಾಗಿಯೂ ಬಿದ್ದೂ ಬಿದ್ದು ನಗುತ್ತೀರಿ. ಆಚಾರ್ಯರು ನಕ್ಸಲರ ಬಗೆಗಿನ ತಮ್ಮ ತಿಳುವಳಿಕೆಯನ್ನು ತಮ್ಮ ಬ್ಲಾಗ್‌ನಲ್ಲಿ ಬಹಿರಂಗಪಡಿಸಿದ್ದಾರೆ. ಕುತೂಹಲವಿದ್ದರೆ http://drvsacharya.blogspot.com ಭೇಟಿ ನೀಡಿ, ಅಲ್ಲಿರುವ ಹಾಸ್ಯ ಲೇಖನಗಳನ್ನು ಓದಬಹುದು!

ಮಾನ್ಯ ಗೃಹಸಚಿವರು ನವೆಂಬರ್ 19ರಂದು ತಮ್ಮ ಬ್ಲಾಗ್‌ನಲ್ಲಿ ಹೀಗೆ ದಾಖಲಿಸಿದ್ದಾರೆ: "ಸ್ವರ್ಗದಂತಹ ಹವಮಾನ, ಫಲವತ್ತಾದ ಭೂಮಿ, ಹಚ್ಚ ಹಸಿರು ಕಾಡು ಹೊಂದಿರುವ ಈ ಮಲೆನಾಡಿನ ವೈಭವ ಇನ್ನೆಷ್ಟು ದಿನ? ಇಲ್ಲಿಯ ನೆಲ ಕಬಳಿಸಲು, ಅದರ ಬೆಲೆ ತಗ್ಗಿಸಲು ಏನು ಸಂಚು ನಡೆಯುತ್ತಿದೆ? ಯಾವುದೋ ಸಿದ್ಧಾಂತದ ಹೆಸರಿನಲ್ಲಿ ಪುಂಡರು/ಗೂಂಡಾಗಳು ಏನೇನು ಅನಾಚಾರ ಮಾಡುತ್ತಿದ್ದಾರೆ? ಅವರಿಗೆ ಬೆಂಬಲವಾಗಿ ನಿಂತ ಅದೇ ಸಿದ್ಧಾಂತದ ನಾಡ ಬುದ್ಧಿಜೀವಿಗಳು ಯಾರು? ಈ ನೆಲದ ಹಲವಾರು ಭಾಗ ರಬ್ಬರ್ ಬೆಳೆಯುವ ಕೇರಳಿಗರಿಗೆ ಕಡಿಮೆ ದರದಲ್ಲಿ ಹೇಗೆ ಸಿಕ್ಕಿತು? ವರದಿ ನಿರೀಕ್ಷಿಸಿ..."

ಇದನ್ನು ಓದಿ ಆಚಾರ್ಯರು ಏನೋ ಮಹತ್ವದ ವಿಷಯ ಹೇಳಲಿದ್ದಾರೆ ಎಂಬ ಕುತೂಹಲದಿಂದ ಮಾರನೇ ದಿನ ಅವರ ಬ್ಲಾಗ್ ಹೊಕ್ಕವರಿಗೆ ಕಂಡಿದ್ದು 'ವಿಜಯ ಕರ್ನಾಟಕ' ಪತ್ರಿಕೆ ಪ್ರಕಟಿಸಿದ್ದ 'ಪಶ್ಚಿಮ ಘಟ್ಟ ತಪ್ಪಲಿಗೆ ಕೇರಳಿಗರ ಲಗ್ಗೆ!' ಎಂಬ ತಲೆಬುಡವಿಲ್ಲದ ವರದಿ!

ಮಲೆನಾಡು ಭಾಗದಲ್ಲಿ ಈಗ ಕೃಷಿಕಾರ್ಮಿಕರ ಸಮಸ್ಯೆ ಅತಿಯಾಗಿದೆ. ಹೀಗಾಗಿ ಜಮೀನುಗಳನ್ನು ನಿಭಾಯಿಸಲಾಗದೆ ಅವುಗಳನ್ನು ಮಾರುವವರ ಸಂಖ್ಯೆ ಕೂಡ ಹೆಚ್ಚಿದೆ. ಸಹಜವಾಗಿಯೇ ಹತ್ತಿರವೇ ಇರುವ ಕೇರಳದವರು ಇಲ್ಲಿನ ಭೂಮಿಯನ್ನು ಕೊಳ್ಳುತ್ತಿದ್ದಾರೆ. ಇದರ ಬಗ್ಗೆ ವಿ.ಕ ಪ್ರಕಟಿಸಿದ 'ತನಿಖಾ ವರದಿ' ಮಾತ್ರ ಈ ಬೆಳವಣಿಗೆಗಳಿಗೂ, ನಕ್ಸಲರಿಗೂ ತಲೆಬುಡವಿಲ್ಲದಂತೆ ಲಿಂಕ್ ಕಲ್ಪಿಸಿದೆ. ಈ ಕಾಲ್ಪನಿಕ 'ತನಿಖಾ' ವರದಿಯ ಪ್ರಕಾರ: ನಕ್ಸಲ್ ಚಟುವಟಿಕೆಯನ್ನು ನಡೆಸುತ್ತಿರುವವರೇ ಕೇರಳದವರು. ಅವರು ಅಲ್ಲಿ ಸಶಸ್ತ್ರ ಹೋರಾಟ ನಡೆಸುತ್ತಿರುವುದು ಈ ಭಾಗದಲ್ಲಿ ಭೂಮಿಯ ಬೆಲೆ ಕಡಿಮೆಯಾಗಲಿ ಎಂದು ಕುತಂತ್ರದಿಂದ! ಅಂದರೆ ಅವರೆಲ್ಲ ಸಾಮಾಜಿಕ ಹೋರಾಟ ಮಾಡುತ್ತಿಲ್ಲ ಬದಲಾಗಿ ರಿಯಲ್ ಎಸ್ಟೇಟ್ ಡೀಲರ್‌ಗಳ ಪರವಾಗಿ ಗನ್‌ಗಳನ್ನು ಕೈಗೆತ್ತಿಕೊಂಡಿದ್ದಾರೆ! ಇದನ್ನೇ ಮಾನ್ಯ ಗೃಹ ಸಚಿವರು ಸತ್ಯವೆಂದು ಭಾವಿಸಿ ಅದನ್ನು ತಮ್ಮ ಬ್ಲಾಗ್‌ನಲ್ಲಿ ಅಂಟಿಸಿದ್ದಾರೆ.

ವಿ.ಕ.ದ ಈ ವರದಿಯೊಂದಿಗೆ ಆಚಾರ್ಯರು ಒಂದು ಟಿಪ್ಪಣಿ ಬರೆದಿದ್ದಾರೆ. ಅದು ಹೀಗಿದೆ: "ಡೋಂಗಿ ನಕ್ಸಲರಿಂದ ಭೂಕಬಳಿಕೆ ಮಾಡುವವರಿಗೆ, ಕೇರಳದಿಂದ ಬಂದು ಕಾಡು ಕಡಿದು ರಬ್ಬರ್ ತೋಟ ಮಾಡುವ ವ್ಯಕ್ತಿಗಳಿಗೆ ಮಾತ್ರ ಉಪಕಾರ... ಅಂದರೆ... ನಕ್ಸಲ್ ಗುಮ್ಮ ಹುಟ್ಟಿಸಿ ಭೂಮಿಯ ಬೆಲೆ ತಗ್ಗಿಸುವ ಹುನ್ನಾರ... ಈ ಆಘಾತಕಾರಿ ಸುದ್ದಿ ವಿಜಯ ಕರ್ನಾಟಕದಲ್ಲಿ ಪ್ರಕಟವಾಗಿದೆ . ... ಬೊಬ್ಬಿಡುವ ಬುದ್ಧಿಜೀವಿಗಳು/ ಪರಿಸರವಾದಿಗಳು ಈಗ ಎಲ್ಲಿದ್ದಾರೆ?"

ಈ ಟಿಪ್ಪಣಿ ಓದಿ ನಗಬೇಕೋ-ಅಳಬೇಕೋ ನೀವೇ ಹೇಳಿ!

ಈ ತಮಾಷೆ ಇಲ್ಲಿಗೇ ನಿಲ್ಲುವುದಿಲ್ಲ, ಆಚಾರ್ಯರು ಮಾನವ ಹಕ್ಕು ಹೋರಾಟಗಾರರನ್ನು 'ನಾಡ ನಕ್ಸಲರು' ಎಂದು ಕರೆದಿದ್ದಾರೆ. "ಕೆಲವು ಮಾಧ್ಯಮಗಳಿಗೆ ನಕ್ಸಲ್ ಹೆಸರು ಕೇಳಿದೊಡನೆ ಮೈಪುಳಕ... ಪುಟಗಟ್ಟಲೆ ಅವರ ಬಗ್ಗೆ ಬರೆದು, ಈ ಪೊಳ್ಳು ಸಿದ್ಧಾಂತಕ್ಕೆ ಪುಕ್ಕಟೆ ಪ್ರಚಾರ ನೀಡುತ್ತಾರೆ... (ಅವರನ್ನು, ಸ್ವಘೋಷಿತ ಮಾನವ ಹಕ್ಕು ಪ್ರತಿಪಾದಕರನ್ನು, ನಕ್ಸಲ್ ಪರ ಬುದ್ಧಿ ಜೀವಿಗಳನ್ನು ನಾಡ ನಕ್ಸಲರು ಎಂದು ಕರೆಯಬಹುದು!) ಈ ನಕ್ಸಲರು ಸಮಾಜಕ್ಕೆ ಏನು ಸಹಾಯ ಮಾಡಿದ್ದಾರೆ? ಹಾಗಾಗಿ ಈ ಸಮಾಜ ದ್ರೋಹಿಗಳನ್ನು ಶಸ್ತ್ರಸಹಿತ ಪುಂಡರು ಎಂದು ಕರೆಯಬೇಕಾಗುತ್ತದೆ!" ಎಂದೆಲ್ಲಾ ತಮ್ಮ ವಾದ ಮಂಡಿಸಿದ್ದಾರೆ. ಮೊನ್ನೆ ನಡೆದ ಎನ್‌ಕೌಂಟರ್ ಬಗ್ಗೆ ತನಿಖೆ ನಡೆಯಲಿ ಎಂದು ಒತ್ತಾಯಿಸಿದ ಮಾಜಿ ಸಚಿವೆ ಬಿ.ಟಿ. ಲಲಿತಾನಾಯಕ್ ಕೂಡ ಆಚಾರ್ಯರ ಪ್ರಕಾರ 'ನಾಡ ನಕ್ಸಲ'ರಂತೆ!


ವಿ.ಎಸ್. ಆಚಾರ್ಯ

ಬೆಂಗಳೂರಿನಲ್ಲಿ ಸರಣಿ ಬಾಂಬ್ ಸ್ಫೋಟಗೊಂಡಾಗ, ರಾಜ್ಯಾದ್ಯಂತ ಚರ್ಚುಗಳ ಮೇಲೆ ದಾಳಿ ನಡೆದಾಗ ಗೃಹ ಸಚಿವರು ತಮ್ಮ ಬ್ಲಾಗ್‌ನಲ್ಲಿ ಹೇಗೆ ಪ್ರತಿಕ್ರಿಯಿಸಿದ್ದಾರೆ ಎಂಬದುನ್ನು ಹೇಳುತ್ತಾ ಹೋದರೆ ಅವರ ಮೂರ್ಖತನ ಅನಾವರಣಗೊಳ್ಳುತ್ತಾ ಹೋಗುತ್ತದೆ.

ರಾಜ್ಯದ ಗೃಹ ಸಚಿವರಾದ ಆಚಾರ್ಯರನ್ನು ಪೆದ್ದರೆನ್ನಬೇಕೋ, ದಡ್ಡರೆನ್ನಬೇಕೋ ಗೊತ್ತಾಗುತ್ತಿಲ್ಲ.

ಅಂದಹಾಗೆ ಈ ಬ್ಲಾಗ್ ತಮ್ಮ ಖಾಸಗಿ ಬ್ಲಾಗ್ ಎಂದು ಆಚಾರ್ಯ ಹೇಳುತ್ತಾರೆ. ಆದರೆ ಸರ್ಕಾರದ ಲಾಂಛನವನ್ನು ಬ್ಲಾಗ್ ಮೇಲುಗಡೆ ಬಳಸಿದ್ದಾರೆ. ಹೀಗಾಗಿ ಸಚಿವರು ಸರ್ಕಾರದ ಅಭಿಪ್ರಾಯವನ್ನು ಈ ಬ್ಲಾಗ್‌ನಲ್ಲಿ ಹೇಳುತ್ತಿದ್ದಾರೋ ಅಥವಾ ತಮ್ಮ ಅಜ್ಞಾನವನ್ನು ಮಾತ್ರ ಬಹಿರಂಗಪಡಿಸುತ್ತಿದ್ದಾರೋ ಎಂಬುದನ್ನು ಮುಖ್ಯಮಂತ್ರಿ ಯಡಿಯೂರಪ್ಪನವರೇ ಸ್ಪಷ್ಟಪಡಿಸಬೇಕು.

ಕನ್ನಡಪ್ರಭ

ಕನ್ನಡಪ್ರಭ ನಕ್ಸಲರನ್ನು ಬೆಂಬಲಿಸುವ ಪತ್ರಿಕೆಯಂತೆ!

ಹೌದು, ಕನ್ನಡ ಪ್ರಭ ನಕ್ಸಲರನ್ನು ಬೆಂಬಲಿಸುವ ಪತ್ರಿಕೆ ಎಂದು ರಾಜ್ಯದ ಗೃಹ ಸಚಿವ ವಿ.ಎಸ್. ಆಚಾರ್ಯರು ತಮ್ಮ ಬ್ಲಾಗ್‌ನಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ.

"ಈ ಪತ್ರಿಕೆ ರಾಜ್ಯದ ಭಯೋತ್ಪಾದಕರಾದ ನಕ್ಸಲರನ್ನು ಪರೋಕ್ಷವಾಗಿ ಬೆಂಬಲಿಸುವಂತಹ ವರದಿಗಳನ್ನು ಪ್ರಕಟಿಸಿ ಪೊಲೀಸ್ ಪಡೆಗಳ ಧೈರ್ಯ ಕುಂದಿಸುವ ಕೆಲಸವನ್ನು ಮಾಡಿರುವುದನ್ನು ಜನ ಗಮನಿಸಿದ್ದಾರೆ" ಎಂದು ಆಚಾರ್ಯರು ವಿವರಿಸಿದ್ದಾರೆ. ಅಷ್ಟೇ ಅಲ್ಲ "ಈ ಪತ್ರಿಕೆ ತನ್ನ ಸರ್ಕ್ಯುಲೇಶನ್ ಅನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಪತ್ರಿಕಾ ಧರ್ಮವನ್ನೇ ಮರೆಯುವ ಸನ್ನಿವೇಶದಲ್ಲಿದೆ. ಇದು ನಿಜವಾಗಿಯೂ ಕನಿಕರದ ಸಂಗತಿ" ಎಂದು ಆಚಾರ್ಯರು ಹೇಳಿದ್ದಾರೆ.

"ಸರ್ಕಾರದ ವಿರುದ್ಧ ಉದ್ರೇಕಕಾರಿ ವರದಿಗಳನ್ನು ಪ್ರಕಟಿಸುವುದರ ಮೂಕ ದೇಶ ದ್ರೋಹಿ ಭಯೋತ್ಪಾದಕರ 'ಪ್ರಾಪಗಾಂಡಾ'ವೆಂಬ ಹೊಂಡಕ್ಕೆ ಬೀಳುತ್ತಿರುವ ಅರಿವು ಕನ್ನಡಪ್ರಭಕ್ಕೆ ಇದ್ದಂತಿಲ್ಲ, ಜನರು ಮತ್ತು ಸರ್ಕಾರದ ನಡುವೆ ಇಲ್ಲದ ಕಂದಕ ತೋಡಿ ಪರೋಕ್ಷವಾಗಿ ಭಯೋತ್ಪಾದಕರ ಕೆಲಸವನ್ನು ಇಂತಹ ಗಂಭೀರ ಪರಿಸ್ಥಿತಿಯಲ್ಲಿ ಕೆಲ ಮಾಧ್ಯಮಗಳು ಮಾಡುತ್ತಿರುವುದು ಬೇಸರದ ಸಂಗತಿ. ಸರ್ಕಾರದ ವಿರುದ್ಧ ಜನರನ್ನು ಎತ್ತಿ ಕಟ್ಟಿ ಸಂಶಯದ ವಾತಾವರಣವನ್ನುಂಟುಮಾಡುವುದು ಆಧುನಿಕ ಭಯೋತ್ಪಾದನೆಯ ಇನ್ನೊಂದು ಮುಖ" ಎಂದು ಆಚಾರ್ಯರು ಕನ್ನಡಪ್ರಭಕ್ಕೆ ಬುದ್ಧಿಮಾತು ಹೇಳಿದ್ದಾರೆ.

ಅಂದಹಾಗೆ ಕನ್ನಡಪ್ರಭದ ಮೇಲೇಕೆ ಸಚಿವರಿಗೆ ಇಷ್ಟೊಂದು ಸಿಟ್ಟು ಗೊತ್ತಾ? ಅವರನ್ನು ಕನ್ನಡ ಪ್ರಭ ಟೀಕಿಸಿದ್ದಕ್ಕೆ ಅವರು ತಮ್ಮ ಬ್ಲಾಗ್‌ನಲ್ಲಿ ಆ ಪತ್ರಿಕೆಯನ್ನು ಹಿಗ್ಗಾ-ಮುಗ್ಗಾ ತರಾಟೆಗೆ ತೆಗೆದುಕೊಂಡಿದ್ದಾರೆ. ರಾಜ್ಯದ ಗೃಹಖಾತೆ ತರಹದ ಜವಾಬ್ದಾರಿಯುತ ಇಲಾಖೆಯ ಹೊಣೆಹೊತ್ತಿರುವ ಮನುಷ್ಯನೊಬ್ಬ ಈ ನಾಡಿನ ಪ್ರತಿಷ್ಠಿತ ದಿನಪತ್ರಿಕೆಯೊಂದರ ಮೇಲೆ ಈ ರೀತಿಯ ಆರೋಪ ಮಾಡಿರುವುದು ಇದೇ ಮೊದಲು!

...ಕ್ಕಮಗಳೂರು:

ಪಿ.ಎಸ್.ಐ ನಾಗೇಗೌಡನ ಲಂಚಾವತಾರ!



...ಮೂಡಿಗೆರೆ ತಾಲ್ಲೂಕಿನ ಗೋಣಿಬೀಡು ಪೊಲೀಸ್ ...ಣೆಯ ಸಬ್‌ಇನ್ಸ್‌ಪೆಕ್ಟರ್ ಎನ್.ಸಿ.ನಾಗೇಗೌಡನ ಅಸಲಿ ...ಮುಖದು.

...ಗೋಣಿಬೀಡಿಗೆ ಹತ್ತಿರದ ಮರಬ್ಬೈಲು ನಿವಾಸಿ ...ರ್ಣೇಶ್ ಎಂಬುವವರ ಬೈಕ್ ಅಪಘಾತದ ಹಿನ್ನೆಲೆಯಲ್ಲಿ ...ಚದ ಹಣ ಪಡೆಯುತ್ತಿದ್ದಾಗ ಲೋಕಾಯುಕ್ತ ಪೊಲೀಸರ ...ಗೆ ಬಿದ್ದು ಜೈಲು ಸೇರಿ ಈಗ ಹೊರಬಂದು ತನ್ನ ...ಯುತ್ತ ಹೆಜ್ಜೆಯಿಟ್ಟಿದ್ದಾನೆ.

...ಎರಡು ವರ್ಷಗಳ ಹಿಂದೆ ಗೋಣಿಬೀಡು ಠಾಣೆಯಿಂದ ...ರ್ಗಾವಣೆಯಾದ ವೆಂಕಟೇಶ್ ಎಂಬ ಹಲಸಿನಕಾಯಿಯ ...ಕ್ಕೆ ಈ ನಾಗೇಗೌಡ ಬಂದು ವಕ್ಕರಿಸಿದ್ದ. ಇಲಾಖೆಯ ... ನೇಮಕಾತಿಯಡಿ ಪಿ.ಎಸ್.ಐ. ಆಗಿದ್ದ. ಇದಕ್ಕೂ ...ಂಚೆ ಮೈಸೂರಿನ ಠಾಣೆಯೊಂದರಲ್ಲಿ ಕೆಲಸ ...ಡಿಕೊಂಡಿದ್ದ. ಅಲ್ಲಿನ ಜನರನ್ನು ಸುಲಿಯತೊಡಗಿದ್ದ ... ನಾಗೇಗೌಡನ ವಿಷಯ ತಿಳಿದ ಮಾಜಿ ...ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಈತನನ್ನು ಅಲ್ಲಿಂದ ...ಸಿದ್ದರು. ಅಲ್ಲಿಂದ ಬಂದವನಿಗೆ ಆಸರೆ ನೀಡಿದ್ದೇ ...ಣಿಬೀಡು ಆರಕ್ಷಕ ಠಾಣೆ. ನಂತರ ಈತನಿದ್ದ ಎರಡು ...ರ್ಷಗಳ ಕಾಲ ಈ ಠಾಣಾವ್ಯಾಪ್ತಿಯ ಜನರನ್ನು ...ರಮಟ್ಟಿಗೆ ಈತ ಸುಲಿದಿದ್ದಾನೆಂದು ವಿವರಿಸುವುದೂ ...

...ಪಿ.ಎಸ್.ಐ.ಯೊಬ್ಬ ಮಾಡಬಾರದ ಎಲ್ಲಾ ...ಲುಕೋರ ದಂಧೆಗಳನ್ನೂ ಈತ ಮಾಡಿಮುಗಿಸಿದ್ದಾನೆ. ...ನು ಕಟ್ಟಳೆಗಳನ್ನು ಬದಿಗಿಟ್ಟು, ನ್ಯಾಯಾಲಯದ ಮುಂದೆ ...ಡಬೇಕಾದ ಪ್ರಕರಣಗಳನ್ನು ಮೂಲೆಗೆಸೆದು ಹೆಣದ ...ಂದಲೂ ಹಣವನ್ನು ಎತ್ತಿಕೊಂಡಿದ್ದಾನೆ. ದೂರುದಾರರು, ...ರುದಾರರು, ಆರೋಪಿಗಳಿಂದ ಹಿಡಿದು ವರ್ತಕರು, ...ನ ಚಾಲಕರು, ಮಾಲಿಕರು, ಕಳ್ಳರು, ದರೋಡೆಕೋರರು, ...ಕರು, ಸುಲಿಗೆಕೋರರು ಹೀಗೆ ಕೈಗೆ ಸಿಕ್ಕ ಯಾರನ್ನೂ ...ದೆ ದೋಚಿಕೊಳ್ಳುವುದು ನಾಗೇಗೌಡನ ನಿತ್ಯಕಾಯಕ.

...1992ರಲ್ಲಿ ಗೋಣಿಬೀಡು ಹೋಬಳಿ ಭಾಗಕ್ಕೆ ...ಲೀಸ್ ಠಾಣೆ ಬಂತು. ಅಂದಿನಿಂದ ಇಂದಿನವರೆಗೆ ...ಹಾಕಿದರೆ ಹತ್ತು ಮಂದಿ ಪಿ.ಎಸ್.ಐ.ಗಳು ...ರ್ಯನಿರ್ವಹಿಸಿದ್ದಾರೆ. ಹಿಂದಿನ ಯಾವ ...ಇನ್ಸ್‌ಪೆಕ್ಟರ್‌ಗೂ ಇಲ್ಲದಿದ್ದಂತ ನೀಚಗುಣ, ದುರ್ಬುದ್ಧಿ ... ನಾಗೇಗೌಡನದ್ದು. ವಸೂಲಿ ದಂಧೆಯಲ್ಲಿ ಮಹಾ ...ಣನಾದ ಈತ ಠಾಣೆಯೊಳಗೆ ಒಡೆದು ಆಳುವ ...ಯನ್ನೂ ಅನುಸರಿಸಿದ್ದಾನೆ. ಕಾನ್ಸ್‌ಟೇಬಲ್‌ಗಳೇ ಪರಸ್ಪರ ...ಡುವಂತೆ ಮಾಡುತ್ತಾನೆ. ಒಮ್ಮೆಯಂತೂ ಈತನ ...ರ್ತನ್ನಕ್ಕೆ ರೋಸಿಹೋದ ಹೆಡ್‌ಕಾನ್ಸ್‌ಟೇಬಲ್ ಒಬ್ಬರು ...ಗೇಗೌಡನ ಕೊರಳ ಪಟ್ಟಿ ಹಿಡಿದು ಬಡಿದಿದ್ದರೆಂದರೆ ...ನ ದೌರ್ಜನ್ಯದ ಪರಿ ಹೇಗಿದೆ ಎಂಬುದನ್ನು ನೀವೇ ...ೀಚಿಸಿ.

...ಕಮ್ಮರಗೋಡು ಎಸ್ಟೇಟ್‌ನಲ್ಲಿ ನಾಚಪ್ಪ ಎಂಬ ರೈಟರ್ ...ಯೊಂದನ್ನು ಬೇಟೆಯಾಡಿದ ವಿಷಯ ತಿಳಿಯುತ್ತಿದ್ದಂತೆ, ...ಪ್ಪರನ್ನು ಠಾಣೆಗೆ ಕರೆತಂದು ಹೆದರಿಸತೊಡಗಿದ್ದ "ಸಲ್ಮಾನ್ ...ನ್ ಜಿಂಕೆ ಬೇಟೆಯಾಡಿದ ಕೇಸಿನಲ್ಲಿ ಜೈಲಿಗೆ ...ಗಿದ್ದಾನೆ. ಜಿಂಕೆ ಬೇಟೆಯಾಡಿದರೆ ಹತ್ತು ವರ್ಷಗಳ ... ಶಿಕ್ಷೆಯಾಗುತ್ತೆ, ಸುಮ್ಮನೆ ಇದ್ದರೆ ನಿಮಗೂ ಅದೇ ...ಯಾಗುತ್ತದೆ. 50 ಸಾವಿರ ಕೊಟ್ಟರೆ ಏನಾದರೂ ...ಡುತ್ತೇನೆ" ಎಂದು ಬೆದರಿಸಿದ್ದ. ಈ ಪೀಡೆ ಹೇಗಾದರೂ ...ಗಲಿ ಅಂದುಕೊಂಡಿದ್ದರು ನಾಚಪ್ಪ. ಈ ಎರಡು ...ರಣಗಳಲ್ಲಿ ತಲಾ ಇಪ್ಪತ್ತೈದು ಸಾವಿರಕ್ಕೆ ವ್ಯವಹಾರ ...ದುರಿಸಿಕೊಂಡು ಕೇಸ್ ಖಲಾಸ್ ಮಾಡಿದ್ದಾನೆ.

...ಇದೇ ವರ್ಷದ ಅಕ್ಟೋಬರ್ 2ನೇ ತಾರೀಖು ...ಧಿಯ ಜನ್ಮದಿನದಂದು ಕಬ್ಬಿಣದ ಅದಿರು ಸಾಗಾಟ ...ಡುತ್ತಿದ್ದ ವಾಹನ (ಕೆ.ಎ. 20, ಎ 6505) ಜನ್ನಾಪುರದ ... ತಪಾಸಣೆಗೆಂದು ತಡೆದು ನಿಲ್ಲಿಸಿ ಚಾಲಕನನ್ನು ಗೋಳು ...ಯ್ದುಕೊಂಡಿದ್ದ "ಅಕ್ರಮವಾಗಿ ಅದಿರು ಸಾಗಿಸುತ್ತಿದ್ದೀಯ. ...ಮೋ. ಹಣ ಕೊಟ್ಟು ಹೋಗು ಇಲ್ಲವೇ ಸ್ಟೇಷನ್‌ಗೆ ..." ಎಂದಿದ್ದ. ಚಾಲಕ ಕೈಕಾಲು ಹಿಡಿದು ಬೇಡಿಕೊಂಡರೂ ...ದೆ ಜೇಬಲ್ಲೆಲ್ಲಾ ತಡಕಾಡಿ 1400 ರೂ.ಗಳನ್ನು ...ಕೊಂಡಿದ್ದ. ಅಷ್ಟರಲ್ಲಿ ಸ್ಥಳೀಯರು ಅಲ್ಲಿ ಜಮಾಯಿಸಿದ್ದರು. ...ಸು ಪರಿಸ್ಥಿತಿ ಕೈಮೀರಿ ಹೋಗಬಹುದು ಎಂದು ...ಟಿಸ್ ಬರೆದು ಕೈಗಿಟ್ಟು ಹೋಗಿದ್ದ. ಹತ್ತು ತಿಂಗಳ ... ಆ ಲಾರಿ ಅಲ್ಲೇ ಉಳಿದಿತ್ತು. ಅದರಿಂದ ಅದಿರು ...ಸವಾಗಿತ್ತೆಂದು ಲಾರಿ ಮಾಲಿಕ ಕುಂದಾಪುರ ಗ್ರಾಮದ ... ಎಂಬಾತ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ...ಲೀಸ್ ವಶದಲ್ಲಿರುವಾಗ ಕಳ್ಳತನವಾಗಿರುವುದಕ್ಕೆ ...ಣಿಜೇನು ಎಂದು ತನಿಖೆ ನಡೆಸಲು ಡಿವೈಎಸ್ಪಿ ...ಪ್ರಸಾದಯ್ಯನವರನ್ನು ಕಳಿಸಲಾಯಿತು. ಈ ...ಪ್ರಸಾದಯ್ಯನೇನು ಕಡಿಮೆ ಕುಂಗ್ಗನೇನಲ್ಲ, ತನಿಖೆ ...ನಿಲು ಹೋದಾತ ನಾಗೇಗೌಡನಿಂದ ಪ್ರಸಾದ ಸ್ವೀಕರಿಸಿ

ದೂರಿನ ದಿಕ್ಕನ್ನೇ ತಪ್ಪಿಸಿದ್ದ. ನಂತರ ಅದಿರು ಕಳ್ಳರನ್ನು ಹಿಡಿದು ಬಣಕಲ್ ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದರು. ಆಗ ಹುಸೇನ್ ಎಂಬುವವನ ಮಗ ಹಿರಿಯ ಅಧಿಕಾರಿಗಳ ಮುಂದೆ "ನಾವು ಅದಿರನ್ನು ಕದ್ದಿಲ್ಲ. ಎಸ್.ಐ. ನಾಗೇಗೌಡನೇ ಖುದ್ದಾಗಿ ನಿಂತು ನಮಗೆ ಮಾರಾಟ ಮಾಡಿದ್ದಾನೆ. ನಾವು ಹಣ ಕೊಟ್ಟು ಅದಿರನ್ನು ಕೊಂಡುಕೊಂಡಿದ್ದೇವೆ" ಅಂತ ಹೇಳಿಕೊಂಡಿದ್ದ. ಆದರೂ ಹಿರಿಯ ಅಧಿಕಾರಿಗಳು ನಾಗೇಗೌಡನನ್ನು ರಕ್ಷಿಸಿ ಅಮಾಯಕರನ್ನು ಜೈಲಿಗಟ್ಟಿದ್ದರು.

ಇತ್ತೀಚೆಗೆ ಹೊಸಳ್ಳಿ ಎಂಬಲ್ಲಿನ ನಿವಾಸಿಯೊಬ್ಬರ ಮನೆಗೆ ಹೋಗಿದ್ದ ನಾಗೇಗೌಡ ಪ್ರಕರಣದ ಆರೋಪಿಯೊಬ್ಬನನ್ನು ಹಿಡಿದು ತರಬೇಕಿತ್ತು. ಅದೇ ದಿನ ಆರೋಪಿಯ ತಂದೆ ತೀರಿಕೊಂಡಿದ್ದರು. ಆದರೂ ಅಲ್ಲಿಂದ ಕದಲದ ನಾಗೇಗೌಡ ಆರೋಪಿಯ ಬಳಿ ಹಣ ಕೊಡುವಂತೆ ಸತಾಯಿಸತೊಡಗಿದ. ತೀರ ಬಡತನದ ಬೇಗೆಯಿಂದ ಬಸವಳಿದು ಬಂದಿದ್ದ ಹುಡುಗ ಹೆಣದ ಕೈಯಿಂದ ಚಿಲ್ಲರೆ ಹಣ ಸಂಗ್ರಹಿಸಿ ನೂರು ರೂ.ಗಳನ್ನು ತುರುಕಿದ ಮೇಲೆಯೇ ಅಲ್ಲಿಂದ ಕದಲಿದ್ದು.

ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಮೂಡಿಗೆರೆ ಶಾಖೆಯಲ್ಲಿ ಪಿ. ಎಸ್.ಐ ಅಕೌಂಟ್ ಸಂಖ್ಯೆ **5402608486-6** ನಂಬರಿನಿಂದ ಹುಣಸೂರು ಶಾಖೆಯ ತನ್ನ ಸ್ವಂತ ಖಾತೆ **0540139628087** ಗೆ **16-2-07**ರಿಂದ **6-10-07**ರವರೆಗೆ **1700** ರಿಂದ **60** ಸಾವಿರದವರೆಗೆ ತಿಂಗಳಿಗೆ ಮೂರ್ನಾಲ್ಕು ಬಾರಿಯಂತೆ ಹಣ ಜಮಾ ಮಾಡಿಸಿರುವ ದಾಖಲೆಗಳಿವೆ.

ಈತ ಲೋಕಾಯುಕ್ತರ ಬಲೆಗೆ ಬೀಳಲು ಗೋಣಿಬೀಡು ಸಮೀಪದ ಮರಬ್ಬೈಲು ನಿವಾಸಿ ಪೂರ್ಣೇಶ ಎಂಬುವವರ ಬೈಕ್ ಅಪಘಾತವೇ ಕಾರಣವಾಯಿತು. ಬೈಕನ್ನು ವಾಪಾಸ್ ಬಿಡಿಸಿಕೊಂಡು 5 ಸಾವಿರಕ್ಕೆ ದುಂಬಾಲು ಬಿದ್ದ ನಾಗೇಗೌಡನಿಗೆ ತನಗದು ಕಟ್ಟಕಡೆಯ ಅವಕಾಶವೆಂದು ತಿಳಿದಿರಲಿಲ್ಲ. ಪೂರ್ಣೇಶ್ ಅಷ್ಟೊಂದು ಹಣ ಕೊಡಲು ಸಾಧ್ಯವಿಲ್ಲವೆಂದಾಗ 5 ಕಂತುಗಳಲ್ಲಿ ಕೊಡುವಂತೆ ಮಾನವೀಯತೆ ತೋರಿಸಿದ! ಅಷ್ಟರಲ್ಲೇ ಪೂರ್ಣೇಶ್ ಒಂದು ಫೋನ್‌ಕರೆ ಮಾಡಿ ಹಾಸನ ವಿಭಾಗದ ಲೋಕಾಯುಕ್ತರನ್ನು ಕರೆಸಿದರು. ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ಕೂಡಲೇ ಬಂದು ತನಿಖೆ ಮಾಡಿದಾಗ ಪೂರ್ಣೇಶ್‌ರಿಂದ ಮೊದಲ ಕಂತಿನಂತೆ **1000** ಹಣವನ್ನು ನಾಗೇಗೌಡ ಸ್ವೀಕರಿಸಿರುವುದು ತಿಳಿದುಬಂತು.

ಈ ನಾಗೇಗೌಡ ಸೇವೆಯಲ್ಲಿರುವಷ್ಟು ಕಾಲ ಭಾರೀ ಗುಳುಂ ಮಾಡಿರುವುದು ಮೇಲ್ನೋಟಕ್ಕೇ ಕಾಣುತ್ತದೆ. ಹುಣಸೂರಿನಲ್ಲಿ ಮೂರಂತಸ್ತಿನ ಬಂಗಲೆ, ಬೇನಾಮಿ ಆಸ್ತಿ ಐಶಾರಾಮಿ ಕಾರು, ಟಾಟಾ ಸುಮೋ, ಮೊಬೈಕು ಇದಕ್ಕೆ ಸಾಕ್ಷಿಯಾಗಿ ನಿಂತಿವೆ. ತಿಂಗಳಿಗೊಮ್ಮೆ ಮನೆಗೆ ಹೋಗಿ ಬರುತ್ತಿದ್ದನಾದರೂ ಶಿವಶಂಕರ ಎಂಬ ಪೇದೆಯ ಮೂಲಕ ವಾರಕ್ಕೊಮ್ಮೆ ಹಣದ ಥೈಲಿ ಕಳಿಸುವುದನ್ನು ಮಾತ್ರ ಮರೆಯುತ್ತಿರಲಿಲ್ಲ.

ಇಲ್ಲಿನ ಶಾಸಕ ಎಂ.ಪಿ.ಕುಮಾರಸ್ವಾಮಿಯಿಂದ ಹಿಡಿದ ಎಲ್ಲಾ ಮೇಲಾಧಿಕಾರಿಗಳಿಗೂ ಈತನ ಸುಲಿಗೆ ಪರಿಚಿತವಾಗಿತ್ತು. ಪಶ್ಚಿಮ ವಲಯದ ಐ.ಜಿ.ಪಿ. ಗಮನಕ್ಕೂ ತರಲಾಗಿತ್ತು. ಜನಪ್ರತಿನಿಧಿಗಳು ಕಮಕ್ ಕಿಮಕ್ ಎಂದಿರಲಿಲ್ಲ.

ಈ ಸಲ ನೇರವಾಗಿ ಲೋಕಾಯುಕ್ತರ ಕೈಗೇ ಸಿಕ್ಕಿಬಿದ್ದಿರುವುದರಿಂದ ತನ್ನ ಹುದ್ದೆಯಿಂದ ಅಮಾನತುಗೊಳ್ಳಬೇಕಾದ ಎಲ್ಲಾ ಅರ್ಹತೆಗಳೂ ನಾಗೇಗೌಡನಿಗಿದೆ. ಆದರೂ ಆ ಸ್ಥಾನದಿಂದ ಅಮಾನತುಗೊಳಿಸದಿರುವುದು, ಜನಪ್ರತಿನಿಧಿಗಳೂ ಈ ಬಗ್ಗೆ ಚಕಾರವೆತ್ತದೆ ಸುಮ್ಮನಾಗಿರುವುದು ನೋಡಿದರೆ ಈ ನಾಗೇಗೌಡ ಮತ್ತಷ್ಟು ಕಾಲ ಗೋಣಿಬೀಡು ಠಾಣೆಯಲ್ಲೇ ಇದ್ದು ತನ್ನ ಎಂದಿನ ಕಾರ್ಯವೈಖರಿಯನ್ನು ಮುಂದುವರೆಸುವ ಎಲ್ಲಾ ಲಕ್ಷಣಗಳೂ ಕಾಣುತ್ತಿವೆ.

ಏಕೆಂದರೆ ಲೋಕಾಯುಕ್ತರು ಸರಿಯಾದ ರೀತಿಯಲ್ಲಿ ದಾಳಿ ನಡೆಸಿಲ್ಲ. ಈವರೆಗೆ ನಾಗೇಗೌಡ ಮಾಡಿಕೊಂಡಿರುವ ಹಣ, ಆಸ್ತಿ ಅಂತಸ್ತಿನ ಮೇಲೆ ದಾಳಿ ನಡೆದಿಲ್ಲ. ಬದಲಿಗೆ ಅದರ ವಿವರ ಪಡೆದುಕೊಂಡವರೇ ಆತನನ್ನು ಉಳಿಸಿಕೊಳ್ಳಲು ಕಸರತ್ತು ನಡೆಸಿರುವುದು ಇದರಿಂದ ಸಾಬೀತಾಗುತ್ತಿದೆ.

ಒಂದೆಡೆ ಶಾಸಕ ಎಂ.ಪಿ.ಕುಮಾರಸ್ವಾಮಿ ಈ ಭ್ರಷ್ಟ ಅಧಿಕಾರಿಗೆ ರಕ್ಷಕನಂತೆ ವರ್ತಿಸುತ್ತಿದ್ದಾರೆ. ಮತ್ತೊಂದೆಡೆ ಹಿರಿಯ ಅಧಿಕಾರಿಗಳು ಏನೂ ಆಗಿಲ್ಲವೆಂಬಂತೆ ಕಾನೂನು ಕ್ರಮ ಕೈಗೊಳ್ಳಲು ಮೀನಾಮೇಷ ಎಣಿಸುತ್ತಿದ್ದಾರೆ. ಒಟ್ಟಾರೆ ಈ ಭಕ್ಷಣವು ಯಥೇಚ್ಛ ಪ್ರಮಾಣದ್ದೇ ಆಗಿದೆ ಎಂಬುದರಲ್ಲಿ ಎರಡು ಮಾತಿಲ್ಲ.

■ ಅಜೀಜ್ ಕಿರುಗುಂದ

ಬೆಳಗಾವಿ: ಸೆಕ್ಸ್ ಸಿನಿಮಾಗಳ

ನಗ್ನ ಸಾಮ್ರಾಜ್ಯ

ಬೆಳಗಾವಿಯಲ್ಲೀಗ ಹೊಸದೊಂದು ಚಿತ್ರರಂಗ ಅನಾವರಣಗೊಳ್ಳುತ್ತಿದೆ. ದೇವರ ಚಿತ್ರಗಳೆಂದೇ ಸುಪ್ರಸಿದ್ಧವಾಗಿರುವ ಸೆಕ್ಸ್ ಚಲನಚಿತ್ರಗಳ ಸಿ.ಡಿ. ಹಾಗೂ ಎಂಎಂಎಸ್ ತಯಾರಿಸುವ ಚಿತ್ರೋದ್ಯಮ ಇಲ್ಲಿ ಸ್ಥಾಪನೆಯಾಗುತ್ತಿದೆ. ಈ ಸೆಕ್ಸ್ ಸಿನಿಮಾಗಳಲ್ಲಿ ನಟನೆ ಎಂಬುದೇ ಇಲ್ಲ. ಇರುವುದೆಲ್ಲವೂ ವಾಸ್ತವವೇ. ಆದರೆ ಕಾನೂನು ಬಾಹಿರವಾಗಿ ನಡೆಯುತ್ತಿರುವ ಇಂಥ ದಂಧೆಯೊಂದನ್ನು ಮಟ್ಟ ಹಾಕುವುದಕ್ಕೆ ಪೊಲೀಸರು ಪ್ರಯತ್ನಿಸದೇ ಅದರಿಂದ ದುಡ್ಡು ಮಾಡಿಕೊಳ್ಳುವುದಕ್ಕೆ ಪ್ರಯತ್ನಿಸುತ್ತಿರುವುದು ದುರಂತ. ಪೊಲೀಸರು ಹೇಗೆ ಇಂತಹ ದಂಧೆಯನ್ನು ಬೆಳೆಸುತ್ತಿದ್ದಾರೆಂಬುದಕ್ಕೆ ಒಂದು ಉದಾಹರಣೆ ನೋಡಿ.

ಈ ಹಿಂದೆ, ಶ್ರೀಮಂತ ವ್ಯಾಪಾರಿ ಮನೆತನದ ಹುಡುಗನೊಬ್ಬ ಶಾಸ್ತ್ರೀನಗರದ ತನ್ನ ಪ್ರೇಯಸಿಯೊಂದಿಗೆ ನಗರದ ಪ್ರತಿಷ್ಠಿತ ಹೋಟೇಲ್ ಒಂದರಲ್ಲಿ ನಡೆಸಿದ ಕಾಮಕೇಳಿಯ ಎಲ್ಲಾ ದೃಶ್ಯಗಳನ್ನೂ ವಿಡಿಯೋ ಚಿತ್ರಕರಣ ಮಾಡಿಕೊಂಡು ಅದನ್ನು ಮೊಬೈಲ್ ಎಂ.ಎಂ.ಎಸ್. ಹಾಗೂ ಬ್ಲೂಟೂಥ್ ಮೂಲಕ ತನ್ನ ಸ್ನೇಹಿತರಿಗೆ ಕಳುಹಿಸಿದ್ದ. ಈ ವಿಷಯ ಹುಡುಗಿಯ ಪಾಲಕರಿಗೆ ತಿಳಿದು ಅದು ಶಹಾಪುರ ಪೊಲೀಸ್ ಠಾಣೆಯ ಕಟ್ಟೆಯನ್ನು ಸಹ ಏರಿತ್ತು. ಇಂತಹದೊಂದು ದೊಡ್ಡ ಪ್ರಕರಣ ಶಹಾಪುರ ಪೊಲೀಸ್‌ರ ಕೈಗೆ ಸಿಕ್ಕಿದ್ದೇ ತಡ, ಅಲ್ಲಿನ ಸಿಪಿಐ ಹಾಗೂ ಇತರೆ ಅಧಿಕಾರಿಗಳು ಆ ಹುಡುಗನನ್ನು ಕರೆತಂದು ಎರಡು ಬಾರಿಸಿ ಜೈಲಿಗಟ್ಟುವ ಬದಲು ಅದನ್ನೇ ಹಣ ದೋಚುವ ದಂಧೆಯನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸಿದರು.



"ಇಡೀ ಪ್ರಕರಣವನ್ನು ಮುಚ್ಚಿ ಹಾಕುತ್ತೇವೆ, ನಮಗಿಷ್ಟು ಹಣ ಕೊಡಿ" ಎಂದು ಲಜ್ಜೆಗೆಟ್ಟು ಹುಡುಗನ ಮನೆಯವರ ಮುಂದೆ ಪ್ರಸ್ತಾಪ ಮಾಡಿದ್ದರು. ಅವರು ಕೇಳಿದ್ದಂತಹ ದೊಡ್ಡ ಮಟ್ಟದ ಹಣವನ್ನು ಹುಡುಗನ ಕಡೆಯವರು ಕೊಡಲಾಗದೇ ಪೊಲೀಸರಿಂದ ತಪ್ಪಿಸಿಕೊಂಡು ಓಡಾಡುತ್ತಿದ್ದರು. ಆದರೆ, ಹಣಕ್ಕಾಗಿ ಪೊಲೀಸರ ಪೀಡನೆ ಮಾತ್ರ ನಿಲ್ಲಲಿಲ್ಲ. ಇದರಿಂದ ಬೇಸತ್ತ ಹುಡುಗನ ಮನೆಯವರು ಹುಡುಗಿಯ ಪಾಲಕರೊಂದಿಗೆ ಮಾತುಕತೆ ಮಾಡಿ ಅವರಿಬ್ಬರಿಗೂ ಮದುವೆ ಮಾಡಿ ಕೈ ತೊಳೆದುಕೊಂಡರು. ಪಾಪ ಶಹಾಪುರ ಪೊಲೀಸರ ಕೈಗೆ ಬಂದ ತುತ್ತು ಮಾತ್ರ ಬಾಯಿಗೆ ಬರಲಿಲ್ಲ!

ಈ ಸೆಕ್ಸ್ ಸ್ಕ್ಯಾಂಡಲ್ ಮುಚ್ಚಿಕೊಳ್ಳುತ್ತಿದ್ದಂತೆಯೇ ಮತ್ತೊಂದು ಸೆಕ್ಸ್ ಸ್ಕ್ಯಾಂಡಲ್ ಬೆಳಕಿಗೆ ಬಂದಿದೆ. ತಮ್ಮ ಕಾಮಕೇಳಿಯ ಚಿತ್ರೀಕರಣ ಮಾಡಿಕೊಂಡು ಸಿಡಿಗಳನ್ನು ತಯಾರಿಸಿ ಕೆಲವೊಂದು ಅಂಗಡಿ ಹಾಗೂ ಯುವಕರಿಗೆ ನೀಡುತ್ತಿದ್ದ ರತಿ-ಮನ್ಮಥರಿಬ್ಬರನ್ನು ಮಂಗಳವಾರದಂದು ಖಡೇಬಜಾರ ಪೊಲೀಸ್‌ರು ಬಂಧಿಸಿದ್ದಾರೆ. ಶಾಸ್ತ್ರೀನಗರದ ಅಸ್ಲಂ ಪಠಾಣ ಹಾಗೂ ಈತನ ಪ್ರೇಯಸಿ ಮಜಗಾವಿಯ ಶೆಫಿಯಾ ಎಂಬುವವರೇ ಬಂಧಿತ ಆರೋಪಿಗಳು.

ಈ ಅಸ್ಲಂ ಬ್ಲೇಡ್ ಬಾಬಾಗಿಂತಲೂ ಮಹಾಚತುರ ಮನುಷ್ಯ. ತನ್ನ ಪ್ರೇಯಸಿಯೊಂದಿಗೆ ನಡೆಸಿದ ಕಾಮಕೇಳಿಯಲ್ಲಿ ಅವಳ ಸಂಪೂರ್ಣ ನಗ್ನ ದೇಹದ ಅಂಗಾಂಗಗಳನ್ನು ಸೆರೆಹಿಡಿದಿದ್ದಾನೆ. ಸುಮಾರು 4 ನಿಮಿಷ 49 ಸೆಕೆಂಡುಗಳ ಈ ಸೆಕ್ಸ್ ಚಲನಚಿತ್ರದಲ್ಲಿ ಕೊನೆಯದಾಗಿ ಈ ಭೂಪ ತನ್ನ ಮುಖವನ್ನು ಸಹ ತೋರಿಸಿದ್ದು, ಅದೇ ಈಗ ಈತನನ್ನು ಸರಸ ಸಾಮ್ರಾಜ್ಯದಿಂದ ಸರಳುಗಳ ಹಿಂದೆ ತಳ್ಳಿದೆ.

ಇದು ನಗರ ಹೊರವಲಯದ ಹಿಂಡಲಗಾದಲ್ಲಿರುವ ಲಾಡ್ಜವೊಂದರಲ್ಲಿ ನಡೆದಿದೆ ಎಂದು ಹೇಳಲಾಗುತ್ತಿದೆ ಯಾದರೂ ಯಾವ ಲಾಡ್ಜ್ ಎಂದು ಯಾರೂ ಬಾಯ್ಬಿಡುತ್ತಿಲ್ಲ. ಅದನ್ನು ತಿಳಿದುಕೊಳ್ಳುವುದರಿಂದ ಪ್ರಯೋಜನವೂ ಇಲ್ಲ ಬಿಡಿ. ಬೆಳಗಾವಿಯ ಹೆಚ್ಚುಕಡಿಮೆ ಎಲ್ಲಾ ಲಾಡ್ಜುಗಳೂ ಈಗ ಮಾನವಂತರು ಉಳಿದುಕೊಳ್ಳುವ ಜಾಗಗಳಾಗಿ ಉಳಿದಿಲ್ಲ. ಯಾವ ಲಾಡ್ಜ್‌ನಲ್ಲಿ ಎಲ್ಲೆಲ್ಲಿ ಗುಪ್ತ ಕ್ಯಾಮರಾಗಳನ್ನು ಅಳವಡಿಸಲಾಗಿದೆಯೋ, ಅಮಾಯಕ ದಂಪತಿಗಳ ಎಂತೆಂಥಾ ದೃಶ್ಯಗಳನ್ನು ಸೆರೆಹಿಡಿಯಲಾಗುತ್ತದೋ, ನಾಳೆ ಅದರ ಸಿಡಿಗಳು ನಗರದ ಯಾವ್ಯಾವ ಫುಟ್‌ಪಾತ್‌ನಲ್ಲಿ ಬಿಕರಿಯಾಗುತ್ತವೆಯೋ ಯಾರೂ ಹೇಳಲು ಸಾಧ್ಯವಿಲ್ಲ.

ಈ ಹಿಂದೆ ನಡೆದ ಇನ್ನೊಂದು ಘಟನೆಯನ್ನು ನೋಡಿ. ಅದ್ಯಾವುದೋ ಕಾಲೇಜು ವಿದ್ಯಾರ್ಥಿಯೊಬ್ಬ ತನ್ನ ಸಹಪಾಠಿ ಹುಡುಗಿಯೊಬ್ಬಳನ್ನು ತನ್ನ ಕಾರಿನಲ್ಲಿ ಕೂರಿಸಿಕೊಂಡು ಆಕೆಯೊಂದಿಗಿನ ಕಾಮಕೇಳಿಯ ಚಿತ್ರೀಕರಣ ಮಾಡಿದ್ದ. ಈ ವಿಡಿಯೋವನ್ನು ಎಲ್ಲರಿಗೆ ತೋರಿಸುತ್ತೇನೆ ಎಂದು ಬೆದರಿಸುತ್ತಲೇ ಆಕೆಯನ್ನು ತನ್ನ ಪರ್ಮನೆಂಟು ಕೀಪ್ ಮಾಡಿಟ್ಟುಕೊಂಡಿದ್ದ. ಸುಮಾರು ನಾಲ್ಕು ನಿಮಿಷಗಳ ಈ ಚಿತ್ರದಲ್ಲಿ ಇಬ್ಬರ ಸಂಭಾಷಣೆ ಸಂಪೂರ್ಣ ಹಿಂದಿಯಲ್ಲಿದ್ದು ಆಕೆಯ ಭಾಷೆ ಉತ್ತರ ಭಾರತದ ಹಿಂದಿ. ಆದರೆ ಈತನದು ಲೋಕಲ್ ಹಿಂದಿ. ಇದನ್ನು ಯಾರಿಗೂ ತೋರಿಸುವುದಿಲ್ಲ ಎನ್ನುತ್ತಲೇ, ಆಕೆಯೊಂದಿಗೆ ಸರಸಸಲ್ಲಾಪ ನಡೆಸುತ್ತಲೇ ಆಕೆಗೆ ಮೋಸ ಮಾಡಿದ್ದ. ಈ ಸೆಕ್ಸ್ ವಿಡಿಯೋವನ್ನು ಆತ ತನ್ನ ಸ್ನೇಹಿತರೆಲ್ಲರಿಗೂ ಕಳಿಸಿದ್ದ.

ಇವು ಕೇವಲ ಉದಾಹರಣೆಗಳು ಮಾತ್ರ. ಇವಕ್ಕಿಂತಲೂ ಭಯಾನಕವಾದ ಸೆಕ್ಸ್ ಸಿನಿಮಾಗಳ ನೈಜ ದೃಶ್ಯಗಳು ಬೆಳಗಾವಿಯಲ್ಲಿ ಸಾಕಷ್ಟು ಸಿಗುತ್ತವೆ. ಅಲ್ಲದೇ ಎಂಎಂಎಸ್ ಹಾಗೂ ಬ್ಲೂಟೂಥ್‌ಗಳ ಮೂಲಕ ಇವು ಸ್ನೇಹಿತರಿಂದ ಸ್ನೇಹಿತರಿಗೆ ಹೋಗಿ ಬೇರೆ ಪಟ್ಟಣಗಳನ್ನೂ ಸೇರಿವೆ.

ಈಗ ಇತ್ತೀಚಿನ ಸೆಕ್ಸ್ ಸ್ಕ್ಯಾಂಡಲ್‌ನಲ್ಲಿ ಇಬ್ಬರನ್ನು ಬಂಧಿಸಿರುವುದೇ ದೊಡ್ಡ ಸಾಧನೆ ಎಂದು ತಮ್ಮ ಬೆನ್ನು ತಟ್ಟಿಕೊಳ್ಳುತ್ತಿರುವ ಬೆಳಗಾವಿಯ ಪೊಲೀಸರು ಒಟ್ಟಾರೆಯಾಗಿ ಇಂಥ ಪ್ರಕರಣಗಳಲ್ಲಿ ಕಠೋರ ನಿಲುವು ತಾಳುವುದಕ್ಕೆ ಮುಂದಾಗುತ್ತಿಲ್ಲ. ಕಳೆದ ಒಂದು ವರ್ಷದಿಂದ ಬಸ್ ನಿಲ್ದಾಣದ ಎದುರು, ಅದೂ ಮಾರ್ಕೆಟ್ ಪೊಲೀಸ್ ಠಾಣೆಯ ಕೂಗಳತೆ ದೂರದಲ್ಲಿರುವ ಮಹಾನಗರ ಪಾಲಿಕೆಯ ವಾಣಿಜ್ಯ ಸಂಕೀರ್ಣದಲ್ಲಿ ಸಂಜೆಗವಿದರೇ ಸಾಕು ಬೆಲೆವೆಣ್ಣುಗಳ ಸಾಮ್ರಾಜ್ಯ ತೆರೆದುಕೊಳ್ಳುತ್ತದೆ. ಅಲ್ಲದೇ ಕಲ್ಮಠ ರಸ್ತೆಯಲ್ಲಿರುವ ಲಾಡ್ಜ್ ಒಂದು ವೇಶ್ಯೆಯರ ಅಡ್ಡೆಯಾಗಿದೆ. ಇಲ್ಲಿಗೆ ಅದೆಷ್ಟೋ ಮೆಡಿಕಲ್ ಕಾಲೇಜಿನ ಹುಡುಗಿಯರು ಬಂದು ತಮ್ಮ ಪಾಕೇಟ ಮನಿ ಮಾಡಿಕೊಂಡು ಹೋಗುತ್ತಾರೆ. ಆದರೆ ಅವರೆಲ್ಲರ ಈ ಪಾಕೇಟ ಮನಿ ದಂಧೆ ಪೊಲೀಸರ ಪಾಲಿಗೆ ಸೂಟಕೇಸ್ ಮನಿ ತರುವ ಮೂಲಗಳಾಗಿವೆ.


ಇದಷ್ಟೇ ಅಲ್ಲದೇ ಶಹಾಪುರದ ಮಾಜಿ ಹಾಗೂ ಬೆಳಗಾವಿಯ ಹಾಲಿ ಹಿರಿಯ ವೇಶ್ಯೆಯೊಬ್ಬಳು ಬಡೇ ಬಜಾರನಲ್ಲಿರುವ ಹೋಟೇಲ್ ಒಂದರಲ್ಲಿ ಕುಳಿತು ಟೀ ಕುಡಿಯುತ್ತಾ ತನ್ನಲ್ಲಿರುವ ನಾಲ್ಕು ಮೊಬೈಲ್‌ಗಳ ಮೂಲಕ ಮೆಡಿಕಲ್ ಕಾಲೇಜ್ ಹುಡುಗಿಯರಿಗೆ ಕಾಲ್ ಮಾಡುತ್ತಲೇ ಗಿರಾಕಿಗಳನ್ನು ಕುದುರಿಸಿ ಕೊಡುತ್ತಾಳೆ. ಇಲ್ಲಿನ ವಿಶ್ವವಿದ್ಯಾಲಯದಲ್ಲಿರುವ ಹೊರರಾಜ್ಯದ ವಿದ್ಯಾರ್ಥಿನಿಯರ ಪಾಲಿಗೆ ಈಕೆಯೇ ಅನ್ನದಾತೆ. ಇದೇನು ಪೋಲಿಸರಿಗೆ ಗೊತ್ತಿರದ ವಿಚಾರವೇನಲ್ಲ. ಆದರೂ ಸುಮ್ಮನಿದ್ದಾರೆ.

ಇನ್ನೊಂದು ವಿಚಾರ ನೆನಪಿರಲಿ. ಈ ರೀತಿ ಹೆಣ್ಣುಗಳ ಮೈಮಾರಾಟ, ಶೋಷಣೆ ನಡೆಯುತ್ತಿರುವ ಜಿಲ್ಲೆಯಲ್ಲಿ ಎಸ್ಪಿಯಾಗಿ ಕುಳಿತಿರುವವಳೂ ಒಬ್ಬ ಹೆಣ್ಣೆ. ಬೆಳಗಾವಿ ಎಸ್ಪಿ ಸೋನಿಯಾ ನಾರಂಗ ತನಗೂ ಅದಕ್ಕೂ ಏನೂ ಸಂಬಂಧವಿಲ್ಲವೇನೋ ಎಂಬಂತೆ ತನ್ನ ಆಫೀಸಿನಲ್ಲಿ ಕುಳಿತಿದ್ದಾರೆ. ಇದನ್ನೇ ಸದುಪಯೋಗ ಪಡೆದುಕೊಳ್ಳುತ್ತಿರುವ ಬೆಳಗಾವಿಯ ಕೆಲ ಕಚ್ಚೆಹರುಕು ಪೊಲೀಸ್ ಅಧಿಕಾರಿಗಳು ತಾವೇ ಮುಂದೆ ನಿಂತು ಕ್ಲಬ್, ಇಸ್ಪೀಟ್ ಅಡ್ಡೆ ಹಾಗೂ ರಾತ್ರಿ ರಾಣಿಯರ ರಂಗಿನ ಪ್ರಪಂಚದ ಅಡ್ಡೆಗಳಿಗೆ ಪೊಲೀಸ್ ಪ್ರೊಟೆಕ್ಷನ್ ಕೊಡುತ್ತಿದ್ದಾರೆ.


ಇದೆಲ್ಲ ಇಡೀ ಬೆಳಗಾವಿಗೆ ತಿಳಿದಿದ್ದರೂ ಸೋನಿಯಾ ನಾರಂಗರ ದೊಡ್ಡ ಕಿವಿಗೆ ಬಿದ್ದಿಲ್ಲ ಹೇಗೆ? ಈಗಲಾದರೂ ಸೋನಿಯಾ ನಾರಂಗ್ ಎಚ್ಚರಗೊಳ್ಳಬೇಕಿದೆ.


■ ಮಧುಬಾಲಾ

ಜನರ ತಾಳ್ಮೆಗೂ ಒಂದು ಮಿತಿ ಇರುತ್ತದಲ್ಲವೆ? ನರೇಂದ್ರಸ್ವಾಮಿಯ, ಅವನ ಗೂಂಡಾ ಗ್ಯಾಂಗಿನ ಮತ್ತು ಅವನ ಸಾಕುನಾಯಿಯಂತಿರುವ ಎಸ್ಸೈ ಲೋಕೇಶ್‌ನ ದೌರ್ಜನ್ಯ ಹೆಚ್ಚಿದಂತೆ ನರೇಂದ್ರಸ್ವಾಮಿ ವಿರುದ್ಧದ ಜನರ ಸಿಟ್ಟು ಕೂಡ ಹೆಪ್ಪುಗಟ್ಟುತ್ತಿದೆ. ಸುತ್ತಮುತ್ತಲಿನ ರೈತರು, ದಲಿತರು ಸೇರಿ ನರೇಂದ್ರಸ್ವಾಮಿಯ ಕಾರಿಡಾರನ್ನು ಮತ್ತು ಹೆದ್ದಾರಿಯನ್ನು ತಡೆದು ಬಂದ್ ಮಾಡಿ ಪ್ರತಿಭಟಿಸಿದ್ದಾರೆ. ರೋಸಿದ್ದ ಜನರ ಆಕ್ರೋಶ ಎಷ್ಟಿತ್ತೆಂದರೆ, ತಹಶೀಲ್ದಾರ್ ವೆಂಕಟೇಶ್ ಮತ್ತು ಡಿವೈಎಸ್‌ಪಿ ಖಯೂಂ ನಡುಗಿದ್ದಾರೆ.



ನರೇಂದ್ರಸ್ವಾಮಿಯ ರೋಡ್ ರಾಬರಿ!






ನರೇಂದ್ರನ ಕಾರಿಡಾರ್




ಕಾರಿಡಾರ್‌ನಲ್ಲಿ ಲಾರಿಗಳು

ಪಕ್ಷೇತರನಾಗಿ ಗೆದ್ದು ಮೊದಲ ಬಾರಿಗೇ ಮಂತ್ರಿಯಾದ ಮಳವಳ್ಳಿಯ ನರೇಂದ್ರಸ್ವಾಮಿಯ ಮರಳು ದಂಧೆ ಬಗ್ಗೆ ಈ ಹಿಂದೆಯೇ 'ಲಂಕೇಶ್' ವರದಿ ಮಾಡಿತ್ತು, ಆದರೆ ಈತ ಅಷ್ಟಕ್ಕೇ ಸುಮ್ಮನಾಗುವ ಆಸಾಮಿಯಲ್ಲ, ಬದಲಿಗೆ ತನ್ನ ಪರಮ ಪೋಲಿ ತಮ್ಮನ ಮೂಲಕ ತನ್ನ ದಂಧೆಯನ್ನು ಮುಂದುವರೆಸುತ್ತಿದ್ದಾನಲ್ಲದೆ, ಈಗ ತಾನೇ ಸರ್ಕಾರವಾಗಿ ಪ್ರತಿ ಲಾರಿಗೂ ಇಂತಿಷ್ಟು ಎಂದು ಟ್ಯಾಕ್ಸ್ ಕಲೆಕ್ಟ್ ಮಾಡಿಕೊಳ್ಳುತ್ತಿದ್ದಾನೆ. ಯಡಿಯೂರಪ್ಪನವರ ಸಂಪುಟದಲ್ಲಿ ಏಕೈಕ ದಲಿತ ಸಚಿವನಾಗಿರುವ ನರೇಂದ್ರಸ್ವಾಮಿ ಮಂತ್ರಿಗಾದಿಯೇರುತ್ತಿದ್ದಂತೆಯೇ ದಲಿತಪರ ಕೆಲಸ ಮಾಡುತ್ತಾನೆ, ಬಿಜೆಪಿಯ ಬ್ರಾಹ್ಮಣವಾದಿ ಸರ್ಕಾರದಲ್ಲಿ ಭಿನ್ನ ದನಿಯಾಗಿರುತ್ತಾನೆ ಎಂದು ನಾಡಿನ ದಲಿತ ಸಮೂಹ ಎಣಿಸಿದ್ದುಂಟು. ಆದರೆ ಈತ ಅಂಥ ಆಶೆಗಳಿಗೆಲ್ಲ ತಿಲಾಂಜಲಿ ಇಟ್ಟಿದ್ದಾನೆ. ಮಾತ್ರವಲ್ಲ ದಲಿತ ವಿರೋಧಿ ಕೃತ್ಯಗಳಲ್ಲಿ ತೊಡಗಿದ್ದಾನೆ. ಇತ್ತೀಚೆಗಂತೂ ಮಂಡ್ಯ, ಮೈಸೂರು, ಚಾಮರಾಜನಗರ ಜಿಲ್ಲೆಗಳ ಉದ್ದಕ್ಕೂ ಹರಿದು ತಮಿಳುನಾಡಿಗೆ ಸೇರುವ ಕಾವೇರಿಯ ದಂಡೆಯುದ್ದಕ್ಕೂ ತನ್ನ ಮರಳು ದಂಧೆಯ ಜಾಲವನ್ನು ಹರಡಿಕೊಂಡಿರುವ ನರೇಂದ್ರಸ್ವಾಮಿ ಅದಕ್ಕೆ ಅಡೆತಡೆಯೊಡ್ಡುವ ಎಲ್ಲರನ್ನೂ ಹೊಸಕಿ ಹಾಕುತ್ತಿದ್ದಾನೆ.



ಅನ್ನದಾನಿ



ಯತೀಶ್

ಈಗ್ಗೆ 10 ವರ್ಷಗಳ ಹಿಂದೆ ಈ ಭಾಗದಲ್ಲಿ ಅಲ್ಲಲ್ಲಿ ಸಣ್ಣಪುಟ್ಟದಾಗಿ ಮರಳನ್ನೆತ್ತುತ್ತಿದ್ದರು. ಆದರೆ ಬನ್ನೂರು ಕ್ಷೇತ್ರಕ್ಕೆ ಸುನೀತಾ ವೀರಪ್ಪಗೌಡ ಎಂಬಾಕೆ ಎಂಎಲ್‌ಎ ಆದದ್ದೇ ತಡ ಆಕೆಯ ತಮ್ಮ ರವಿಪ್ರಕಾಶ್, ವರುಣಾ ಮಹೇಶ್, ಎಚ್.ಎನ್.ನಾಗರಾಜಮೂರ್ತಿ, ಲಿಂಗವಂತ ನಟರಾಜ್ ಮೂರ್ತಿಯಂತಹ ಕಳ್ಳರು ಲೈಸೆನ್ಸ್ ಪಡೆದು ಮರಳೆತ್ತುವ ದಂಧೆಯನ್ನು ಸ್ವಲ್ಪ ವ್ಯವಸ್ಥಿತವಾಗಿ ಶುರುಹಚ್ಚಿಕೊಂಡರು; ಆಗಾಧವಾಗಿ ಬರುತ್ತಿದ್ದ ಲಾಭದಿಂದಾಗಿ ತಮ್ಮ ಟೆಂಡರ್ ಪಾಯಿಂಟ್‌ನಲ್ಲಿ ಅಲ್ಲದೆ ಬೇರೆ ಕಡೆ ಕೂಡ ಮರಳು ಕದ್ದು ಮಾರಾಟ ಮಾಡಲಾರಂಭಿಸಿದರು.

ಇದೇ ಸಮಯದಲ್ಲಿ ನರೇಂದ್ರ ಸ್ವಾಮಿಯ ಮರಳು ದಂಧೆಯ ವಿಸ್ತರಣೆಗೆ ಸುಭಾಷ್ ಭರಣಿಯ ಎಂಬ ದಲಿತ ಪೊಲೀಸ್ ಅಧಿಕಾರಿ ಬೆಂಗಾವಲಾಗಿ ನಿಂತಿದ್ದರಿಂದ ಉಳಿದವರು ಬಾಲ ಮುದುರಿಕೊಂಡರೆ ನರೇಂದ್ರಸ್ವಾಮಿಯ ಮರಳು ದಂಧೆಯ ಕಬಂಧ ಬಾಹುಗಳು ಕಾವೇರಿಯುದ್ದಕ್ಕೂ ಚಾಚಿದವು. ಪರಿಣಾಮವಾಗಿ ಈ ಭಾಗದ ಕಾವೇರಿ ತೀರವಿಡೀ ವಿಕಾರಗೊಂಡಿತು. ಅದಿನ್ನೂ ಮುಂದುವರೆದಿದೆ. ತಲಕಾಡು ಸುತ್ತಮುತ್ತ ಮರಳು ತೆಗೆಯಬಾರದೆಂದು ಹೈಕೋರ್ಟ್ ಆದೇಶವಿದ್ದರೂ ಅದಕ್ಕೆ ಕ್ಯಾರೆ ಎನ್ನದೇ ಮರಳು ದಂಧೆ ನಡೆಯುತ್ತಲೇ ಇದೆ.

ಜೆಡಿಎಸ್ ಎಂಎಲ್‌ಎ ಅನ್ನದಾನಿಯ ಸೋಮಾರಿತನದಿಂದ ಮಳವಳ್ಳಿಯ ಜನರು ಬೇಸತ್ತಿದ್ದರು. ಆತನನ್ನು ಬಿಟ್ಟು ಉಳಿದ ಅಭ್ಯರ್ಥಿಗಳೆಲ್ಲಾ ಡಮ್ಮಿಗಳಾಗಿದ್ದ ಸಂದರ್ಭದಲ್ಲಿ ಕಾಂಗ್ರೆಸ್ ಟಿಕೆಟ್ ವಂಚಿತ ನರೇಂದ್ರಸ್ವಾಮಿ ಪಕ್ಷೇತರನಾಗಿ ನಿಂತು ಗೆದ್ದು ಬಂದ. ಆತ ಗೆಲ್ಲುವುದಕ್ಕೆ ಪ್ರಧಾನವಾಗಿ ಕೆಲಸ ಮಾಡಿದ್ದು ಇದೇ ಹಡಬೆ ಮರಳಿನ ದುಡ್ಡು. ಯಾವಾಗ ಯಡ್ಡಿ ಸರ್ಕಾರದಲ್ಲಿ ಮಹಿಳೆಯರನ್ನು ಮತ್ತು ಮಕ್ಕಳನ್ನು ಉದ್ಧಾರ ಮಾಡುವ ಮಂತ್ರಿಗಾದಿ ಸಿಕ್ಕಿತೋ ಈತನ ಮರಳು ಲೂಟಿಗೆ ಲೈಸೆನ್ಸ್ ಸಿಕ್ಕಂತಾಯ್ತು. ಕೇವಲ ಕೆಲವು ವರ್ಷಗಳ ಹಿಂದೆ ಬೆರಳೆಣಿಕೆಯಷ್ಟಿದ್ದ ಮರಳು ಜಾಡುಗಳು ಇಂದು ಕಾವೇರಿ ತೀರದ ಪ್ರತೀ ಊರಿನಲ್ಲಿ ಕನಿಷ್ಠ 10-15 ಜಾಡುಗಳಾಗಿವೆ. ಅಷ್ಟು ಮಾತ್ರವಲ್ಲದೆ, ಯಂತ್ರಗಳ ಮೂಲಕ ಅನಧಿಕೃತವಾಗಿ ಮರಳೆತ್ತಿ ಎಲ್ಲ ಜಾಡುಗಳಲ್ಲಿ ತನ್ನ ಮಾಲೀಕತ್ವ ಇಲ್ಲವೇ ಪಾಲುದಾರಿಕೆಯನ್ನು ಈತ ತೆಗೆದುಕೊಂಡಿದ್ದಾನೆ. ನಿಜಾರ್ಥದಲ್ಲಿ ಹೇಳಬೇಕೆಂದರೆ ಯಡ್ಡಿ ಈತನಿಗೆ ಮಂತ್ರಿ ಪದವಿ ನೀಡುವ ಮೂಲಕ ತನ್ನ ಕುರ್ಚಿ ಭದ್ರಪಡಿಸಿಕೊಂಡರೆ ಇತ್ತ ನರೇಂದ್ರಸ್ವಾಮಿ ಕಾವೇರಿ ನದಿಯನ್ನು ತನ್ನ ಸ್ವಂತ ಆಸ್ತಿಮಾಡಿಕೊಂಡಿದ್ದಾನೆ.

'ಬಿಹಾರ'ವಾಗಲಿದೆಯೇ ಮಳವಳ್ಳಿ?

ಮರಳಿನ ಲಾರಿಗಳಿಂದ ಪಂಚಾಯ್ತಿಗಳು ಮತ್ತು ಮಳವಳ್ಳಿ ಪುರಸಭೆಗಳು ರಾಯಲ್ಟಿ ಸಂಗ್ರಹಿಸುತ್ತಿದ್ದವು. ಮಳವಳ್ಳಿ ಪುರಸಭೆ ಈ ಹಿಂದೆ ಶುಲ್ಕ ವಸೂಲಿ ಹರಾಜು ಹಾಕಿದಾಗ 9.50 ಲಕ್ಷಕ್ಕೆ ಮತ್ತು 35.0 ಲಕ್ಷಕ್ಕೆ ಹೋಗಿತ್ತು, ಈ ಬಾರಿ 90 ಲಕ್ಷದಿಂದ 1 ಕೋಟಿಯವರೆಗೂ ಹರಾಜು ಕೂಗಲು ಹಲವರು ತಯಾರಿದ್ದರು. ಸರ್ಕಾರದಿಂದ ಬರುವ ಬಿಡಿಗಾಸು ಯಾವ ಮುನಿಸಿಪಾಲಿಟಿಗೂ ಸಾಕಾಗುವುದಿಲ್ಲ, ಅಂಥಾದ್ದರಲ್ಲಿ ನೆಲ ಎಷ್ಟೇ ಹಾಳಾಗಲಿ, ಮುನಿಸಿಪಾಲಿಟಿಗಳು ಒಂದಷ್ಟು ದುಡ್ಡು ಕಾಣುತ್ತಿದ್ದವು. ನರೇಂದ್ರಸ್ವಾಮಿ ಸಚಿವರಾದ ಮೇಲೆ ಮರಳಿನ ಲಾರಿಯಿಂದ ಹಣ ಕೇಳಿದರೆ ಮಾನ್ಯ ಮಂತ್ರಿಗಳಿಗೆ ಕೋಪ ಬಾ
ವುದೇ? ಹಾಗಾಗಿ ಗಣಿ ಮತ್ತು ಭೂವಿಜ್ಞಾನ ಇಲಾ
ಹಳೇ ನಿಯಮವೊಂದರ ನೆಪ ಹೇಳಿ ಜಿಲ್ಲಾಧಿಕಾ
ಒಂದು ಆದೇಶ ಹೊರಡಿಸುವಂತೆ ಮಾಡಿದ್ದಾನೆ.
ಪ್ರಕಾರ ಮರಳು ಲಾರಿಗಳಿಂದ ಸ್ಥಳೀಯ ಸಂ
ಹಣ ಸಂಗ್ರಹಿಸುವಂತಿಲ್ಲ, ಆ ರೀತಿ ಸಂಗ್ರಹಿಸು
ಕಾನೂನು ಬಾಹಿರ, ಅಕ್ರಮ ಎಂದು ಹೇಳಲಾ
ಈ ಆದೇಶವನ್ನು ಮಳವಳ್ಳಿಯಲ್ಲಿ ಹೊರಡಿಸಿದ ತಾ
ಪಂಚಾಯಿತಿಯ ಕಾರ್ಯನಿರ್ವಹಣಾಧಿಕಾರಿ ಬಸವ
ತಮ್ಮನದ್ದೂ ಕುಕ್ಕೂರಿನಲ್ಲಿ ಮರಳು ಜಾಡು ಇದ್ದುದ
ಆತನೂ ಖುಷಿಯಿಂದಲೇ ಆದೇಶ ಹೊರಡಿಸಿದ.
ವಿಚಾರವಾಗಿ ಮೊನ್ನೆ ದೊಡ್ಡಯ್ಯ ನೇತೃತ್ವದಲ್ಲಿ ಪುರಸಭೆ
ವಾಗ್ವಾದ ನಡೆದಿದೆ.

ಸಚಿವರ ಖಾಸಗಿ ರಸ್ತೆ ಬೆಳಕವಾಡಿ ಕಾರಿಡ

ನರೇಂದ್ರಸ್ವಾಮಿ ತನ್ನ ಅಧಿಕಾರ ದುಬ
ಮಾಡಿಕೊಂಡು ಅಧಿಕಾರಿಗಳಿಂದ ಹೊರಡಿಸಿದ ಆ
ಕೇವಲ ಶುಲ್ಕ ವಸೂಲಿಯದ್ದು ಮಾತ್ರವಲ್ಲ,
ಜೊತೆಗೆ ಲಾರಿಗಳು ಈ ಹಿಂದೆ ಓಡಾಡುತ್ತಿದ್ದ ದಾರಿ
ಓಡಾಡಬಾರದು, ಬದಲಿಗೆ ಚಿಕ್ಕಬಾಗಿಲು, ಉಲ್ಲಂ
ಸರಗೂರು ಹ್ಯಾಂಡ್‌ಪೋಸ್ಟ್, ಕೋಣನಕೊಪ್ಪಲು ವ
ಹಳ್ಳಿ, ಮಳವಳ್ಳಿ ಟೌನ್ ಮೂಲಕ ರಾಷ್ಟ್ರೀಯ ಹೆ
209ರ ಮಾರ್ಗವಾಗಿ ಬೆಂಗಳೂರಿಗೆ ಹೋಗಬೇಕು
ಮದ್ದೂರು ಮೂಲಕ ಹೋಗುವುದಾದರೆ ರಾತ್ರಿ 10
ಬೆಳಿಗ್ಗೆ 6ರ ಒಳಗೆ ಮಾತ್ರ ಓಡಾಡಬೇಕು ಎಂಬ ಆದೇ
ಬರುವಂತೆ ನೋಡಿಕೊಂಡರು. (ಆದೇಶ ಸಂಖ್ಯೆ:
ಆರ್‌ಬಿ/ಮರಳು/288/2006 ದಿನಾಂಕ 16/4/20
ಇದರಿಂದ ಮರಳು ಲಾರಿಗಳು ಮಾಮೂಲಿ ದೂರ
ಹೆಚ್ಚು ದೂರವನ್ನು ಕ್ರಮಿಸಬೇಕಾಗುತ್ತಿತ್ತು. ಇದಕ್ಕೆ ಮ
ದಂಧೆಯ ಅಘೋಷಿತ ಒಡೆಯರಾದ ನರೇಂದ್ರಸ್ವಾಮಿ
ತಮ್ಮ ಪರಶಿವಮೂರ್ತಿ ಮತ್ತು ಬಾಮೈದ ಮಲ್ಲ
ಪುರದ ಸ್ವಾಮಿ ಗ್ಯಾಂಗ್ ತಮ್ಮದೇ ಪರಿಹಾರ ಸೂಚಿಸಿ
ಅದೇ ಖಾಸಗಿ ಕಾರಿಡಾರ್.

ಅಂದರೆ, ಕಾವೇರಿಪುರ ಬೀರೇಶ್ವರ ದೇವಸ್ಥಾ
ಹೊಸದೊಡ್ಡಿ ಮಾರ್ಗವಾಗಿ 6 ಕಿ.ಮೀ ದೂರದ ಖಾ
ರಸ್ತೆಯೊಂದನ್ನು ನಿರ್ಮಿಸುವುದು ಹಾಗೂ ಈ ರಸ್ತೆಯ
ಬಳಸುವ ಎಲ್ಲಾ ಮರಳು ಲಾರಿಗಳಿಂದ ಸುಂಕ ವಸ
ಮಾಡುವುದು! ಅಂತೆಯೇ ಯಾರ ಅನುಮತಿಯ
ಇಲ್ಲದಂತೆ ಈಗಾಗಲೇ ಆರು ಕಿ.ಮೀ.ರಸ್ತೆಯನ್ನು ನಿಮ
ಯಾಗಿದೆ. ಇದರಲ್ಲಿ 2 ಕಿ.ಮೀ ಸರ್ಕಾರಿ ರಸ್ತೆಯ
ಒತ್ತುವರಿ ಮಾಡಿಕೊಂಡರೆ ಇನ್ನುಳಿದ 4 ಕಿ.ಮೀ ರಸ್ತೆಯ
ನರೇಂದ್ರಸ್ವಾಮಿಯ ಪಾಳೆಯದ ರೌಡಿಗಳಾದ ಬೆಳಕವಾಡಿ
ಅಶ್ವತ್ಥ ಮತ್ತು ಕುಂದೂರು ಮೂರ್ತಿ ಹೆಸರಿನಲ್ಲಿ
ದಾರಿಯಲ್ಲಿ ಬರುವ ಹೊಲಗಳನ್ನು ರೈತರಿ
ಹೆದರಿಸಿ-ಬೆದರಿಸಿ ಇಳಿಭೋಗ್ಯ ಮಾಡಿಸಿಕೊಂಡಿದ
ಇದಕ್ಕೆಂದು ಹೊಸದೊಡ್ಡಿಯ ಕೆರೆ ಜಮೀನನ್ನೂ ಬಿ
ಇನ್ನು ದಲಿತರು ಮಾಡುವ ದರಖಾಸ್ತು ಭೂಮಿಯ
ಬಿಟ್ಟಾರೆಯೇ? 1 ಸಾವಿರದಿಂದ 35 ಸಾವಿರದವ
ಅವರವರ ಪ್ರಭಾವ ಮತ್ತು ಅಸಹಾಯಕತೆಗನುಗುಣ
ಈ ಇಳಿಭೋಗ್ಯ ನಡೆದಿದೆ. ಇದರಲ್ಲಿ ದಲಿತರ ಪಾಡ
ಹೇಳತೀರದು. ಅಂಬೇಡ್ಕರ್ ಅಭಿವೃದ್ಧಿ ನಿಗಮದ
ಜಮೀನು ಖರೀದಿಸಿ ದಲಿತರಿಗೆ ನೀಡಿದ್ದರೆ, ಇಂ
ಭೂಮಿಯನ್ನು ನಿಯಮ ಮೀರಿ ಖಾಲಿ ಸ್ಟ್ಯಾ
ಪೇಪರ್‌ಗೆ ಸಹಿ ಮಾಡಿಸಿಕೊಂಡು 2000, 30
ರೂಪಾಯಿಗಳಿಗೆ ಗೋವಿಂದ ಎನ್ನಿಸಲಾಗಿದೆ.
ರೈತರಿಂದ, ದಲಿತರಿಂದ ಬಲವಂತವಾಗಿ ಬೆದ
ಭೂಮಿಯನ್ನು ಕಿತ್ತುಕೊಂಡು ಕೇವಲ 20 ದಿನಗಳ
ಈ ಖಾಸಗಿ ರಸ್ತೆ ನಿರ್ಮಿಸಿಕೊಳ್ಳಲಾಗಿದೆ.

ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಜಮೀ
ಪಡೆದುಕೊಂಡಿದ್ದ ದಾಸನದೊಡ್ಡಿಯ ನಾಗಮ್ಮ, ನಂಜ

▶▶

ಪರಮ ಪುಂಡನೊಬ್ಬ ಮಿನಿಸಚಿವ!

ನರೇಂದ್ರಸ್ವಾಮಿಯ ಸಹೋದರ ಪರಶಿವಮೂರ್ತಿ ಹೇಳಿಕೇಳಿ ರೌಡಿ ಎಲಿಮೆಂಟು. ಈತನ ವಿಕೃತ ಹಿಸ್ಟರಿಯ
ಮಳವಳ್ಳಿಯಲ್ಲಿ ಜನಜನಿತ. ಮೈಸೂರಿನಲ್ಲಿ ಓದುತ್ತಿದ್ದಾಗ ಮಡಿಕೇರಿಯ ಹುಡುಗಿಯೊಬ್ಬಳನ್ನು ಕೊಲೆ ಪ್ರಕರಣದ
ಈತ ಆರೋಪಿಯಾಗಿದ್ದ. ಆ ಕೇಸಿನಲ್ಲಿ ಎರಡು ವರ್ಷಗಳ ಕಾಲ ಜೈಲಿನ ಕಂಬಿಗಳನ್ನು ಎಣಿಸಿ ಬಂದ ಅನುಭವಿ ಈತ
ಮಳವಳ್ಳಿ ಜನರ ದುರದೃಷ್ಟಕ್ಕೆ ಅಣ್ಣ ಆಕಸ್ಮಿಕವಾಗಿ ಎಂಎಲ್‌ಎ ಆಗಿ ಮಂತ್ರಿಯೂ ಆದ ಮೇಲೆ ಈತ
ಉಪಟಳಗಳಿಗೆ ಕೊನೆಯಿಲ್ಲದಂತಾಗಿದೆ.

ಮರಳು ಜಾಡುಗಳ ಉಸ್ತುವಾರಿಯಿಂದ ತಿಂಗಳಿಗೆ ಕನಿಷ್ಠ 30 ಲಕ್ಷ ಹಣ ಪರಶಿವಮೂರ್ತಿ ಮುಂದೆ ಬಂದ
ಬೀಳುತ್ತಿದೆ. ಈಗ ಖಾಸಗಿ ಕಾರಿಡಾರ್‌ನಿಂದ ದಿನವೊಂದಕ್ಕೆ ಒಂದೂವರೆ ಲಕ್ಷ ಬರುತ್ತಿದೆ. ಉಳಿದಂತೆ ಎಲ್ಲಾ ಮರಳ
ದಂಧೆಯನ್ನು ಲೆಕ್ಕ ಹಾಕಿದರೆ ತಿಂಗಳಿಗೆ ಏನಿಲ್ಲವೆಂದರೂ 3-4 ಕೋಟಿ ನರೇಂದ್ರಸ್ವಾಮಿಯ ತಿಜೋರಿ ಸೇರುತ್ತದೆ.

ಇಷ್ಟೇ ಅಲ್ಲದೆ ಅಧಿಕಾರಿಗಳ ವರ್ಗಾವರ್ಗಿಗಳಿಗೆ ಪರಶಿವಮೂರ್ತಿಯೇ ಈ ಭಾಗದ ಉಸ್ತುವಾರಿ ಸಚಿವನಾಗಿದ್ದಾ
ರಾಜ್ಯಮಟ್ಟದಲ್ಲಿ ಯಡ್ಡಿ ಪುತ್ರ ನಡೆಸುತ್ತಿರುವ ವರ್ಗಾವಣೆ ದಂಧೆಯಿಂದ ಪುಳಕಿತನಾಗಿರುವ ಈತ ಈ ಭಾಗದ
ತಾನೂ ಅದನ್ನು ಶುರುಹಚ್ಚಿಕೊಂಡಿದ್ದಾನೆ. ಯಾವ ಅಧಿಕಾರಿಗಳನ್ನೂ ಕೇರ್ ಮಾಡದೆ ಏಕವಚನದಲ್ಲಿ ಮಾತಾಡಿಸಿದರ
ಅಧಿಕಾರಿಗಳು ಕಪ್ಪ ಸಲ್ಲಿಸಿ ಬಾಲ ಆಡಿಸಿಕೊಂಡು ಕುಂತಿದ್ದಾರೆ. ಮಾತು ಕೇಳದ ಅಧಿಕಾರಿಗಳು ಎತ್ತಂಗಡಿಯಾಗಿದ್ದಾ

...ಸವಜಯಂತಿಯಲ್ಲೂ ದುಡ್ಡು ತಿಂದ

...ಸಚಿವ ನರೇಂದ್ರಸ್ವಾಮಿ ಮಳವಳ್ಳಿಗೆ ಬಂದರೆ ಆತ ಉಳಿಯುವುದು ...ಬೊಮ್ಮನಹಳ್ಳಿ ನಂಜುಂಡಸ್ವಾಮಿ ಎಂಬ ಪರಮಭ್ರಷ್ಟನ ಮನೆಯಲ್ಲಿ, ... ಮಂತ್ರಿಯೇ ಹೀಗಿರಬೇಕಾದರೆ, ಇನ್ನು ಆತನ ಶಿಷ್ಯಂದಿರು ಹೇಗೆ ...ರು? ಬಸವಜಯಂತಿ ಮಾಡುತ್ತೇವೆಂದು ಹೇಳಿ ಸುಮಾರು 10 ...ರಷ್ಟು ದುಡ್ಡು ಎತ್ತಿದ ನಂಜುಂಡಸ್ವಾಮಿ 3 ಲಕ್ಷ ಖರ್ಚು ಮಾಡಿ ...ದ್ದೆಲ್ಲವನ್ನೂ ನುಂಗಿ, ವೀರಶೈವ ಸಂಘಕ್ಕೆ ನಾಮ ಹಾಕಿ ನಾಪತ್ತೆಯಾಗಿದ್ದ. ...ಂದ್ರಸ್ವಾಮಿ ಗೆದ್ದು ಮಂತ್ರಿಯಾಗುವವರೆಗೂ ಅಂಡಲೆಯುತ್ತಾ ಇದ್ದ ...ನಿಗೆ ಈಗ ಒಂದು ಟಾಟಾ ಇಂಡಿಕಾ ಕಾರ್ ಕೊಟ್ಟು ಲಿಂಗಾಯತರ ...ರ್ ಎಂದು ಬಿಂಬಿಸಲಾಗುತ್ತಿದೆ.

...ನರೇಂದ್ರಸ್ವಾಮಿಯ ಪುಂಡ ಪಟಾಲಂನಲ್ಲಿ ಅಮೃತಕಂಠೇಶ್, ...ಮೂರು ಪ್ರಕಾಶ್, ಬೆಳಕವಾಡಿ ಅಶ್ವತ್ಥ್ ಎಂಬುವವರೂ ಇದ್ದಾರೆ. ...ಲ್ಲ ಇವತ್ತು ನರೇಂದ್ರಸ್ವಾಮಿಯ ಖಾಸಗಿ ಕಾರಿಡಾರ್‌ನ ಉಸ್ತುವಾರಿಗೆ ... ರೊಕ್ಕ ಸಂಗ್ರಹಿಸುತ್ತಿದ್ದಾರೆ.

▶

...ಟ್ಟದ ಸುಶೀಲ, ಪುಟ್ಟನಿಂಗಮ್ಮ ಇಂತಹ ದಲಿತರದ್ದೂ ಸೇರಿದಂತೆ, ...ರ ಹೋಬಳಿ ಹೊಸಹಳ್ಳಿ ಗ್ರಾಮದ ಕಸ್ತೂರಿ, ಲಕ್ಷ್ಮಮ್ಮ, ಸಿದ್ದಯ್ಯ ...ದ, ಪ್ರಶಾಂತ್, ಜೆ.ಟಿ.ಕೃಷ್ಣ, ಗುರುಮಲ್ಲು ಇವರದ್ದು ಮತ್ತು ಇನ್ನೂ ... ಜಮೀನು ಈ ಖಾಸಗಿ ಕಾರಿಡಾರ್‌ಗಾಗಿ ಇಳೀಭೋಗ್ಯವಾಗಿದೆ.

...ಗಾಗಲೇ ಸುಂಕ ವಸೂಲಿ ಕಾರ್ಯ ನಡೆಯುತ್ತಿದೆ. ದಿನವೊಂದಕ್ಕೆ ...ಂದರೂ 450-500 ಲಾರಿಗಳು ಓಡಾಡುತ್ತಿದ್ದು ಪ್ರತೀ ಲಾರಿಯಿಂದ ...ರೂ. ವಸೂಲಿ ಮಾಡುತ್ತಿದ್ದಾರೆ. ಅಂದರೆ, ತಿಂಗಳಿಗೆ ಏನಿಲ್ಲವೆಂದರೂ ...ಕ್ಷ ನರೇಂದ್ರಸ್ವಾಮಿಯ ಜೇಬಿಗೆ ಬೀಳುತ್ತದೆ. ಮಳವಳ್ಳಿ ತಾಲೂಕಿನ ... ಹಾಳಾಗಿರುವ ಪರಿಗೆ ಮತ್ತೆ ರಿಪೇರಿ ಮಾಡಲು ಕನಿಷ್ಠ 30 ...ಯಾದರೂ ಬೇಕಾಗುತ್ತದೆ. ತಾನು ಅಧಿಕಾರಕ್ಕೆ ಬಂದು ಕೇವಲ 6 ...ಗಿರುವುದರಿಂದ ಇದರ ಅಭಿವೃದ್ಧಿ ಮಾಡಲು ಸಾಧ್ಯವಿಲ್ಲ ಎಂದು ...ಮಳವಳ್ಳಿ ಐಬಿಯಲ್ಲಿ ನರೇಂದ್ರಸ್ವಾಮಿ ಭಾಷಣ ಮಾಡಿದ್ದ. ಆದರೆ, ...ಖಾಸಗಿ ರಸ್ತೆಯನ್ನು ಕೇವಲ 20 ದಿನಗಳಲ್ಲಿ ಕಟ್ಟಿ ಮುಗಿಸಿದ್ದಾನೆ. ... ರಸ್ತೆಗಳನ್ನು ಅಭಿವೃದ್ಧಿಪಡಿಸಿದರೆ ತನಗೇನು ಲಾಭ ಎಂಬ ...ರವಿರಬಹುದಲ್ಲವೆ?

ನರೇಂದ್ರಸ್ವಾಮಿಗೆ ಪೊಲೀಸ್ ಸೆಕ್ಯೂರಿಟಿ!

...ರೇಂದ್ರಸ್ವಾಮಿಯ ಈ ಕಾರಿಡಾರ್‌ನ ಅಕ್ಕಪಕ್ಕದ ಜಮೀನಿನ ರೈತರು ...ಪಾರಂಪರಿಕವಾಗಿ ಜೋಳ, ರಾಗಿ ...ಯು ಮಾಡುತ್ತಿದ್ದರು. ತಮ್ಮ ...ನ ಪಕ್ಕದಲ್ಲೇ ಇದ್ದಕ್ಕಿದ್ದಂತೆ ...ತ್ತ ಈ ರಸ್ತೆಯಲ್ಲಿ ಓಡಾಡುವ ...ಯಿಂದ ಏಳುತ್ತಿರುವ ಧೂಳು ...ನ್ನು ಹಾಳು ಮಾಡಿದೆ. ಆ ...ಬಂದ ಅವರೆಲ್ಲಾ ಸೇರಿ ದಸಂಸದ ...ರ್ ನೇತೃತ್ವದಲ್ಲಿ ಪ್ರಶ್ನಿಸಿದ್ದಾರೆ. ...ದ್ರಸ್ವಾಮಿಯ ಸಹೋದರ ...ವಮೂರ್ತಿ ತನ್ನ ಶಿಷ್ಯ ...ಡಿಯ ಪಿಎಸ್‌ಐ ಲೋಕೇಶ್‌ಗೆ ... ಮಾಡಿ ಯತೀಶ್‌ಗೆ ಬುದ್ಧಿ ... ಹುಕುಂ ಮಾಡಿದ್ದಾನೆ. ತನ್ನ ...ರಿ ಸಾಧನೆಗಳಿಗೆ ಈಗಾಗಲೇ ... ಸಸ್ಪೆಂಡ್ ಆಗಿದ್ದ ಪಿಎಸ್‌ಐ ...ಶ್ ದಲಿತರನ್ನು ಕಂಡರೆ ಉರಿದು ... ಜಾಯಮಾನದವನು. ಮಹಾ ...ಡಿಯಾಗಿರುವ ಈತ ಕುರುಬ ...ರ ಎತ್ತುವಳಿಗಳಿಗೆ ಸದಾ ಬೆಂಬಲ ...ತ್ತಾ ದಲಿತರನ್ನು ಹೊಸಕಿ ಹಾಕುವ ಪ್ರವೃತ್ತಿಯವನು. ಯಾವಾಗ ...ಮೂರ್ತಿಯ ಫೋನ್ ಬಂತೋ ಇದನ್ನೊಂದು ಅವಕಾಶ ಎಂದುಕೊಂಡು ...ಸ್ವಾಮಿಯ ವಿರುದ್ಧ ಪ್ರತಿಭಟಿಸುತ್ತಿದ್ದ ಯತೀಶ್‌ರನ್ನು ಎತ್ತಾಕಿಕೊಂಡು ...ಗೆ ಹೋಗಿ ರಾತ್ರಿಯಿಡೀ ಬೆಂಡೆತ್ತಿದ್ದಾನೆ.




...ದ ತಾಳ್ಮೆಗೂ ಒಂದು ಮಿತಿ ಇರುತ್ತದಲ್ಲವೆ? ನರೇಂದ್ರಸ್ವಾಮಿಯ, ...ಗೂಂಡಾ ಗ್ಯಾಂಗಿನ ಮತ್ತು ಅವನ ಸಾಕುನಾಯಿಯಂತಿರುವ ಎಸ್ಸೈ ...ಶ್‌ನ ದೌರ್ಜನ್ಯ ಹೆಚ್ಚಿದಂತೆ ನರೇಂದ್ರಸ್ವಾಮಿ ವಿರುದ್ಧದ ಜನರ ಸಿಟ್ಟು ... ಹೆಪ್ಪುಗಟ್ಟುತ್ತಿದೆ. ಸುತ್ತಮುತ್ತಲಿನ ರೈತರು, ದಲಿತರು ಸೇರಿ ...ಸ್ವಾಮಿಯ ಕಾರಿಡಾರನ್ನು ಮತ್ತು ಹೆದ್ದಾರಿಯನ್ನು ತಡೆದು ಬಂದ್ ...ಪ್ರತಿಭಟಿಸಿದ್ದಾರೆ. ರೋಸಿದ್ದ ಜನರ ಆಕ್ರೋಶ ಎಷ್ಟಿತ್ತೆಂದರೆ, ತಹಸೀಲ್ದಾರ್ ...ಶ್ ಮತ್ತು ಡಿವೈಎಸ್‌ಪಿ ಖಯೂಂ ನಡುಗಿದ್ದಾರೆ. ನರೇಂದ್ರಸ್ವಾಮಿಯ ...ನ ಸಿಟ್ಟು ತಮ್ಮ ಮೇಲೆ ಎಲ್ಲಿ ತಿರುಗುತ್ತೋ ಎಂಬ ಭಯದಿಂದ ...ಟ್ ಕೊಡಿ ಕ್ರಮ ಕೈಗೊಳ್ಳುತ್ತೇವೆ' ಎಂದಷ್ಟೇ ಹೇಳಿ ಆತುರಾತುರವಾಗಿ ...ವಾಲಿ ಮಾಡಿದ್ದಾರೆ.

...ರೇಂದ್ರಸ್ವಾಮಿ ಈಗಲಾದರೂ ಬುದ್ಧಿ ಕಲಿಯುವಂತಾಗಲಿ....

■ ಲಕ್ಷ್ಮಣ್ ಚೀರನಹಳ್ಳಿ

ಅಥಣಿ ಸಚಿವ ಲಕ್ಷ್ಮಣ ಸವದಿಯ ಪಾಳೇಗಾರಿಕೆ



ಇದು ಬೆಳಗಾಂವ ಜಿಲ್ಲೆಯ ಜನರ ದುರಾದೃಷ್ಟವೋ ಏನೋ? ಹಲವಾರು ದಶಕಗಳಿಂದ ಪಾಳೇಗಾರರ ಕಪಿಮುಷ್ಠಿಯಲ್ಲಿ ಸಿಕ್ಕು ನಲುಗಿ ಹೋಗಿರುವ ಇಲ್ಲಿನ ಜನರಿಗೆ ಬಿಡುಗಡೆ ಎಂಬುದು ಇನ್ನೂ ಕನಸಿನ ಮಾತಾಗಿದೆ.

ರಾಜಮಹಾರಾಜರ ಸಾಮ್ರಾಜ್ಯಗಳೆಲ್ಲಾ ಮಣ್ಣುಪಾಲಾಗಿ, ಅವರೆಲ್ಲ ಪಿಂಚಣಿಗಾಗಿ ಸರಕಾರದ ಮುಂದೆ ಕೈಚಾಚಿ ನಿಂತಿರುವ ಸಂದರ್ಭದಲ್ಲಿ ಇಲ್ಲಿನ ಪಾಳೇಗಾರಿ ಶಕ್ತಿಗಳು ಇನ್ನೂ ಉಸಿರಾಡುತ್ತಿವೆ. ಹಲವಾರು ದಶಕಗಳಿಂದ ಜನರ ರಕ್ತ ಹೀರಿ ಅಟ್ಟಹಾಸ ಮೆರೆಯುತ್ತ ಬಂದಿರುವ ಇಲ್ಲಿನ ಫ್ಯೂಡಲ್ ಕುಳಗಳು ಈಗ ರಾಜಕಾರಣದ ಮುಖವಾಡ ಹೊತ್ತು ತಮ್ಮ ದರ್ಪ, ದಬ್ಬಾಳಿಕೆಗಳನ್ನು ಮುಂದುವರೆಸಿವೆ. ಇದಕ್ಕೆ ಸದ್ಯದ ಉದಾಹರಣೆ ಎಂದರೆ ಅಥಣಿ ಶಾಸಕ ಮತ್ತು ಸಹಕಾರ ಸಚಿವ ಲಕ್ಷ್ಮಣ ಸವದಿಯ ಅಂಥಾ ದರ್ಬಾರು.

ಜಿಲ್ಲೆಯಲ್ಲಿ ತನ್ನದೇ ಲಿಂಗಾಯತ ದರ್ಬಾರು ಕಟ್ಟಿಕೊಂಡು ರಾಜನಂತೆ ಮೆರೆಯುತ್ತಿದ್ದ ಬ್ಯಾಕೋಡಗೌಡ ವಿ.ಎಲ್.ಪಾಟೀಲ ಗೋಕಾಕದ ಜಾರಕಿಹೊಳಿಗಳ ರಭಸಕ್ಕೆ ಸಿಕ್ಕು ನೇಪಥ್ಯಕ್ಕೆ ಸರಿದು ರಾಜಕಾರಣದ ಮುಖವಾಡ ಹಾಕಿಕೊಂಡು ಅಲ್ಪಸ್ವಲ್ಪ ಅಸ್ತಿತ್ವವನ್ನು ಉಳಿಸಿಕೊಂಡಿದ್ದಾನೆ. ಇತ್ತೀಚೆಗೆ ಜಾರಕೀಹೊಳಿಗಳು ಸಹ ಅಧಿಕಾರ ದಾಹ, ಸ್ವಾರ್ಥದಿಂದಾಗಿ ತಮ್ಮತಮ್ಮಲ್ಲೇ ಕಚ್ಚಾಡಿಕೊಂಡು ತಮ್ಮ ಹಿಡಿತವನ್ನು ಕಳೆದುಕೊಂಡಿದ್ದಾರೆ. ಈ ಸಂದರ್ಭವನ್ನು ಕ್ಯಾಷ್ ಮಾಡಿಕೊಳ್ಳಲು ಯತ್ನಿಸುತ್ತಿರುವ ಸವದಿ ತನ್ನ ರಾಜಕೀಯ ಅಧಿಕಾರ ಬಳಸಿಕೊಂಡು ಜಿಲ್ಲೆಯ ಮೇಲೆ ತನ್ನ ಹಿಡಿತ ಸಾಧಿಸಲು ಹೊರಟಿದ್ದಾನೆ.

ಮೊದಮೊದಲು ಹಾಲು ಮಾರಿಕೊಂಡು ಓಡಾಡುತ್ತಿದ್ದ ಲಕ್ಷ್ಮಣ ಸವದಿ ನಂತರ ಆರಂಭಿಸಿದ್ದು ಬಡ್ಡಿ ವ್ಯವಹಾರವನ್ನು. ಇದ್ದ ಜಮೀನುಗಳಿಂದ ಬರುತ್ತಿದ್ದ ಅಪಾರ ಆದಾಯವನ್ನು ಬಡ್ಡಿ ಲೆಕ್ಕದಲ್ಲಿ ಜನರಿಗೆ ಕೊಟ್ಟು ಬೇಕಾಬಿಟ್ಟಿ ಹಣ ಕೀಳುತ್ತಿದ್ದ, ಮರಳಿಸಲು ಸಾಧ್ಯವಾಗದ ಜನರ ಮೇಲೆ ತನ್ನ ಹಿಂಬಾಲಕರನ್ನು ಬಿಟ್ಟು ಹಣ ವಸೂಲಿ ಮಾಡುತ್ತಿದ್ದ. ಒಮ್ಮೆ ಮೊಕಾಶಿ ಎನ್ನುವವರು ಸವದಿಯಿಂದ ಪಡೆದಿದ್ದ 30,000/- ರೂ.ಗಳ ಸಾಲವನ್ನು ಮರಳಿಸಲು ವಿಳಂಬ ಮಾಡಿದ್ದಕ್ಕೆ ಅವರ ವಿರುದ್ಧ ತನ್ನ ಪಡೆಯನ್ನು ಛೂಬಿಟ್ಟು, ಅವರನ್ನು ಹುಡುಕಿಸಿ ತನ್ನ ಮನೆಗೆ ಎಳೆದು ತಂದು ಅಮಾನುಷವಾಗಿ ಬಡಿದು ಹಾಕಿದ್ದ. ಹೀಗೆ ದಬ್ಬಾಳಿಕೆ, ಹಣಬಲ, ತೋಳ್ಬಲದ ಮೂಲಕವೇ ರಾಜಕಾರಣದ ಹೊಸ್ತಿಲು ಏರಿದ ಸವದಿ ಈಗ ರಾಜಕಾರಣದಲ್ಲೂ ಈ ತಂತ್ರವನ್ನೇ ಮುಂದುವರೆಸಿದ್ದಾನೆ.

ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದ ಸವದಿಯ ಹಣಬಲ ಮತ್ತು ತೋಳ್ಬಲದ ಮದ ಸಹಜವಾಗಿ ಆತನನ್ನು ರಾಜಕಾರಣದತ್ತ ಎಳೆದು ತಂದಿತ್ತು. ಆಗ ಕೋಮುವಾದಿ ಬಿಜೆಪಿಯನ್ನು ಸೇರಿ ಮೊದಲಬಾರಿಗೆ ಅಥಣಿಯಿಂದ ಗೆದ್ದು ಶಾಸಕನಾದ. ಆಗ ಚೂರುಪಾರು ಕೆಲಸ ಮಾಡಿಸಿ ಕಮಿಷನ್ ಆಧಾರದ ಮೇಲೆ ಹಣ ಕಮಾಯಿಸಿದ. ನಂತರ ಕೊ-ಜಾ ಸರಕಾರ ಬಿದ್ದು ಮತ್ತೆ ಚುನಾವಣೆ ಎದುರಾದಾಗ ಅದೇ ಕಮಿಷನ್ ಹಣ ಹಾಗೂ ತೋಳ್ಬಲ ಬಳಸಿ ಎರಡನೇ ಬಾರಿ ಶಾಸಕನಾದ. ಯಡ್ಡಿಯ ಹಿಂಬಾಲಕನಾದ ಈಗ ತನ್ನ ಸ್ವ-ಜಾತಿ ಎಂಬ ಕಾರಣಕ್ಕೆ ಈಗ ಮಂತ್ರಿಯೂ ಆಗಿದ್ದಾನೆ.

ವಾಸ್ತವವಾಗಿ ಜಿಲ್ಲೆಯಲ್ಲಿ ಬಿಜೆಪಿಗೊಬ್ಬ ಪ್ರಬಲ ಲಿಂಗಾಯತ ನಾಯಕನೇ ಇರಲಿಲ್ಲ, ಲಿಂಗಾಯತರ ಲಾಬಿ ಮಾಡಿಯೇ ಅಧಿಕಾರಕ್ಕೆ ಬಂದಿದ್ದ ಯಡ್ಡಿಗೆ ಇಲ್ಲೊಬ್ಬ ಸ್ವ-ಜಾತಿಯ ನಾಯಕನ ಅಗತ್ಯವಿತ್ತು. ಕಾಂಗ್ರೆಸ್ಸಿನಲ್ಲಿನ ಪ್ರಬಲ ಲಿಂಗಾಯತ ನಾಯಕರಿಗೆ ಪರ್ಯಾಯವಾಗಿ ಹಣ ಬಲ ತೋಳ್ಬಲ ಇರುವ ನಾಯಕನೊಬ್ಬನನ್ನು ಇಲ್ಲಿ ಬೆಳೆಸಬೇಕಾಗಿತ್ತು. ಅದಕ್ಕೆ ಸವದಿ ತಕ್ಕುದಾಗಿದ್ದ. ಅದೇ ವಾಸ್ತವದಲ್ಲಿ ಆತನಿಗೆ ಮಂತ್ರಿ ಗಾದಿಯನ್ನೂ ತಂದುಕೊಟ್ಟಿತು.

ಹಿಂದೂತ್ವ, ಹಿಂದೂಪರ ಸರಕಾರ, ರೈತರ ರಕ್ಷಣೆ, ಸುಧಾರಣೆ ಎಂದೆಲ್ಲಾ ಬೊಗಳೆ ಬಿಡುತ್ತಾ ಸಿಎಂ ಆದ ಯಡ್ಡಿಯೇ ಸಿಕ್ಕ ಸಿಕ್ಕಲ್ಲೆಲ್ಲಾ ಕೈ ಹಾಕಿ ನುಂಗಲು ಶುರುಮಾಡಿದ ತಕ್ಷಣ ಇತ್ತ ಸವದಿ ಕೂಡಾ ಒಂದು ಪಟಾಲಮ್ಮನ್ನು ಕಟ್ಟಿಕೊಂಡು ವಸೂಲಿಗೆ ಇಳಿದಿದ್ದಾನೆ. ಟ್ರಾನ್ಸಫರ್ ದಂಧೆ, ಅಪಾಯಿಂಟ್ಮೆಂಟ್ ಅವ್ಯವಹಾರಗಳು ಸಖತ್ತಾಗಿ ಸಾಗುತ್ತಿವೆ. ತನ್ನ ತಮ್ಮಂದಿರಾದ ಪರಪ್ಪ ಸವದಿ, ಸಿದ್ದಾರೂಢ ಸವದಿ ಹಾಗೂ ಬಿಜೆಪಿ ಕಾರ್ಯಕರ್ತರನ್ನು ಮುಂದಿಟ್ಟುಕೊಂಡು ವ್ಯವಹಾರಗಳನ್ನು ನಡೆಸುತ್ತಿರುವ ಸವದಿ ಮಾತ್ರ ತಾನು ಭಾರಿ ಸಾಚಾ ಎಂದು ತೋರಿಸಿಕೊಳ್ಳುತ್ತಿದ್ದಾನೆ. ಜೊತೆಗೆ, ಪತ್ರಿಕೆಗಳ ಮೇಲೆ ಎಗರಾಡುವ ರೋಗ ಬೇರೆ ಬೆಳೆಸಿಕೊಂಡಿದ್ದಾನೆ.

ಪತ್ರಿಕಾ ಮಾಧ್ಯಮ ಒಂದು ಪ್ರಜಾಸತ್ತೆಯ ಹಾಲಿಗೆ ಆಧಾರ ಸ್ತಂಭ. ಪತ್ರಿಕೆಗಳು ಜನತೆಯ ಪರ ನಿಂತು ಆಡಳಿತದ ಓರೆಕೋರೆಗಳನ್ನು ತಿದ್ದುವ ಕೆಲಸ ಮಾಡುತ್ತವೆ. ಆಡಳಿತ-ನಡೆಸುವವರು ತಪ್ಪುದಾರಿ ತುಳಿದಾಗ ಟೀಕೆ, ವಿಮರ್ಶೆಗಳ ಮೂಲಕ ಸರಿದಾರಿಗೆ ತರಲು ಪ್ರಯತ್ನಿಸುತ್ತವೆ ಎಂಬ ಕನಿಷ್ಠ ತಿಳಿವಳಿಕೆಯನ್ನೂ ಹೊಂದಿರದ ಈತ ತನ್ನ ಬಗ್ಗೆ ಯಾರೂ ಏನೂ ಬರೆಯಕೂಡದು ಎಂದು ಫರ್ಮಾನು ಹೊರಡಿಸಿದ್ದಾನೆ. ಪತ್ರಕರ್ತರೆಂದರೇನೇ ಅಸಡ್ಡೆ ಬೆಳೆಸಿಕೊಂಡಿರುವ ಈತ ತನ್ನ ಬಗ್ಗೆ ಯಾರೇ ಬರೆದರೂ ಸಹಿಸುವುದಿಲ್ಲಾ. ಮೊನ್ನೆ ಉದಯ ಕರ್ನಾಟಕ ಎಂಬ ಉತ್ತರ ಕರ್ನಾಟಕದ ವರದಿಗಾರನೊಬ್ಬ ತನ್ನ ಬಗ್ಗೆ ಬರೆದಿದ್ದ ಎನ್ನುವ ಕಾರಣಕ್ಕಾಗಿ ಕೆಲವು ಸ್ಥಳೀಯ ಪತ್ರಕರ್ತರನ್ನು ಕರೆದು ಪ್ರಸಾದ ಹಂಚಿ ಆ ವರದಿಗಾರನ ವಿರುದ್ಧ ಛೂ ಬಿಟ್ಟಿದ್ದಾನೆ. ಈತ ಏನೂ ಮಾಡಲು ಹೇಸುವದಿಲ್ಲ ಎಂಬುದನ್ನರಿತ ಆ ವರದಿಗಾರ ಅಥಣಿಯನ್ನೇ ಬಿಟ್ಟು ಬೇರೆಡೆ ಹೋಗಿ ನೆಲೆಸಿದ್ದಾನೆ.

ಅಷ್ಟೇ ಅಲ್ಲ, ಮೊನ್ನೆ ನಡೆದ ಒಂದು ಸಭೆಯಲ್ಲಿ ತಾಲ್ಲೂಕಿನ ಬಗ್ಗೆಯಾಗಲಿ, ಇಲ್ಲಿನ ಅಧಿಕಾರಿಗಳ ಬಗ್ಗೆಯಾಗಲಿ, ತನ್ನ ಬಗ್ಗೆಯಾಗಲಿ ಪತ್ರಿಕೆಯವರು ಬರೆದರೆ ಅವರನ್ನು ಹಿಡಿದು ತಂದು ಬಡಿಯಿರಿ, ಬಂದದ್ದಕ್ಕೆಲ್ಲಾ ನಾನಿದ್ದೇನೆ ಎಂದು ಅಬ್ಬರಿಸಿದ್ದಾನೆ.

ಕೃಷ್ಣಾ ಶುಗರ್ಸ್ ಖತಂ

ಈ ಭಾಗದಲ್ಲಿ ಕೃಷ್ಣಾಕೊಳ್ಳದ ಶ್ರೇಯೋಭಿವೃದ್ಧಿ ಹೆಸರಲ್ಲಿ ಆರಂಭವಾಗಿದ್ದ ಕೃಷ್ಣಾ ಶುಗರ್ಸ ಇಂದು ಮುಳುಗಿ ಹೋಗುವ ಹಂತಕ್ಕೆ ಬಂದಿದೆಯೆಂದರೆ ಅದಕ್ಕೆ ಸವದಿಯೇ ಕಾರಣ ಎಂದರೆ ಅತಿಶಯೋಕ್ತಿಯೇನಲ್ಲ. ಇಷ್ಟು ದಿನ ಹೇಗೋ ತೆವಳಿಕೊಂಡು ನಷ್ಟವಿಲ್ಲದೇ ನಡೆಯುತ್ತಿದ್ದ ಕಾರ್ಖಾನೆಯನ್ನು ಲಕ್ಷ್ಮಣ ಸವದಿ ಮತ್ತು ಆತನ ಸಹೋದರ ಪರಪ್ಪ ಸವದಿ ಅವಸಾನದ ಅಂಚಿಗೆ ತಂದು ನಿಲ್ಲಿಸುವಲ್ಲಿ ಯಶಸ್ವಿಯಾಗಿದ್ದಾರೆ.


ಅಧಿಕಾರಕ್ಕೆ ಬಂದಿದ್ದೇ ತಡ ಕೃಷ್ಣ ಶುಗರ್ಸ್ ಮೇಲೆ ಹಿಡಿತ ಸಾಧಿಸಿದ ಸವದಿ ತನ್ನ ತಮ್ಮ ಪರಪ್ಪ ಸವದಿಯನ್ನು ಕಾರ್ಖಾನೆಯ ಅಧಿಕಾರಕ್ಕೆ ತಂದು ಕೂಡಿಸಿದ. ಈ ಪರಪ್ಪ ಸವದಿ ಇಲ್ಲಿಗೆ ವಕ್ಕರಿಸಿಕೊಂಡಿದ್ದೇ ಬಂತು; ರೈತರ ಕಬ್ಬಿನ ಬಿಲ್ ಸಹ ಕಡಿಮೆಯಾಯಿತು. ಬಂದ ಆದಾಯವೆಲ್ಲಾ ಸವದಿಯ ಕೈ ಸೇರತೊಡಗಿತು. ಖರ್ಚು ವೆಚ್ಚಗಳು ಹೆಚ್ಚಾಗತೊಡಗಿದವು. ಪರಿಣಾಮವಾಗಿ ಕಾರ್ಖಾನೆ ಮತ್ತು ಅದನ್ನು ನಂಬಿದ ರೈತರು ಸೊರಗಲಾರಂಭಿಸಿದರೆ ಪರಪ್ಪ ಸವದಿ ಮಾತ್ರ ದುಂಡಗಾಗತೊಡಗಿದ. ಇದು ಹೀಗೆ ಮುಂದುವರೆದರೆ ಕಾರ್ಖಾನೆ ಸಂಪೂರ್ಣವಾಗಿ ಮುಳುಗಿಹೋಗುವ ದಿನ ದೂರವಿಲ್ಲ.

ಸನ್ಮಾನಕ್ಕೆ ಲಕ್ಷ ಲಕ್ಷ ಲೂಟಿ

ಕೆಲದಿನಗಳ ಹಿಂದೆ ಬೆಳಗಾವಿಯ ಸಹಕಾರಿ ಸಂಘಗಳಿಂದ ಸವದಿ ಸನ್ಮಾನ ಕಾರ್ಯಕ್ರಮಕ್ಕೆಂದು ಲಕ್ಷ ಲಕ್ಷ ಹಣ ಲೂಟಿ ಮಾಡಲಾಗಿದೆ. ಜಿಲ್ಲೆಯಲ್ಲಿ ಪ್ರತಿ ಗ್ರಾಮ ಅಥವಾ ಪಂಚಾಯತಿ ವ್ಯಾಪ್ತಿಯಲ್ಲಿರುವ ಸುಮಾರು 600ಕ್ಕೂ ಹೆಚ್ಚು ಕೃಷಿ ಪತ್ತಿನ ಸಹಕಾರಿ ಸಂಘಗಳಿಂದ ಸಹಕಾರಿ ಸಚಿವ ಸವದಿ ಸನ್ಮಾನದ ಹೆಸರಿನಲ್ಲಿ ಎರಡು ಸಾವಿರ ರೂ.ಗಳನ್ನು ಎತ್ತಲಾಗಿದೆ. ಅಲ್ಲದೇ, ಜಿಲ್ಲೆಯಲ್ಲಿರುವ ಅಸಂಖ್ಯಾತ ಸಹಕಾರಿ ಸೊಸೈಟಿಗಳಿಂದಲೂ ತಲಾ ಒಂದೊಂದು ಸಾವಿರ ರೂ.ನಂತೆ ವಸೂಲಿ ಮಾಡಲಾಗಿದೆ. ಒಂದು ಸನ್ಮಾನ ಸಮಾರಂಭಕ್ಕೆ ಇಷ್ಟೆಲ್ಲಾ ಹಣ ಖರ್ಚಾಗುತ್ತದಾ? ಉಳಿದ ಹಣ ಏನಾಯಿತೆಂದು ಈಗಲೂ ಸಹ ಜನರಿಗೆ ಗೊತ್ತಿಲ್ಲ. ಸವದಿಯ ಹಿಂಬಾಲಕರಿಂದಲೇ ನಡೆದ ಈ ವಸೂಲಿಯಲ್ಲಿ ಸಾಕಷ್ಟು ಕುಳಗಳು ಸಾಕಷ್ಟು ತಿಂದು ತೇಗಿವೆ. ಇಷ್ಟಕ್ಕೂ ಇವನಿಗೆ ಸನ್ಮಾನ ಮಾಡಿಸಿಕೊಳ್ಳುವ ಚಟವಿದ್ದರೆ ತನ್ನ ಜೇಬಿನಿಂದ ಖರ್ಚು ಮಾಡಿಕೊಳ್ಳಲಿ. ಅದನ್ನು ಬಿಟ್ಟು ಸಾರ್ವಜನಿಕ ದುಡ್ಡಿಗೆ ಕೈಹಾಕುತ್ತಾನೆಂದರೆ ಈತನಿಗೆ ಏನೆನ್ನಬೇಕು?

ಹೀಗೆ ತನ್ನ ತೋಳ್ಬಲ ಬಳಸಿ ರಾಜಕಾರಣವನ್ನು ನಡೆಸಿರುವ ಸವದಿ ಅತ್ಯಂತ ಹಿಂದುಳಿದ ತನ್ನ ಮತಕ್ಷೇತ್ರದಲ್ಲಿ ಪಾಳೇಗಾರಿಕೆ ದರ್ಪ ಪ್ರದರ್ಶಿಸುತ್ತಿದ್ದಾನೆಯೇ ಹೊರತು ಕ್ಷೇತ್ರದ ಅಭಿವೃದ್ಧಿಗೆ ಕಡಿದು ಗುಡ್ಡೆ ಹಾಕಿರುವುದೂ ಅಷ್ಟರಲ್ಲೇ ಇದೆ. ತನ್ನ ಹಳೇ ಗತ್ತು ದೌಲತ್ತುಗಳನ್ನು ಬಿಟ್ಟು ಮಾನವೀಯ ರಾಜಕಾರಣದ ಹಾದಿ ತುಳಿಯದಿದ್ದರೆ, ಮುಂದಿನ ಚುನಾವಣೆಯಲ್ಲಿ ಜನರೇ ಆತನಿಗೆ ಕಲಿಸಲಿದ್ದಾರೆ.

■ ಮಹಾಲಿಂಗಪ್ಪ ಆಲಬಾಳ



ಕ್ರಿಮಿನಲ್ ಶ್ರೀರಾಮುಲು ಮುಂದಿನ ಮುಖ್ಯಮಂತ್ರಿ?

ಇವತ್ತಲ್ಲ ನಾಳೆ ಶ್ರೀರಾಮುಲು ಈ ರಾಜ್ಯದ ಮುಖ್ಯಮಂತ್ರಿಯಾಗೋದು ಗ್ಯಾರಂಟಿ. ಅದನ್ನ ತಪ್ಪಿಸೋಕೆ ಬೇರೆ ಯಾರಿಂದಲೂ ಸಾಧ್ಯವಿಲ್ಲ!

ಏಕಾಏಕಿ ಗಣಿರೆಡ್ಡಿಯ ಬಾಯಿಂದ ಹೊರಬಿದ್ದ ಇಂಥದೊಂದು ಡೈಲಾಗ್ ಕೇಳಿದ ಯಾರಿಗಾದರೂ ನಗೆಯುಕ್ಕಲೇಬೇಕು. ಬಳ್ಳಾರಿಯ ಪಾಸಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ಕಮ್ಮಿಯೆಂದರೂ ಮೂವತ್ತು ಕ್ರಿಮಿನಲ್ ಕೇಸುಗಳಿರುವ ಶ್ರೀರಾಮುಲುವಿನಂತಹ ರೌಡಿಯೊಬ್ಬ ಕರ್ನಾಟಕದ ಮುಖ್ಯಮಂತ್ರಿಯಾಗುತ್ತಾನೆಂದರೆ ಅದು ಕನ್ನಡತಾಯಿಯ ಸೌಭಾಗ್ಯವಲ್ಲದೆ, ಮತ್ತೇನು?

ಹಾಗೊಮ್ಮೆ ರೌಡಿ ಶ್ರೀರಾಮುಲುವೇ ಮುಂದಿನ ಮುಖ್ಯಮಂತ್ರಿಯೆಂದು ಬಿಜೆಪಿಯೇನಾದರೂ ಘೋಷಿಸಿತೆಂದರೆ ಬಹುಶಃ ಮುಕ್ಕಾಲು ಪಾಲು ಬಿಜೆಪಿ ಎಮ್ಮೆಲ್ಲೆಗಳಿಗೆ ಠೇವಣಿ ಕೂಡ ಗಿಟ್ಟಲಿಕ್ಕಿಲ್ಲ,

ಆ ಮಾತು ಬೇರೆ. ಅದು ಬಿಜೆಪಿ ವರಿಷ್ಠರಿಗೂ ಗೊತ್ತಿದೆ. ಹಾಗಿದ್ದೂ ಗಣಿರೆಡ್ಡಿ ಗ್ಯಾಂಗ್ ಶ್ರೀರಾಮುಲು ಮುಂದಿನ ಮುಖ್ಯಮಂತ್ರಿಯೆಂದು ಬೊಬ್ಬೆ ಹಾಕುತ್ತಿರುವುದಕ್ಕೂ ಕಾರಣವಿದೆ. ಅದು ಯಡ್ಡಿಯ ವಿರುದ್ಧ ಸುಷ್ಮಾ ಸ್ವರಾಜ್ ಇಟ್ಟ ಛಟ್ಬಂಗು. ಅದಕ್ಕೆ ಮುಖ್ಯ ಕಾರಣ ಕರಂದ್ಲಾಜೆಯನ್ನು ತನ್ನ ಉತ್ತರಾಧಿಕಾರಿಯಾಗಿ ಯಡ್ಡಿ ಪ್ರತಿಬಿಂಬಿಸಹೊರಟಿದ್ದು!

ಅಂತಹ ಕರಂದ್ಲಾಜೆಯೇ ಯಡ್ಡಿಯ ಉತ್ತರಾಧಿಕಾರಿಯಾಗಬಹುದಾದರೆ ಬಳ್ಳಾರಿಯ ಖತರ್‌ನಾಕ್ ಕೇಡಿ ಶ್ರೀರಾಮುಲು ಯಾಕಾಗಬಾರದು? ಇದು ಗಣಿರೆಡ್ಡಿ ಗ್ಯಾಂಗಿನ ಪ್ರಶ್ನೆ. ಸದ್ಯ ಮಧ್ಯಪ್ರದೇಶದ ಚುನಾವಣೆಯಲ್ಲಿ ಬಿಜೆಪಿ ಪರ ಪ್ರಚಾರಕ್ಕೆ ಹೊರಟ ಕರ್ನಾಟಕದ 40 ಮಂದಿ ಕಾರ್ಯಕರ್ತರ ತಂಡವನ್ನು ವಿಮಾನದಲ್ಲಿ ಕರೆದೊಯ್ದಿದ್ದೇ ಶ್ರೀರಾಮುಲು. ದೆಹಲಿಯಲ್ಲಿ ಗಣನೀಯವಾಗಿರುವ ಕನ್ನಡಿಗರ ಮತವನ್ನು ಬಿಜೆಪಿಯತ್ತ ಸೆಳೆಯಲು ಶ್ರೀರಾಮುಲು ಗ್ಯಾಂಗ್ ಓಡಾಡಿದ್ದೂ ನಿಜವೇ.

ಶ್ರೀರಾಮುಲು ಎಂಬ ರೌಡಿಯನ್ನು ಮಹಾನ್ ಯುವ ನಾಯಕನಂತೆ ಪರಿಚಯಿಸಿಕೊಟ್ಟಿದ್ದು ಸದ್ಯ ಮಧ್ಯಪ್ರದೇಶದ ಚುನಾವಣಾ ಉಸ್ತುವಾರಿ ವಹಿಸಿಕೊಂಡಿರುವ ಬಿಜೆಪಿ ರಾಷ್ಟ್ರನಾಯಕ(!) ಅನಂತಕುಮಾರ್. ಅನಂತ್ ಮತ್ತು ಸುಷ್ಮಾ ಜೋಡಿ ಯಡ್ಡಿಯ ವಿರುದ್ಧ ಗಣಿರೆಡ್ಡಿ ಗ್ಯಾಂಗನ್ನು ಎತ್ತಿಕಟ್ಟಿರುವುದರ ಸ್ಪಷ್ಟ ಶಕುನವೇ ಶ್ರೀರಾಮುಲು ಮುಂದಿನ ಮುಖ್ಯಮಂತ್ರಿಯೆಂಬ ಗಣಿರೆಡ್ಡಿಯ ಹೂಂಕಾರ.

ಸದ್ಯ ಗಣಿರೆಡ್ಡಿಯ ಪಾಳಯದಲ್ಲಿರುವ ಬಿಜೆಪಿ ಎಮ್ಮೆಲ್ಲೆಗಳ ಒಟ್ಟು ಸಂಖ್ಯೆ ನಲವತ್ತೆಂಟು. ಒಂದೆಡೆ ಇಂಥ ಡೈಲಾಗ್ ಹೊಡೆದು ಯಡ್ಡಿಗೆ ಕಿರಿಕಿರಿ ಮಾಡುವುದು ಮತ್ತೊಂದೆಡೆ ಶೋಭಾ ಕರಂದ್ಲಾಜೆಯ ಅಟ್ಟಹಾಸಕ್ಕೆ ಅಂಕುಶವಿಕ್ಕುವುದು ರೆಡ್ಡಿ ಗ್ಯಾಂಗಿನ ಷಡ್ಯಂತ್ರ. ಅದಕ್ಕೆ ಶ್ರೀರಾಮುಲುವನ್ನು ಮುಂದಿಟ್ಟುಕೊಂಡು ಶಿಖಂಡಿ ಯುದ್ಧಕ್ಕಿಳಿದಿದ್ದಾನೆ.

ಎಲ್ಲಿಯ ಕರಂದ್ಲಾಜೆ, ಯಾವ ಶ್ರೀರಾಮುಲು? ಇವರ ಹೊರತಾಗಿ ಬಿಜೆಪಿಯ ನಾಶಕ್ಕೆ ಬೇರೆ ಯಾರಾದರೂ ಏಕೆ ಬೇಕು?

ಶೋಭಾ ಎಂಬ ಮಾಯೆ

ಬಿಜೆಪಿಯ ಬಹುತೇಕ ಶಾಸಕರಿಗೇ ಅಚ್ಚರಿಯೆನಿಸುವಂತೆ ನಿನ್ನೆ ಮೊನ್ನೆಯ ತನಕ ಅಪ್ಪನ 'ಶೋಭಾ ಸಖ್ಯ'ವನ್ನು ವಿರೋಧಿಸುತ್ತಿದ್ದ ಯಡ್ಡಿಯ ಮಕ್ಕಳೆಲ್ಲ ಈಗ ಪರಸ್ಪರ ಹಂಚಿ ತಿನ್ನುವ ಒಪ್ಪಂದಕ್ಕೆ ಬಂದುಬಿಟ್ಟಿದ್ದಾರೆ. ಅದು ಹೆಣ್ಣು ಮಾಯೆ. ಓರ್ವ ಮುಖ್ಯಮಂತ್ರಿ, ಆತನ ಪಕ್ಷ, ಆದರ ಸರ್ಕಾರ ಮತ್ತು ರಾಜ್ಯವೊಂದರ ಬೊಕ್ಕಸ ಹೇಗೆ ಈ ಮಾಯೆಗೆ ಸಿಲುಕಿ ನರಳುತ್ತಿವೆ ಎಂಬುದಕ್ಕೆ ಮೊನ್ನೆ ನಡೆದ ಬಿಜೆಪಿ ಜಿಲ್ಲಾವಾರು ಶಾಸಕರ ಸಭೆಯೊಂದೇ ಸಾಕ್ಷಿಯಂತಿತ್ತು.


■ ರಾ. ಸೋಮನಾಥ್



ಅದು ಹೆಣ್ಣು ಮಾಯೆ. ಓರ್ವ ಮುಖ್ಯಮಂತ್ರಿ, ಆತನ ಪಕ್ಷ, ಆದರ ಸರ್ಕಾರ ಮತ್ತು ರಾಜ್ಯವೊಂದರ ಬೊಕ್ಕಸ ಹೇಗೆ ಈ ಮಾಯೆಗೆ ಸಿಲುಕಿ ನರಳುತ್ತಿವೆ ಎಂಬುದಕ್ಕೆ ಮೊನ್ನೆ ನಡೆದ ಬಿಜೆಪಿ ಜಿಲ್ಲಾವಾರು ಶಾಸಕರ ಸಭೆಯೊಂದೇ ಸಾಕ್ಷಿಯಂತಿತ್ತು.

ಬಂಡೆದ್ದ ಶಾಸಕರ ಸಂಖ್ಯೆ 36

ಅಲ್ರೀ..... ಪ್ರತಿಯೊಂದು ಕೆಲಸಕ್ಕೂ ಶೋಭಾ ಕರಂದ್ಲಾಜೆಗೆ ಮಸ್ಕಾ ಹೊಡಿಬೇಕು ಅಂದ್ರೆ ಇದ್ಯಾವ ಗ್ರಾಚಾರಾರೀ? ಕ್ಷೇತ್ರದ ಸಣ್ಣಪುಟ್ಟ ಕಾಮಗಾರಿಗೂ ಒಂದೋ ವಿಜಯೇಂದ್ರನಿಗೆ ಸಲಾಂ ಹಾಕಬೇಕು ಅಥವಾ ಆಯಮ್ಮನ ಮುಂದೆ ಕೈಕಟ್ಟಿ ನಿಲ್ಲಬೇಕು. ಎಮ್ಮೆಲ್ಲೆಗಳಾಗಿ ನಾವೇ ಕಾಸು ಕೊಟ್ಟು ಟ್ರಾನ್ಸ್‌ಫರ್ ಮಾಡಿಸ್ಕೋಬೇಕಾ? ಕ್ಷೇತ್ರದ ಜನ ನಮ್ಮನ್ನ ನೋಡಿ ಗೇಲಿ ಮಾಡಿ ನಗೋ ಹಾಗಾಗಿದೆ....!




ಇದು ನವೆಂಬರ್ 24 ಮತ್ತು 25 ರಂದು ನಡೆದ ಬಿಜೆಪಿ ಜಿಲ್ಲಾವಾರು ಶಾಸಕರ ಸಭೆಯಲ್ಲಿ ವಿವಿಧ ಶಾಸಕರುಗಳಿಂದ ಕೇಳಿಬಂದ ಒಟ್ಟಾಭಿಪ್ರಾಯ. ಇಂಥ ಎರಡು ಡಜನ್ನಿಗಿಂತಲೂ ಹೆಚ್ಚು ಬಿಜೆಪಿ ಎಮ್ಮೆಲ್ಲೇಗಳು ಕರಂದ್ಲಾಜೆಯ ವಿರುದ್ಧ ಮುಖ್ಯಮಂತ್ರಿ ಯಡ್ಡಿಗೆ ಹಸ್ತಾಕ್ಷರ ಹಾಕಿಯೇ ದೂರು ಕೊಟ್ಟಿದ್ದಾರೆ. ರಾಜ್ಯ ಬಿಜೆಪಿಯ ಸಮಸ್ತ ಸೂತ್ರಧಾರನಂತಿರುವ ಸಂಘಟನಾ ಕಾರ್ಯದರ್ಶಿ ಸಂತೋಷ್‌ಕುಮಾರ್ ಮೂಲಕ ಹೈಕಮಾಂಡಿಗೆ ಸಲ್ಲಿಸಿರುವ ಶೋಭಾ ವಿರುದ್ಧದ ಮತ್ತೊಂದು ದೂರಿಗೆ ಹಿರಿಯ ಮಂತ್ರಿ ಈಶ್ವರಪ್ಪ, ಸ್ಪೀಕರ್ ಜಗದೀಶ್ ಶೆಟ್ಟರ್, ಸಾರಿಗೆ ಮಂತ್ರಿ ಅಶೋಕ್ ಮತ್ತು ಅಬಕಾರಿ ಮಂತ್ರಿ ಕಟ್ಟಾನಾಯ್ಡು ಸೇರಿದಂತೆ ಒಟ್ಟು 36 ಮಂದಿ ಬಿಜೆಪಿ ಎಮ್ಮೆಲ್ಲೇಗಳ ಸಹಿಬಿದ್ದಿದೆ!


ಶೋಭಾ ಕರಂದ್ಲಾಜೆ ಎಂಬ ತನ್ನ ಪರಮಾಪ್ತೆಗಾಗಿ ಮುಖ್ಯಮಂತ್ರಿ ಯಡ್ಡಿ ಮಾಡಿಕೊಳ್ಳುತ್ತಿರುವ ಎಡವಟ್ಟುಗಳಿವು. ಯಡ್ಡಿಗೆ ಅಧಿಕಾರ ದಕ್ಕಿಸಿ ಕೊಡುವಲ್ಲಿ ಆರೆಸ್ಸೆಸ್-ಬಿಜೆಪಿಗಿಂತಲೂ ರಾಜ್ಯದ ಲಿಂಗಾಯತ ಸಮೂಹದ ಪಾಲೇ ದೊಡ್ಡದಿತ್ತೆಂಬುದನ್ನು ಯಾರೂ ಅಲ್ಲಗಳೆದಿಲ್ಲ ನಿಜ. ಆದರೆ ಅಧಿಕಾರಕ್ಕೆ ಬಂದಿದ್ದೇ ಇಡೀ ಸರ್ಕಾರ ಶೋಭಾ ಕೈಗೊಂಬೆಯಂತಾಯ್ತು. ಬಹುತೇಕ ಐಎಎಸ್ ಅಧಿಕಾರಿಗಳ ಟ್ರಾನ್ಸ್‌ಫರ್‌ನಿಂದ ಹಿಡಿದು ಯಕಶ್ಚಿತ್ ಪೊಲೀಸ್ ಠಾಣೆಗಳ ತನಕ ನಡೆದದ್ದು ಕರಂದ್ಲಾಜೆಯ ಅಣತಿಯೇ ಹೊರತು ಹೈಕಮಾಂಡ್, ಆರೆಸ್ಸೆಸ್ ವರಿಷ್ಠರು. ಪಕ್ಷದ ಕಾರ್ಯಕರ್ತರು ಮತ್ತು ಎಮ್ಮೆಲ್ಲೇಗಳ ಮಾತಿಗೆ ಸಿಗಬೇಕಾದ ಮರ್ಯಾದೆ ಸಿಗಲೇ ಇಲ್ಲ. ಯಾವ ಉತ್ತರ ಕರ್ನಾಟಕದ ಲಿಂಗಾಯತ ಸಮೂಹ ಯಡ್ಡಿಯ ಕಾರಣಕ್ಕಾಗಿ ಬಿಜೆಪಿಯನ್ನು ಬೆಂಬಲಿಸಿತ್ತೋ ಈಗ ಅದೇ ಉತ್ತರ ಕರ್ನಾಟಕದ ಲಿಂಗವಂತ ಶಾಸಕರೆಲ್ಲ ಯಡ್ಡಿ ವಿರುದ್ಧ ತಿರುಗಿ ಬೀಳಲು ಕರಂದ್ಲಾಜೆಯೇ ಅತೀ ಮುಖ್ಯ ಕಾರಣ.

ಅದೂ ಯಾವ ಮಟ್ಟಕ್ಕೆಂದರೆ ಬೆಂಗಳೂರಿನ ಮಟ್ಟಿಗೆ ಬಿಜೆಪಿ ಪಾಲಿನ ಒಕ್ಕಲಿಗರ ಓಟ್‌ಬ್ಯಾಂಕ್‌ನಂತಿದ್ದ ಸಾರಿಗೆ ಮಂತ್ರಿ ಅಶೋಕ್‌ರನ್ನೇ ಮೂಲೆಗುಂಪು ಮಾಡಿ ಆ ಜಾಗಕ್ಕೆ ಕರಂದ್ಲಾಜೆಯನ್ನು ಪ್ರತಿಷ್ಠಾಪಿಸುವ ಯಡ್ಡಿಯ ಹುನ್ನಾರದ ವಿರುದ್ಧ ಅಶೋಕ್ ಬಹಿರಂಗವಾಗಿ ಕಿಡಿಕಾರುತ್ತಿದ್ದಾರೆ. ಅಶೋಕ್ ಮಾತ್ರವಲ್ಲದೇ ರಾಜರಾಜೇಶ್ವರಿ ಕ್ಷೇತ್ರದ ಶಾಸಕ ಎಂ. ಶ್ರೀನಿವಾಸ್, ಬೆಂಗಳೂರು ದಕ್ಷಿಣ ಎಮ್ಮೆಲ್ಲೇ ಮತ್ತು ಶ್ರೀನಿವಾಸ್ ತಮ್ಮ ಕೃಷ್ಣಪ್ಪ ಥರದ ಸಾಧಾರಣ ಮಟ್ಟದ ಒಕ್ಕಲಿಗರೆಲ್ಲ ಶೋಭಾ ಎಂಬ ಒಂದೇ ಕಾರಣಕ್ಕೆ ಯಡ್ಡಿಗೆ ಹಿಡಿಶಾಪ ಹಾಕುತ್ತಿದ್ದಾರೆ.

ಬೆಂಗಳೂರಿನ ವಿಷಯಕ್ಕೆ ಬಂದರೆ ಒಕ್ಕಲಿಗ ಜನಾಂಗದ ಅರ್ಧ ಡಜನ್ ಬಿಜೆಪಿ ಶಾಸಕರನ್ನು ಗೆಲ್ಲಿಸಿದ್ದು ಆರ್. ಅಶೋಕ್. ಅಶೋಕ್ ಬೆಂಬಲವಿಲ್ಲದೇ ಸ್ವತಃ ಕರಂದ್ಲಾಜೆಯೇ ಯಶವಂತಪುರದಿಂದ ಗೆಲ್ಲುವುದು ಸಾಧ್ಯವಿರಲಿಲ್ಲ. ಅಧಿಕಾರ ಸಿಕ್ಕಿದ್ದೇ ಯಡ್ಡಿ ಮಾಡಿದ ಮೊದಲ ಕೆಲಸವೆಂದರೆ ಕರಂದ್ಲಾಜೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್‌ನಂಥ ಪ್ರಭಾವಿ ಖಾತೆ ಕೊಟ್ಟು ಅಶೋಕ್ ಮತ್ತು ಕಟ್ಟಾ ಥರದ ಆಧಾರಸ್ತಂಭಗಳನ್ನು ಕೆಲಸಕ್ಕೆ ಬಾರದ ಖಾತೆಗಳಿಗೆ ದಬ್ಬಿ ಮೂಲೆಗುಂಪು ಮಾಡಿದ್ದು.


ಅಶೋಕ್

ಇವತ್ತು ಅಶೋಕ್ ಜೊತೆ ಕರಂದ್ಲಾಜೆಯ ವಿರುದ್ಧ ಕಟ್ಟಾನಂಥ ನೆಲಕಂಟಕನೂ ಕೈಜೋಡಿಸುತ್ತಾನೆಂದರೆ ಅದಕ್ಕೆ ಯಡ್ಡಿಯ 'ಶೋಭಾ ಪ್ರೇಮ'ವಲ್ಲದೇ ಬೇರೆ ಕಾರಣವಿಲ್ಲ. ಅಶೋಕ್‌ಗೆ ಕಂದಾಯ ಅಥವಾ ಗೃಹಖಾತೆಯ ಮಂತ್ರಿಯಾಗುವ ದುರಾಶೆಯಿತ್ತು. ಹಾಗೇ ಕಟ್ಟಾನಿಗೂ ಭಾರೀ ಕೈಗಾರಿಕೆ ಅಥವಾ ನಗರಾಭಿವೃದ್ಧಿ ಇಲಾಖೆಯ ಮೇಲೆ ಕಣ್ಣಿತ್ತು. ಸಿಕ್ಕಿದ್ದು ಲೆಕ್ಕಕ್ಕಿಲ್ಲದ ಖಾತೆಗಳು.


ವಿಜಯೇಂದ್ರ

ಯಡ್ಡಿ ಅದೆಷ್ಟೇ ಪಂಪ್ ಹೊಡೆದರೂ ದಕ್ಷಿಣ ಕನ್ನಡ ಮೂಲದ ಕರಂದ್ಲಾಜೆಯನ್ನು ಬೆಂಗಳೂರಿನ ಒಕ್ಕಲಿಗರು ಒಪ್ಪುವುದುಂಟಾ?

ಮುಖ್ಯಮಂತ್ರಿ ಯಡ್ಡಿಗೆ ಇಂಥದೊಂದು ಕಾಮನ್‌ಸೆನ್ಸ್ ಕೂಡ ಇದ್ದಂತಿಲ್ಲ. ಅದು ಶೋಭಾ ಎಂಬ ಮಾಯೆ ತಂದ ಕುರುಡು. ಕನಿಷ್ಠ ಉತ್ತರ ಕರ್ನಾಟಕದ ಲಿಂಗಾಯತ ಶಾಸಕರನ್ನಾದರೂ ಶೋಭಾ ಕಾರಣಕ್ಕೆ ಕಳೆದುಕೊಳ್ಳಬಾರದೆಂಬ ಎಚ್ಚರಿಕೆ ಕೂಡ ಯಡ್ಡಿಗಿದ್ದಂತಿಲ್ಲ. ಸದ್ಯ ಶೋಭಾ ವಿರುದ್ಧ ಹೈಕಮಾಂಡಿಗೆ ದೂರು ಕೊಟ್ಟ ರೋಣದ ಶಾಸಕ ಕಳಕಪ್ಪ ಬಂಡಿ, ತೇರದಾಳದ ಸಿದ್ದು ಸವದಿ, ಹೊನ್ನಾಳಿಯ ಕೀಚಕ ರೇಣುಕಾಚಾರ್ಯ, ಬೆಳಗಾವಿಯ ಅಭಯ್ ಪಾಟೀಲ್ ಮತ್ತು ಶಿವಬಸಪ್ಪ ಪಾಟೀಲ್, ಬಿಜಾಪುರದ ಅಪ್ಪು ಪಟ್ಟಣಶೆಟ್ಟಿ, ಇಂಡಿಯ ಸಾರ್ವಭೌಮ ಬಗಲಿ, ಚೆನ್ನಗಿರಿಯ ವಿರೂಪಾಕ್ಷಪ್ಪ ಮತ್ತು ರಾಯಚೂರಿನ ಮನೋಹರ್ ಮಸ್ಕಿ ಮುಂತಾದವರೆಲ್ಲರೂ ಲಿಂಗಾಯತರೇ.

ಹೇಳಿಕೇಳಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯೆಂದರೆ ಅದು ರಾಜ್ಯ ಬಜೆಟ್ಟಿನ ಬಹುದೊಡ್ಡ ಬಾಬತ್ತಿನ ಖಾತೆ. ಐವತ್ತಕ್ಕೂ ಅಧಿಕ ಐಎಎಸ್ ಅಧಿಕಾರಿಗಳು ನೇರವಾಗಿ ಶೋಭಾ ಅಧೀನಕ್ಕೊಳಪಡುತ್ತಾರೆ. ಈ ಬಾರಿ ವಿಶ್ವಬ್ಯಾಂಕ್ ನಿಧಿಯ ಪಾಲು ಸೇರಿದಂತೆ ನರ್ಮ್ ಮತ್ತು ಜವಾಹರ್ ರೋಜ್‌ಗಾರ್ ಲೆಕ್ಕಕ್ಕೆ ಕೇಂದ್ರದಿಂದ ಬಂದ ಒಟ್ಟು ಮೊತ್ತವೇ ಹನ್ನೆರಡು ಸಾವಿರ ಕೋಟಿ!

ಬರುವ ಮಾರ್ಚ್ ತಿಂಗಳೊಳಗೆ ಇಷ್ಟೊಂದು ಭಾರೀ ಮೊತ್ತದ ನಿಧಿಯನ್ನು ರಾಜ್ಯವೇನಾದರೂ ಬಳಸದೇ ಹೋಯಿತೆಂದರೆ ಸಹಜವಾಗೇ ಅದು ಕೇಂದ್ರ ಸರ್ಕಾರಕ್ಕೆ ವಾಪಸ್ಸು ಹೋಗುತ್ತದೆ. ಗ್ರಾಮೀಣಾಭಿವೃದ್ಧಿಯ ಬಗ್ಗೆಯಾಗಲಿ ರೈತರ ಆತ್ಮಹತ್ಯೆ, ಕುಡಿಯುವ ನೀರು, ವಿದ್ಯುತ್, ದಲಿತರ ಸಂಕಷ್ಟಗಳ ಬಗ್ಗೆ ಯಾವುದೇ ಪರಿಜ್ಞಾನವಾಗಲಿ, ಪೂರ್ವ ಸಿದ್ಧತೆಯಾಗಲಿ ಇಲ್ಲದ ಬಿಜೆಪಿ ಸರ್ಕಾರಕ್ಕೆ

ಷ್ಟೊಂದು ಬೃಹತ್ ಮೊತ್ತವನ್ನು ಹೇಗೆ ಳಬೇಕೆಂಬುದೇ ದೊಡ್ಡ ಸಮಸ್ಯೆ. ಅದೂ ಈ ರಿ ಎರಡು ಸಾವಿರದ ಮುನ್ನೂರು ಟಿಯಷ್ಟು ದೊಡ್ಡ ಮೊತ್ತದ ನಿಧಿಯನ್ನು ಂಚಾಯತ್ ರಾಜ್ ಖಾತೆಯ ಮೂಲಕವೇ ಟವಾದೆಯಾಗಿದೆ.

ಹೀಗೆ 2300 ಕೋಟಿ ರೂಪಾಯಿಗಳಷ್ಟು ರೀ ಮೊತ್ತವನ್ನು ಜಿಲ್ಲಾ ಪಂಚಾಯ್ತಿಗಳಿಗೆಂದು ಡುಗಡೆ ಮಾಡಿದ ಕರಂದ್ಲಾಜೆ ಈ ವಿಷಯದಲ್ಲಿ ಚಾರಕ್ಕೂ ಎಮ್ಮೆಲ್ಲೆಗಳನ್ನೂ ಲೆಕ್ಕಕ್ಕಿಡಲಿಲ್ಲ. ನ್ಸಿಪಲ್ ಸೆಕ್ರಟರಿ ವಿ.ಪಿ. ಬಳಿಗಾರ್ ನೇರ ಧೀನದಲ್ಲಿ ಆಯಾ ಜಿಲ್ಲಾ ಪಂಚಾಯ್ತಿಗಳ ಖ್ಯಾಧಿಕಾರಿಗಳ ಕೈಸೇರಿದ ಕೋಟಿಕೋಟಿ ಪಾಯಿಗಳನ್ನು ಕಂಡಿದ್ದೇ ಸಕರ ಕಣ್ಣು ಕೆಂಪಾಗಿದೆ.

ಎಮ್ಮೆಲ್ಲೆಗಳನ್ನೇ ಲೆಕ್ಕಕ್ಕಿಡದೇ ರವಾಗಿ ಐಎಎಸ್ ಅಧಿಕಾರಿಗಳ ಮೂಲಕ ವಿವಿಧ ಮಗಾರಿಗಳಿಗೆಂದು ಡುಬಂದ ದುಡ್ಡಿನಲ್ಲಿ ಬೇಕಾದ ಕಮಿಷನ್, ಲಂಚದ ಲು, ಬೋಗಸ್ ಬಿಲ್ ಬತ್ತೆಲ್ಲವನ್ನೂ ಮುರಿದುಕೊಂಡೇ ಡುಗಡೆ ಮಾಡಲಾಗಿತ್ತು. ಹಜವಾಗೇ ಕಾಮಗಾರಿ ಮೀಷನ್ನಿಗಾಗಿ ಜೊಲ್ಲು ರಿಸಿಕೊಂಡಿದ್ದ ಶಾಸಕರಿಗೆ ಘಾತವಾಗಿದೆ. ಈ ಬಗ್ಗೆ ವಿ.ಪಿ. ಳಿಗಾರ್‌ರನ್ನು ದಬಾಯಿಸಲು ದ ಶಾಸಕರನ್ನೆಲ್ಲ ಮುಲಾಜಿಲ್ಲದೇ ಬಳಿಗಾರ್ ಗಹಾಕಿದ್ದಾರೆ. ಬಳಿಗಾರ್ ವಿರುದ್ಧ ಮುಖ್ಯಮಂತ್ರಿಗೆ ದೂರೊಯ್ದರೆ ಮಾಪ್ಸೆಯ ಯೋಜನವಾಗಿಲ್ಲ.

ಗ್ರಾಮೀಣ ಭಾಗದ ಮ್ಮೆಲ್ಲೆಗಳಿಗೆ ಇದರ ಹೊರತಾಗಿ ಮಾಯಿಗೆ ಬೇರೆ ಮೂಲಗಳಿಲ್ಲ. ದ್ದಬದ್ದ ಬೆಂಬಲಿಗರಿಗಾದರೂ ಂಟ್ರಾಕ್ಟ್ ಕೊಡಿಸೋಣವೆಂದರೆ ದ್ಯಾವುದಕ್ಕೂ ಆಸ್ಪದವಿಲ್ಲ. 2300 ೋಟಿಯಲ್ಲಿ ಕನಿಷ್ಠ ಹತ್ತು ರ್ಸೆಂಟ್ ಕಮೀಷನ್ನೆಂದರೂ ಡ್ಡಿ-ಶೋಭಾ ಜೋಡಿಗೆ ನ್ನೂರ ಮೂವತ್ತು ಕೋಟಿ ಟ್ಟುತ್ತದೆ. ಗೆದ್ದ ಎಮ್ಮೆಲ್ಲೆಗಳಿಗೆ ಷ್ಟು ಮೂಳೆ ಚಕ್ಕಳವೂ ಗದಿದ್ದರೆ ಏನರ್ಥ?

ಇದು ಕರಂದ್ಲಾಜೆಯ ವಿರುದ್ಧ ಮುಗಿಬಿದ್ದ ಉತ್ತರ ಕರ್ನಾಟಕದ ಸಕರ ಸಿಟ್ಟಿನ ಮೂಲ. ೋಗಲಿ ಟ್ರಾನ್ಸ್‌ಫರ್ ಧೆಯಲ್ಲಾದರೂ ಚೂರು ಪಾರು ಮಾಯಿಸೋಣ ಅಂದರೆ ದಕ್ಕೂ ವಿ.ಪಿ. ಬಳಿಗಾರ್ ಆಸ್ಪದ ಡುತ್ತಿಲ್ಲ. ಶೋಭಾ ಮಾತು ಟ್ಟರೆ ಬೇರೆ ಯಾರ ಮಾತಿಗೂ ಳಿಗಾರ್ ಬಳಿ ಕಿಮ್ಮತ್ತಿಲ್ಲ. ಸಣ್ಣಪುಟ್ಟ ನ್ಸ್‌ಫರ್‌ಗಳಿಗೂ ಕರಂದ್ಲಾಜೆಯ ಮುಂದೆ ಕಟ್ಟಿ ನಿಲ್ಲಬೇಕು. ಅಥವಾ ಯಡ್ಡಿ ಮಗ ಜಯೇಂದ್ರನಿಗೆ ಮಸ್ಕಾ ಹೊಡೆಯಬೇಕು. ಟ್ಟಾರೆ ಹೆಸರಿಗಷ್ಟೇ ಬಿಜೆಪಿ ಸರ್ಕಾರವಾದರೂ ಡೆಯುತ್ತಿರುವುದು ಯಡ್ಡಿಯ ಹೋಮ್ ರೂಲು.


ಬಿಜೆಪಿಯ ಬಹುತೇಕ ಶಾಸಕರಿಗೇ ಚ್ಚರಿಯೆನಿಸುವಂತೆ ನಿನ್ನೆ ಮೊನ್ನೆಯ ತನಕ ಅಪ್ಪನ ೋಭಾ ಸಖ್ಯ'ವನ್ನು ವಿರೋಧಿಸುತ್ತಿದ್ದ ಯಡ್ಡಿಯ ಕ್ಕಳೆಲ್ಲ ಈಗ ಪರಸ್ಪರ ಹಂಚಿ ತಿನ್ನುವ ಒಪ್ಪಂದಕ್ಕೆ ಂದುಬಿಟ್ಟಿದ್ದಾರೆ. ಪ್ರತಿ ಟ್ರಾನ್ಸ್‌ಫರ್, ಪ್ರತಿ ಲುಗಳ ಲೆಕ್ಕವನ್ನೆಲ್ಲ ಶೋಭಾ ನೇರವಾಗಿ ಜಯೇಂದ್ರನಿಗೆ ಸಲ್ಲಿಸತಕ್ಕದ್ದು. ಪ್ರಿನ್ಸಿಪಲ್ ಸೆಕ್ರಟರಿ ಳಿಗಾರ್ ಒಂದೋ ವಿಜಯೇಂದ್ರ ಮಾತು ಳಬೇಕು ಹಾಗೊಮ್ಮೆ ಕರಂದ್ಲಾಜೆಯ ಡೀಲಾದರೆ ದನ್ನು ವಿಜಯೇಂದ್ರನ ಗಮನಕ್ಕೆ ತರಬೇಕು.

ಯಡ್ಡಿಯ ಹೆಣ್ಣುಮಕ್ಕಳು, ಅಳಿಯಂದಿರು,


ಶ್ರೀನಿವಾಸ್


ಭಾರತಿಶೆಟ್ಟಿ


ಬಳಿಗಾರ್


ಪ್ರಭು

ಮತ್ತೊಬ್ಬ ಮಗ ರಾಘು ಕೂಡ ವಿಜಯೇಂದ್ರನ ಮೂಲಕವೇ ಬಳಿಗಾರ್‌ಗೆ ಡೀಲೊಪ್ಪಿಸಬೇಕು. ಇದು ಯಡ್ಡಿಯ ಫ್ಯಾಮಿಲಿ ಆಳ್ವಿಕೆಯ ಒಳಒಪ್ಪಂದ. ಈ ಕಾರಣಕ್ಕೆ ಅಪ್ಪನ ಶೋಭಾ ಸಾಂಗತ್ಯಕ್ಕೆ ಯಡ್ಡಿಯ ಕುಟುಂಬ ವರ್ಗ ಹಿಂದಿನಂತೆ ಅಡ್ಡಿಪಡಿಸುತ್ತಿಲ್ಲ.

ಇಂಥದೊಂದು ಅನುಕೂಲವನ್ನು ಇನ್ನಿಲ್ಲದಂತೆ ಸದುಪಯೋಗಪಡಿಸಿಕೊಳ್ಳುತ್ತಿರುವ ಕರಂದ್ಲಾಜೆಗೆ ರೊಕ್ಕ ಬಾಚಲು ಬಿಡುವಾದರೂ ಎಲ್ಲಿದೆ? ಒಂದೆಡೆ ಮೈಸೂರು ಜಿಲ್ಲೆಯ ಅಧಿಪತ್ಯ, ಮತ್ತೊಂದೆಡೆ ಯಶವಂತಪುರ ಕ್ಷೇತ್ರದ ಪಾರುಪತ್ಯ, ಮಗದೊಂದೆಡೆ ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿಯ ಬಿರಿಯಾನಿ ಭೋಜನ. ಇದನ್ನೆಲ್ಲ ನಿಭಾಯಿಸಲೆಂದೇ ತನ್ನ ಗುರು ಡಾ. ಪ್ರಭಾಕರ್ ರಾವ್ ಎಂಬ ಡೀಲುವೀರನನ್ನು ಕರೆತಂದು ಓಎಸ್‌ಡಿಯನ್ನಾಗಿ ಮಾಡಿಕೊಂಡಿದ್ದಲ್ಲದೇ ವರಸೆಯಲ್ಲಿ ತನಗೆ ಅಕ್ಕನಂತಿರುವ ಭಾರತಿಶೆಟ್ಟಿ ಎಂಬಾಕೆಯನ್ನು ಮನೆಯಲ್ಲೇ ಜೊತೆಗಿಟ್ಟುಕೊಂಡಿದ್ದಾರೆ.

ಮೂಲತಃ ಶಿವಮೊಗ್ಗದ ಈ ಭಾರತಿ ಶೆಟ್ಟಿ ಸದ್ಯ ರಾಜ್ಯ ಬಿಜೆಪಿ ಮಹಿಳಾ ಮೋರ್ಚಾದ ಅಧ್ಯಕ್ಷೆ. ಯಡ್ಡಿಯ ಮಟ್ಟಿಗೆ ಕರಂದ್ಲಾಜೆಯಷ್ಟೇ ಪರಮಾಪ್ತೆ, ಮಹಾನ್ ಕಸುಬುಗಾತಿ ಕೂಡ. ಇವತ್ತಲ್ಲಾ ನಾಳೆ ಕರಂದ್ಲಾಜೆಯನ್ನು ಉಪಮುಖ್ಯಮಂತ್ರಿ ಮಾಡುವುದು ಯಡ್ಡಿಯ ಹುನ್ನಾರ. ಆಗ ಕರಂದ್ಲಾಜೆ ತಮಿಳುನಾಡಿನ ಜಯಲಲಿತಾಳಂಥಾದರೆ ಭಾರತಿಶೆಟ್ಟಿ ಖಂಡಿತಾ ಆಕೆಯ ಪಾಲಿಗೆ ಶಶಿಕಲಾ ನಟರಾಜನ್ ಆಗುತ್ತಾಳೆ. ಯಡ್ಡಿಯದೇನಿದ್ದರೂ ಎಂಜಿಆರ್ ಪಾತ್ರ ಮಾತ್ರ!


ಜೊತೆಗೆ ಕರಂದ್ಲಾಜೆಯ ಪಿಎ ರವೀಂದ್ರ ಬೊಂಗಾಳೆ ಮತ್ತು ಪ್ರಭು ಎಂಬಿಬ್ಬರೂ ಕರಟಕ-ಧಮನಕರಂತೆ ಶಾಸಕರನ್ನು ಕಾಡುತ್ತಾರೆ. ಯಶವಂತಪುರ ಕ್ಷೇತ್ರವೊಂದಕ್ಕೇ ಪ್ರತಿ ಮೂರು ತಿಂಗಳಿಗೊಮ್ಮೆ ಐವತ್ತು ಕೋಟಿಯಷ್ಟು ಕಾಮಗಾರಿ ಮಂಜೂರಾಗುತ್ತಿದೆ. ಕೆಂಗೇರಿಯ ಸುತ್ತಮುತ್ತ ಕರಂದ್ಲಾಜೆ ಬೇನಾಮಿ ಹೆಸರುಗಳಲ್ಲಿ ಖರೀದಿಸಿದ ಜಮೀನು, ಮೈಸೂರಿನ ಅಷ್ಟದಿಕ್ಕುಗಳಲ್ಲೂ ಕರಂದ್ಲಾಜೆ ಉಡಿತುಂಬಿಸಿಕೊಳ್ಳುತ್ತಿರುವ ಸೈಟುಗಳು, ಕೊನೆಕೊನೆಗೆ ಚಾಮುಂಡಿ ಬೆಟ್ಟದ ತಪ್ಪಲಲ್ಲಿ ಗಿರಿಜನರಿಗೆಂದು ಮಂಜೂರಾದ ಭೂಮಿಗೂ ಬಾಯಿ ಹಾಕಲು ಹೋಗಿ ಕರಂದ್ಲಾಜೆಯ ವಿರುದ್ಧ ಗಿರಿಜನರೇ ಬೀದಿಗಿಳಿದು ಪ್ರತಿಭಟಿಸಿದ್ದು ಆಕೆಯ ಅಗಾಧ ಭೂದಾಹ ಮತ್ತು ಖಮಾಯಿಯ ಪರಿಮಾಣದ ನಿದರ್ಶನವಷ್ಟೆ.

ನವೆಂಬರ್ 27 ರ ಕ್ಯಾಬಿನೆಟ್ ಮೀಟಿಂಗಿಗೆ ಸಾರಿಗೆ ಮಂತ್ರಿ ಅಶೋಕ್ ಗೈರುಹಾಜರಾಗಿದ್ದು ಕೂಡ ಶೋಭಾ ಕಾರಣಕ್ಕೇ ಎಂಬುದು ರಹಸ್ಯವೇನಲ್ಲ. ಯಡ್ಡಿ ಮಗ ವಿಜಯೇಂದ್ರನ ಮಾತು ನಡೆಯದೇ ಹೋದರೂ ಶೋಭಾ ಅಣತಿಗೆ ಮಾತ್ರ ಎಲ್ಲಿಲ್ಲದ ಪ್ರಾಮುಖ್ಯತೆಯೆಂದರೆ ಯಾವ ಎಮ್ಮೆಲ್ಲೆಗೆ ಹೊಟ್ಟೆ ಉರಿಯೋಲ್ಲ?

ಶೋಭಾ ಸಖ್ಯಕ್ಕೆ ಯಡ್ಡಿ ದಂಡ ಕಟ್ಟಲೇಬೇಕು. ಇವತ್ತಲ್ಲ ನಾಳೆಯಾದರೂ ಅದು ಕಟ್ಟಿಟ್ಟಬುತ್ತಿ! ■

ಸೀತಾಮಾತೆನ ಸೀತಾ ಬೆಹನ್ ಅಂದ್ರೆ ಚೆನ್ನಾಗಿರುತ್ತೇನ್ರಿ?

ಎಲ್.ಕೆ. ಅಡ್ವಾಣಿಯವರ ಮೂಲಸ್ಥಾನದಿಂದ ಹಾರಿಬಂದ ರಣಹದ್ದುಗಳು ಬೊಂಬಾಯಿಯ ಅಮಾಯಕರನ್ನು ಜೀವಂತ ಕುಕ್ಕಿ ತಿಂದಿವೆ. ನಮ್ಮ ಕಮಾಂಡೋಗಳು ಒಂದು ರೀತಿ ಹುತಾತ್ಮರಾಗಿದ್ದಾರೆ. ಹೆಂಡತಿ ಗಂಡನನ್ನು ಕಳೆದುಕೊಂಡಿದ್ದಾಳೆ. ಮಕ್ಕಳು ಅಪ್ಪನನ್ನು ಕಳೆದುಕೊಂಡಿವೆ. ಅದಕ್ಕಿಂತ ಕಳೆದ ವರ್ಷವಷ್ಟೇ ಸಂದೀಪನ ಕೈಹಿಡಿದ ನವವಧು ಶೋಕ ಸಾಗರಕ್ಕೆ ಅನಾಮತ್ತು ತಳ್ಳಲ್ಪಟ್ಟಿದ್ದಾಳೆ. ಈ ಸಮಯದಲ್ಲಿ ಹಾಸ್ಯ ಮಾಡಬಾರದು. ಆದರೂ ಈ ನಮ್ಮ ಚೆಡ್ಡಿ ಮಹಾಶಯರ ಅಸಂಬದ್ಧ ಹೇಳಿಕೆಗಳಿಗೆ ಏನೆನ್ನಬೇಕು? ಕುಬೇರನ ಖಜಾನೆ ಕಾಯುತ್ತಿರುವ ಕಳ್ಳ ಕಾವಲುಗಾರನಂತೆ ಕಾಣುವ ನರೇಂದ್ರ ಮೋದಿ ಎಂಬ ನರಹಂತಕ, ಭಯೋತ್ಪಾದಕರ ಗುಂಡಿಗೆ ಎದೆಯೊಡ್ಡಿದ ಕರ್ಕರೆಯವರ ಕುಟುಂಬಕ್ಕೆ ಒಂದು ಕೋಟಿ ಧನಸಹಾಯ ಘೋಷಿಸಿಬಿಟ್ಟನಂತಲ್ಲಾ, ನೀವೇ ಯೋಚಿಸಿ. ಕರ್ಕರೆ, ವಿಜಯ ಸಾಲಸ್ಕರ್ ಶವಗಳು ಯುದ್ಧ ಭೂಮಿಯಲ್ಲಿ ಮಡಿದ ವೀರಯೋಧರಂತೆ ಬಿದ್ದಿವೆ. ಧರ್ಮಪತ್ನಿಯರ ಗೋಳು ಭೂಮಿ ಬಿರಿಯುವಂತಿದೆ. ತಮ್ಮವರು ಸತ್ತಿರುವುದನ್ನೇ ನಂಬಲಾಗುತ್ತಿಲ್ಲ, ಅಂತಹ ಜಾಗಕ್ಕೆ ಹೋದ ಈ ಚೆಡ್ಡಿಗಳು ಸಾಂತ್ವನದ ಮಾತುಗಳನ್ನಾಡುವುದು ಬಿಟ್ಟು ಒಂದು ಕೋಟಿ ಕೊಡುತ್ತೇನೆ ಎಂದರೆ ಈ ನರಹಂತಕನಿಗೇನಾದರೂ ಮನುಷ್ಯತ್ವವಿದೆಯೇ? ಅದಕ್ಕೆ ನಮ್ಮ ವೀರಯೋಧರ ಪತ್ನಿಯರು ಮೋದಿಯ ಮುಖಕ್ಕೆ ಹೊಡೆದಂತೆ ಬೇಡ ಎಂದಿರುವುದು. ಇದರಿಂದ ಒಂದು ಕೋಟಿಯನ್ನು ಬಹಳ ದೊಡ್ಡದಾಗಿ ಕಾಣುವ ಮೋದಿ ತತ್ತರಿಸಿ ಹೋದನಂತಲ್ಲಾ, ಥೂತ್ತೇರಿ!



* * * *

ನಮ್ಮ ವೀರ ಕಮಾಂಡೆಂಟ್ ಸಂದೀಪ್ ಉನ್ನಿಕೃಷ್ಣ ಅವರ ಮನೆಗೆ ಹೋದ ಎಡೆಯೂರಪ್ಪನವರು, ಆಡಬಹುದಾದ ನಾಲ್ಕು ಸಾಂತ್ವನದ ಮಾತಿಗೂ ಚೀಟಿ ಬರೆದುಕೊಂಡು ಹೋಗಿದ್ದರಂತಲ್ಲಾ, ಇದೇಕೆ ಹೀಗೆ ಎಂದು ಕೇಳಿದರೆ, ಚೆಡ್ಡಿಗಳಿಗೆ ಭಯಮಿಶ್ರಿತ ವೀರಾವೇಶದ ಮಾತನಾಡಿ ಗೊತ್ತೇ ಹೊರತು ಸಾವಿನ ಸಂದರ್ಭದ ಸಾಂತ್ವನದ ಮಾತುಗಳು ಬರುವುದಿಲ್ಲವಂತೆ. ಆದ್ದರಿಂದ ಸಂದೀಪ್ ಮನೆಯಲ್ಲಿ ಎಡೂರಪ್ಪ ಇನ್ನೇನಾದರೂ ಬಾಯಿಗೆ ಬಂದಿದ್ದನ್ನು ಮಾತನಾಡಿ ದುಃಖ ಸಾಗರದಲ್ಲಿ ಮುಳುಗಿದವರ ಎದುರು ಹಾಸ್ಯಾಸ್ಪದವಾಗುವುದನ್ನು ಅವಾಯ್ಡ್ ಮಾಡಿಕೊಳ್ಳಲು ಚೀಟಿ ಬರೆದುಕೊಂಡು ಹೋಗಿದ್ದರಂತಲ್ಲಾ, ಥೂತ್ತೇರಿ!!

* * * *

ನಮ್ಮ ಚಿಕ್ಕಮಗಳೂರು ಶಾಸಕ ಸೀಮೆಎಣ್ಣೆ ಸೀಟಿ ರವಿ, ಕನ್ನಡ ರಾಜ್ಯೋತ್ಸವ ಮಾಡುತ್ತ ಬಹಳ ಚೆನ್ನಾಗಿ ಮಾತನಾಡಿದನೆಂಬ ವರದಿ ಬಂದಿದೆಯಲ್ಲಾ, ಅದೇನು ಮಾತನಾಡಿದಪ್ಪ ಎಂದು ಕೇಳುವ ಕುತೂಹಲವಾಗಿ ಫೋನ್ ಮಾಡಿದರೆ ಫೋನ್ ರಿಂಗಾಯ್ತು.

"ಹಲೋ ಸಾರ್, ನಾನು ಪತ್ರಕರ್ತ."

"ಯಾವ ಪತ್ರಿಕೆರಿ?"

"ಮಲೆನಾಡ ನರಿ ಅಂತ ಸಾರ್."

"ಇದೇನ್ರಿ ಈ ತರ ಹೆಸರಿಟ್ಟಿದ್ದೀರೀ?"

"ಹೌದು ಸಾರ್, ಈ ಹಾಳು ಮಲೆನಾಡಲ್ಲಿ ನರಿಗಳು ಬದುಕೋದು ಕಷ್ಟ ಆಗಿದೆ ಸಾರ್, ಅದ್ಕೆ ಆ ತರ ಹೆಸರಿಟ್ಟೆ."

"ನಿಜಾರಿ, ನನ್ನಂಥ ಶಾಸಕನಿಗೇ ನಕ್ಸಲೈಟರ ಭಯ ಇದೆ ಅಂದ್ರೆ ಇನ್ನ ಕಾಡಲ್ಲಿರೊ ನರಿ ಅದ್ಹೇಗಿದೆಯೋ, ರಾಮನಿಗೇ ಗೊತ್ತು."

"ಯಾಕೆ ದತ್ತನ ಬಿಟ್ರಿ ಸಾರ್?"

"ಅದೇಗೆ ಬಿಡೋಕಾಗತ್ತೆ? ನನ್ನನ್ನ ಶಾಸಕನನ್ನಾಗಿ ಮಾಡಿದವನೇ ದತ್ತಾತ್ರೇಯ!"

ಥೂತ್ತೇರಿ

ಯಾಹೂ

"ಸದ್ಯ ಮಂತ್ರಿ ಮಾಡಲಿಲ್ಲವಲ್ಲ."

"ಏನಂದ್ರಿ?"

"ಮಂತ್ರಿನೂ ಆಗ್ತಿರಿ ಬಿಡಿ ಸಾರ್."

"ಫೋನು ಮಾಡಿದ್ದೇಕೆ ಹೇಳಿ?"

"ಕನ್ನಡ ರಾಜ್ಯೋತ್ಸವದಲ್ಲಿ ಚೆನ್ನಾಗಿ ಮಾತನಾಡಿದರಂತೆ?"

"ಹೌದು ರೀ. ನಮ್ಮ ಕನ್ನಡಭಾಷೆ ಎಷ್ಟು ಚೆನ್ನಾಗಿದೆ ನೋಡಿ. ಅಮ್ಮ ಅನ್ನೊ ಮಾತು ಹೊಕ್ಕಳದಿಂದ ಬರುತ್ತೆ. ಅದೇ ಬೇರೆ ಭಾಷೆಲಿ ಹಾಗಲ್ಲ."

"ಬೇರೆ ಭಾಷೇಲಿ ಅಮ್ಮ ಅನ್ನೊ ಪದ ಎಲ್ಲಿಂದ ಬರುತ್ತೆ ಸಾರ್?"

"ಬಾಯಿಂದ್ಲೆ ಬರುತ್ತೆ ಕಂಡ್ರೀ. ಅಮ್ಮ ಅಂದ್ರೆ ನಮ್ಮ ಎರಡೂ ತುಟಿ ಕೂಡುತವೆ. ಅದೇ ಮಮ್ಮಿ ಅನ್ನಿ ಕೂಡಲ್ಲ."

"ಇದೇನ್ರಿ ಹಿಂಗೇಳ್ತೀರಿ? ಮಮ್ಮಿ ಅಂದ್ರೆ ಎರಡು ತುಟಿ ಕೂಡುತವೆ, ಅಮ್ಮ ಅಂದ್ರು ಕೂಡ್ತವೆ."

"ಇರಬಹುದು, ಆದ್ರೆ ನಮ್ಮ ಭಾಷೆಲಿ ಸೀತಾಮಾತೆ ಅಂದ್ರೆ ಎಷ್ಟು ಚೆನ್ನಾಗಿರುತ್ತೆ? ಅದೇ ಸೀತಾ ಬೆಹನ್ ಅಂದ್ರೆ ಚೆನ್ನಾಗಿರುತ್ತಾ?

"ಆಯ್ತು ಸೀತಾಮಾತೆ ಅಂತ್ಲೆ ಅನ್ನಿ, ಬೆಹನ್ ಅಂತ ಯಾಕಂತಿರಿ?"

"ನಮ್ಮ ಭಾಷೆಲಿರೊ ಭಾವನೆಗಳ ಹೇಳೋಕೆ ಹಾಗಂದೆ ಕಂಡ್ರೀ."

"ನೋಡಿ ಇವ್ರೆ, ಭಾಷೆಗಿಂತ ಮನುಷ್ಯ ಮುಖ್ಯ. ಮನುಷ್ಯ ಈ ಪ್ರಪಂಚದ ಯಾವುದೇ ಮೂಲೆಲಿರ್ಲಿ ಅವನು ಮನುಷ್ಯ. ಅವನ ಭಾವನೆಗಳೆಲ್ಲಾ ಒಂದೆ; ಭಾಷೆ ಬೇರೆ ಅಷ್ಟೆ. ಭಾಷೆ ಬೇರೆ ಆದ ಕಾರಣಕ್ಕೆ ಭಾವನೆ ಬೇರೆ ಆಗಲ್ಲಾ. ನೀನು ನಿನ್ನಮ್ಮನ್ನ ಕರಿಯೋ ಭಾವನೆಲೇ ಚಿಕ್ಕಮಗಳೂರು ಮುಸ್ತಫನೂ ಅವರಮ್ಮನ್ನ ಕರಿತನೆ. ಇಂತಹ ಸಣ್ಣ ವಿಷಯಗಳೆಲ್ಲಾ ನಿಮ್ಮಂತವರಿಗೆ ಹೊಳೆಯೋದು ಯಾವಾಗ?"

"ಇದು ಸಣ್ಣ ವಿಷಯ ಅಲ್ರೀ, ನಮ್ಮ ಭಾಷೆ ಭಾವನೆ ವಿಷಯ."

"ನಮ್ಮ ಭಾಷೆ ಆದರಷ್ಟಕ್ಕೆ ಅಧ್ಹಿದೆ. ಅದನ್ನ ಹಾಳು ಮಾಡಕ್ಹೋಗಬೇಡಿ."

"ಹಾಳು ಮಾಡೋರಿಗೆ ಎಚ್ಚರಿಕೆ ಹೇಳಿದೆ ಕಂಡ್ರಿ."

"ಎಚ್ಚರಿಕೆ ಹೇಳಕ್ಕೆ ನೀನೇನು ಭಾಷೆ ಸೃಷ್ಟಿ ಮಾಡಿದ್ಯಾ? ನಿನ್ನ ಜೀವಿತಾವಧಿಯಲ್ಲಿ ಬೇಕಾದಷ್ಟು ದುಡ್ಡು ಸಂಪಾದನೆ ಮಾಡಿದಿಯೇ ಹೊರತು ಒಂದೇ ಒಂದು ಪದ ಸೃಷ್ಟಿ ಮಾಡಲಿಲ್ಲ. ಇರೋ ಭಾಷೆನ ಇರೋತರ ಅದರ ಮೂಲ ಸೊಗಡು ಹಾಳಾಗದಂಗೆ ಮಾತಾಡಿದ್ರೆ ಸಾಕಪ್ಪ ಅದುಬುಟ್ಟು ಸೀತಾ ಬೆಹನ್, ಸೀತಾ ಸಿಸ್ಟರ್, ಸೀತಾ ಬಾಜಿ ಅಂತ ಏನೇನೊ ಹೇಳ್ತಿಯಲ್ಲಾ, ನಿನಿಗೇನಾಗಿದೆ? ಭಾಷೆ ತಗಂಡೋಗಿ ಧರ್ಮಕ್ಕೆ ಜಾತಿಗೆ ತಾಗುಸ್ತಿಯಲ್ಲಾ, ಸರಿನಾ?"

"ರೀ ಸರಿಯಾಗಿ ಮಾತಾಡಿ!"

"ಸಾರಿ ಸಾರ್. ಭಾಷೆ ವಿಷಯಕ್ಕೆ ಬಂದ್ರೆ ನಾನು ಭಾವುಕನಾಗಿ ಏನೇನೋ ಮಾತಾಡ್ತಿನಿ, ಸಾರಿ, ಸಾರಿ."

"ನಾನು ಅಷ್ಟೆ ಕಣ್ರಿ. ಧರ್ಮದ ವಿಷಯಕ್ಕೆ ಬಂದ್ರೆ ಏನೇನೊ ಮಾತಾಡಿಬಿಡ್ತಿನಿ. ತೀರಾ ತಲೆ ಕೆಟ್ಟರೆ ಸೀಮೆಎಣ್ಣೆ ಡಬ್ಬ ಹುಡುಕ್ತ ಹೋಗಿ ಬಿಡ್ತಿನಿ."

"ಥೂ, ಥೂ, ಥೂತ್ತೇರಿ!" ■



ಮುಂಬೈ ಮೇರಿ ಜಾನ್!

ಭಾರತೀಯರ ಸಾಲಿನ ದುಃಸ್ವಪ್ನಗಳ ಸರಮಾಲೆಯ ಇನ್ನೊಂದು ದೃಶ್ಯ ಈಗ ಮುಗಿದಿದೆ. ಇತ್ತೀಚೆಗೆ ತಾನೆ ರಾಜ್ ಠಾಕ್ರೆಯ ಭಯೋತ್ಪಾದನೆಗೆ ಸಿಲುಕಿ ನಲುಗಿದ್ದ ಮುಂಬೈವಾಸಿ ಸಮಸ್ತ ಭಾರತೀಯರೂ ಈಗ ಅದಕ್ಕಿಂತ ಭಯಾನಕ ಘಟನೆಗಳನ್ನು ಅನುಭವಿಸಿದ್ದಾರೆ. ನಿಸ್ಸಂಶಯವಾಗಿ ಇದೊಂದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಯೋಜಿತವಾಗಿರುವ ಭಯೋತ್ಪಾದಕ ದುಷ್ಕೃತ್ಯದಂತೆ ಕಾಣುತ್ತಿದೆ. ಈ ಅನಾಹುತಗಳ ಹಿನ್ನೆಲೆಯಲ್ಲಿ ಆಂತರಿಕ ಹಾಗೂ ಬಾಹ್ಯ ಕಾರಣಗಳಿರಲಿಕ್ಕೂ ಸಾಕು.

ಮುಖ್ಯವಾಗಿ ಭಾರತದೊಳಗೆ ಮುಸ್ಲಿಮರ ಮೇಲೆ ಸಂಘಪರಿವಾರಿಗಳು ನಿರಂತರವಾಗಿ ನಡೆಸುತ್ತಿರುವ ದಮನಕಾಂಡ ಹಾಗೂ ಭಾರತ ಸರ್ಕಾರ ಅಂತರಾಷ್ಟ್ರೀಯ ಮಟ್ಟದಲ್ಲಿ ಅಮೆರಿಕ, ಇಂಗ್ಲೆಂಡ್ ಹಾಗೂ ಇಸ್ರೇಲ್‌ನೊಂದಿಗೆ ಕೈಜೋಡಿಸುತ್ತಿರುವುದು ಇಂತಹ ಭಯೋತ್ಪಾದಕ ಪ್ರಕ್ರಿಯೆಗಳಿಗೆ ದಾರಿಮಾಡಿಕೊಡುತ್ತಿರುವ ಸಾಧ್ಯತೆಗಳಿವೆ. ಆ ಕಾರಣಗಳಿಂದಾಗಿ ಭಾರತೀಯ ಸೆಕ್ಯೂರಿಟಿ ಏಜೆನ್ಸಿಗಳು ಗೆದ್ದೂ ಸೋತಿರುವ ಘರ್ಷಣೆ ಇದು.

ಭಾರತೀಯ ಕಮಾಂಡೋಗಳು ತಮಗೊಪ್ಪಿಸಿದ್ದ ಕೆಲಸವನ್ನು ಅತ್ಯಂತ ಧೈರ್ಯ, ಸಾಹಸದಿಂದ ಮಾಡಿ ತೋರಿಸಿದ್ದಾರೆ. ಮೂರು ದಿನಗಳ ಕಾಲ ಬರೀ ಮುಂಬೈ ಮಾತ್ರವಲ್ಲ ಇಡೀ ಇಂಡಿಯಾವನ್ನೇ ಆತಂಕಕ್ಕೆ ದೂಡಿದ್ದ ಉಗ್ರರನ್ನು ಕೊಂದು ಕೆಡವಿ, ತಮ್ಮವರಿಬ್ಬರನ್ನೂ ಬಲಿಕೊಟ್ಟು ಕೊನೆಗೆ ಯಾವುದೇ **Heroic** ಪೋಜೂ ಕೊಡದೆ ಮರಳಿ ತಮ್ಮ ಬ್ಯಾರಕ್‌ಗಳಿಗೆ ಹೊರಟು ಹೋಗಿದ್ದಾರೆ.

ಅವರ ಪಾಲಿಗಿದು ಗೆದ್ದ ಯುದ್ಧ. ಆದರೆ ನಮ್ಮ 'ನೇತಾ' ಗಳಿಂದಾಗಿ ನಾವೀ ಸಂಘರ್ಷದಲ್ಲಿ ಸೋತಿದ್ದೇವೆ. 200ರಷ್ಟು ಮುಗ್ಧ ನಾಗರಿಕರು ಮುಂಬೈನಲ್ಲಿ ಬಲಿಯಾಗಿದ್ದಾರೆ.

ಕಳೆದ ವಾರ ಮುಂಬೈಯಲ್ಲೇನಾಯಿತು, ಯಾಕಾಯಿತು, ಯಾರಿಂದ ಈ ದುರ್ಘಟನೆ ಸಂಭವಿಸಿತೆಂದು ಅರ್ಥಮಾಡಿಕೊಳ್ಳಲು ನಮಗೆ ಭಾರತೀಯ ಪತ್ರಿಕೆ–ಟಿವಿ ಚಾನೆಲ್‌ಗಳ ವಿಶ್ಲೇಷಣೆ- ಬೂಸಾ ತರಹದ ಗದ್ದಲದ ವರದಿಗಳಷ್ಟೇ ಸಾಕಾಗುವುದಿಲ್ಲ.

ಉದಾಹರಣೆಗೆ ಈ ಉಗ್ರರು ಯಾರೆಂಬ ವಿಚಾರವನ್ನೇ ತೆಗೆದುಕೊ… ಲಷ್ಕರ್-ಎ-ತೊಯ್ಬಾ ಅಥವಾ ಪಾಕಿಸ್ತಾನದವರು ಎಂಬುದನ್ನು ಬಿಟ್ಟರೆ ತ… ಅಲ್ಲಿಂದಾಚೆಗೆ ಬೆಳೆಯುವುದೇ ಇಲ್ಲ. ಈಗ ಪೊಲೀಸರಿಗೆ ಸಿಕ್ಕಿರುವ ಉ… ಕಸಬ್ ಹಲವಾರು ಸಂಗತಿಗಳನ್ನು ಮಾತಾಡಿದ್ದಾನೆ. ಇನ್ನೂ ಹದಿನೆಂ… ವಯಸ್ಸಿನ ಇಂಗ್ಲಿಷ್ ಕೂಡ ಮಾತಾಡಬಲ್ಲ ಕಸಬ್ ಮೂಲತಃ ಕಾಶ್ಮೀರದವ… ತನ್ನೊಂದಿಗಿದ್ದವನು ಅಬು ಅಲಿ, ಫಹಾದ್, ಒಮರ್, ಶೋಯಬ್, ಇಸ್ಮಾಯಿ… (ಕರ್ಕರೆ ಕೊಂದವನು), ಉಮರ್, ಅಬು ಅಕ್ಸಾ, ಅಬ್ದುಲ್ ರೆಹಮಾನ್(ಬಡ… ಅಬ್ದುಲ್ ರೆಹಮಾನ್(ಚೋಟಾ)ಗಳೆಂದು ಹೇಳಿಕೊಂಡಿದ್ದಾನಂತೆ.

ವಿದೇಶಿ ಟೆರರಿಸಂ ತಜ್ಞರ ಪ್ರಕಾರ ಇವರು ಸೂಸೈಡ್ ಬಾಂಬರ್‌ಗಳಾಗಿರ… ಕಾರಣ ಅಲ್‌ಕೈದಾಗಳಲ್ಲ. ಗ್ರೆನೇಡ್ ಬಳಸದ ಕಾರಣ ಲಷ್ಕರ್‌ಗಳಲ್ಲ. … ಹಿಂದೆ ಹೆಸರೇ ಕೇಳಿರದ ಕಾರಣ ಡೆಕ್ಕನ್ ಮುಜಾಹಿದೀನ್‌ಗಳಲ್ಲ. ಹಾಗ… ಭಾರತದ ಬೇರೆಬೇರೆ ಕಡೆ ಕಾರ್ಯಾಚರಿಸುತ್ತಿರುವ ಹಲವಾರು ಇಸ್ಲಾಮಿ… ಮಿಲಿಟೆಂಟ್ ಗ್ರೂಪ್‌ಗಳೆಲ್ಲ ಸೇರಿ ಕೆಲ ವಿದೇಶಿ ಗುಂಪುಗಳ ಸಹಕಾರದೊಂದಿ… ನಡೆಸಿರಬಹುದಾದ ದಾಳಿ ಇದೆಂದು ಅನುಮಾನಪಡುತ್ತಿದ್ದಾರೆ. ಇದು ನಿಜ… ಆಗಿದ್ದಲ್ಲಿ ಭಾರತೀಯರ ಭವಿಷ್ಯದ ದಿನಗಳು ಬಹುಶಃ ಇನ… ಭಯಾನಕವಾಗಬಹುದು. ನ್ಯೂಯಾರ್ಕ್ ಟೈಮ್ಸ್‌ನಲ್ಲಿ ಮುಂಬೈ ಘಟನೆ ಬ… ವಿಶ್ಲೇಷಣೆ ಮಾಡಿರುವ ತಜ್ಞೆ ಕ್ರಿಸ್ಟೋಫರ್ ಫೇಡ್ ಎನ್ನುವವಳು 'ಭಾರ… ತನ್ನೊಳಗೆ ರೊಚ್ಚಿಗೆದ್ದಿರುವ ಅಸಂಖ್ಯಾತ ಮುಸ್ಲಿಮರನ್ನು ಹೊಂದಿದೆ' ಎಂ… ಬೊಟ್ಟು ಮಾಡಿ ತೋರಿದ್ದಾಳೆ.

ಸಂಘಪರಿವಾರಿಗಳ ದುಷ್ಕೃತ್ಯಗಳು ಹೀಗೇ ಮುಂದುವರೆಯುತ್ತಿದ್ದರೆ ಹ… ರೊಚ್ಚಿಗೇಳುವವರ ಸಂಖ್ಯೆ ಜಾಸ್ತಿಯಾಗಬಹುದಲ್ಲವೇ?

ಈ ಉಗ್ರರು ಯಾವುದೇ ನೆಲೆಯಿಂದ ಹೊರಟಿರಲಿ, ಅವರಿಗೆ ವಿದೇ… ಶಕ್ತಿಗಳ ನೆರವು ಸಿಕ್ಕಿರುವುದಂತೂ ದಿಟ. ಅವರು ಬಳಸಿರುವ ಅಸಾ… ರೈಫಲ್‌ಗಳು, ಅತ್ಯಾಧುನಿಕ ಗ್ರೆನೇಡುಗಳು, ತರಬೇತಿ, ಖರ್ಚಾಗಿರಬಹುದಾ… ಹಣ, **Co-ordination** ಗಳೇ ಇದಕ್ಕೆ ಸಾಕ್ಷಿ. ಇಷ್ಟು ವಿವರಗಳನ… ಗಮನಿಸಿದ ಮೇಲೆ ಈ ದಾಳಿ ಯಾಕಾಯಿತು ಎಂಬ ಪ್ರಶ್ನೆ ಉಳಿದ… ಉಳಿಯುತ್ತದೆ.

ಅದನ್ನು ನೋಡಲು ನಾವು ಉಗ್ರರ ಟಾರ್ಗೆಟ್‌ಗಳೇನಾಗಿದ್ದವೆಂಬುದನ… ನೋಡಬೇಕು.

ಇಸ್ರೇಲಿಗಳ ತಾಣವೆಂಬ ಕಾರಣಕ್ಕಾಗಿ ನಾರಿಮನ್ ಹೌಸ್. ಹೆಚ್ಚಿ… ಸಂಖ್ಯೆಯಲ್ಲಿ ವಿದೇಶಿಯರಿರುತ್ತಾರೆಂದು ತಾಜ್ ಹಾಗೂ ಒಬೇರಾಯ… ಹೋಟೆಲ್‌ಗಳು ಉಗ್ರರ ಗುರಿಯಾಗಿದ್ದವು. ತಾಜ್ ಹೋಟೆಲ್‌ನಲ್ಲಂತ… ಒತ್ತೆಯಾಳುಗಳ ಪೈಕಿ ಅಮೆರಿಕ, ಬ್ರಿಟಿಷ್ ಪ್ರಜೆಗಳನ್ನು ಹುಡುಕಿ ಹುಡು… ಪ್ರತ್ಯೇಕ ಮಾಡಿದ ಉಗ್ರರು ಅಲ್ಲಿ ಸಿಕ್ಕ ರಷ್ಯಾ ಚೀನಾ ಹಾಗೂ ದಕ್ಷಿಣ ಆಫ್ರಿ… ಪ್ರಜೆಗಳನ್ನು ಬಿಟ್ಟು ಕಳಿಸಿದ್ದಾರೆ. ಅಮೆರಿಕನ್-ಬ್ರಿಟಿಷ್ ನಾಗರಿಕರ… ಗುಂಡಿಟ್ಟಿದ್ದಾರೆ. ಇರಾಕ್, ಅಫಘಾನಿಸ್ತಾನ ಹಾಗೂ ಪ್ಯಾಲೆಸ್ಟೀನ್‌ಗಳಲ್ಲಿ … ಮೂರು ದೇಶಗಳು ನಡೆಸುತ್ತಿರುವ ದೌರ್ಜನ್ಯಗಳಿಗೆ ಇಲ್ಲಿ ಭಾರತದಲ್ಲಿ ಸೇಡ… ತೀರಿಸಿಕೊಳ್ಳುವಂತಿತ್ತು ಉಗ್ರರ ಧೋರಣೆ. ಭಾರತ ಸರ್ಕಾರದ ವಿದೇಶಾಂ… ನೀತಿಗಳಂತೂ ಕೆಲ ವರ್ಷಗಳಿಂದ ಅಮೆರಿಕದ ಹಿತಾಸಕ್ತಿಗಳ ಪರವಾಗಿ… ಇರುವುದರಿಂದ ಈ ದಾಳಿಗಳಿಗೆ ಭಾರತದ ಮುಂಬೈ ನಗರವನ್ನೇ ಅವ… ಸುಲಭದ ಗುರಿ ಮಾಡಿಕೊಂಡುಬಿಟ್ಟರು.

ಈ ದಾಳಿಗಳು ಯಾಕೆ ನಡೆದವು, ಯಾರಿಂದ ನಡೆಯಿತೆಂಬ ಬ… ಇನ್ನೂ ಬೇಕಾದಷ್ಟು ವಿವರಗಳು ಹೊರಬರಬೇಕಿವೆ. ಆದರೆ ನಮ್ಮ ಸರ್ಕಾ… ಇಂಥವನ್ನು ಹೇಗೆ ಅರ್ಥೈಸುತ್ತವೆಂಬುದರ ಮೇಲಷ್ಟೇ ಅದು ನಿಂತಿದ… ಉದಾಹರಣೆಗೆ ಈ ಕಾರ್ಯಾಚರಣೆಯಲ್ಲಿ ಸತ್ತ ಉಗ್ರರ ವಿವರಗಳು ತಕ್ಷಣ… ಸಿಗದಿದ್ದರೂ ಅವರ ಫೋಟೋಗಳಂತೂ ಇವೆ ತಾನೆ. ಅದನ್ನೇ…

ಟೆರರಿಸ್ಟ್ ಮೋದಿ ಹಣ ನಿರಾಕರಿಸಿದ ಕರ್ಕರೆ ಪತ್ನಿ

ಗುಜರಾತ್ ಮುಖ್ಯಮಂತ್ರಿ, ಹಿಂದೂತ್ವ ಭಯೋತ್ಪಾದಕ ನರೇಂದ್ರ ಮೋದಿಗೆ ಕಪಾಳ ಮೋಕ್ಷವಾಗಿದೆ.

ಮುಂಬೈ ದಾಳಿಯಲ್ಲಿ ಮೃತಪಟ್ಟ ಪೊಲೀಸರ ಕುಟುಂಬಗಳಿಗೆ ತಾನು ಒಂದು ಕೋಟಿ ರೂಪಾಯಿ ಪರಿಹಾರ ನೀಡುವುದಾಗಿ ಮೋದಿ ಪ್ರಕಟಿಸಿದ್ದ.

ಆದರೆ ಹೇಮಂತ್ ಕರ್ಕರೆ ಪತ್ನಿ ಕವಿತಾ ಕರ್ಕರೆ ಈ ಹಣ ತಿರಸ್ಕರಿಸಿದ್ದಾರೆ.

ಇದೇ ಹೇಮಂತ್ ಕರ್ಕರೆ ಹಿಂದೂತ್ವವಾದಿ ಟೆರರಿಸ್ಟರು ನಡೆಸಿದ ಮಾಲೇಗಾಂವ್ ಸ್ಫೋಟದ ಬಗ್ಗೆ ತನಿಖೆ ನಡೆಸುತ್ತಿದ್ದಾಗ ಅಡ್ವಾಣಿ-ಮೋದಿ ಹೇಗೆ ನಡೆದುಕೊಂಡಿದ್ದರು ನೆನಪಿದೆಯೆ?

ಹಿಂದೂ ಟೆರರಿಸಂ ಬಗ್ಗೆ ಮಾತಾಡುವುದೇ ಅಪರಾಧ. ತನಿಖೆ ನಡೆಸುತ್ತಿರುವುದೇ ಘೋರ ಅನ್ಯಾಯ. ಕರ್ಕರೆ ಒಬ್ಬ ಪೂರ್ವಗ್ರಹಪೀಡಿತ ಪೊಲೀಸ್ ಆಫೀಸರ್ ಎಂದು ದೂಷಿಸಿದ್ದರು.

ಬಹುಶಃ ಇದು ಕವಿತಾ ಕರ್ಕರೆಗೆ ಚೆನ್ನಾಗಿ ಅರ್ಥವಾಗಿರಲಿಕ್ಕೂ ಸಾಕು. ಹಾಗಾಗಿ ಅಡ್ವಾಣಿ-ಮೋದಿಗಳ ಮುಖ ನೋಡಲೂ ಇಷ್ಟಪಡದೆ ಮನೆಯಿಂದ ಅಟ್ಟಿದ್ದಾರೆ. ಮೋದಿಯ ಕೋಮುವಾದಿ ಪರಿಹಾರದ ಹಣ ಬೇಡವೆಂದಿದ್ದಾರೆ.



ಮೀಡಿಯಾ ಬಾಯಿಗೆ ಅಪ್ರಜಾತಾಂತ್ರಿಕ ಬೀಗ

ಇದೊಂದು ಉಸಿರುಗಟ್ಟಿಸುವ ಸಂದರ್ಭ.

ಮುಂಬೈ ಮೇಲೆ ದಾಳಿ ನಡೆಸಿದ ಉಗ್ರರ ಉದ್ದೇಶ ಏನಿತ್ತು? ಯಾವ ಪ್ರೇರಣೆ ಅಥವಾ ದುಷ್ಟ ಉದ್ದೇಶಗಳಿಗಾಗಿ ಅವರು ಈ ಅಪಾರ ಪ್ರಮಾಣದ ಹಾನಿಯನ್ನು ಎಸಗಿದರು?



ನಾವೆಲ್ಲಾ ಕಣ್ಣಾರೆ ಕಂಡಂತೆ ಈ ದಾಳಿಯಲ್ಲಿ ಹತ್ತಿರತ್ತಿರ ಇನ್ನೂರು ನಾಗರಿಕರು ಬಲಿಯಾಗಿದ್ದಾರೆ. ನಾಲ್ಕು ಸಾವಿರ ಕೋಟಿ ರೂ.ಗಳಷ್ಟು ನಷ್ಟವಾಗಿದೆ. ಕೋಟಿಗಟ್ಟಲೆ ಜನ ಈ ಭಯಾನಕ ದೃಶ್ಯಗಳನ್ನು ನೋಡಿ ಕಂಗಾಲಾಗಿದ್ದಾರೆ, ಇದೊಂದು ವಿಧ್ವಂಸಕ ಕೃತ್ಯವೆಂಬುದೇನೋ ನಿಜ. ಆದರೆ ಯಾವ ಕಾರಣಕ್ಕಾಗಿ ಹಾಗೂ ಯಾರ ವಿರುದ್ಧ ನಡೆದ ದಾಳಿಯಿದು ಎಂಬುದನ್ನು ಸರ್ಕಾರ ಜನರಿಗೆ ಹೇಳಬೇಕಲ್ಲವೆ?

ಆದರೆ ಭಾರತದಲ್ಲಿ ಹಾಗಾಗುತ್ತಿಲ್ಲ. ಈಗಿರುವ ಭಯೋತ್ಪಾದಕ ನಿಗ್ರಹ ಕಾನೂನುಗಳ ಪ್ರಕಾರ ಯಾವುದೇ ಉಗ್ರಗಾಮಿ ಸಂಘಟನೆಗಳ ನಿಲುವುಗಳನ್ನು ಪ್ರಕಟಿಸುವುದು, ತನಿಖೆ ಮಾಡಿ ವರದಿ ಬರೆಯುವುದು ಹಾಗೂ ಅವುಗಳಿಗೆ ಯಾವುದೇ ರೀತಿಯ ಪ್ರಚಾರ ನೀಡುವುದು ಅಪರಾಧ ಎಂಬ ನಿಲುವು ಸರ್ಕಾರದ್ದು.

ಈ ಕಾನೂನಿನ ಬಿಸಿ ಈಗ ಇಂಡಿಯಾ ಟಿವಿ ಡಾಟ್ ಕಾಮ್‌ಗೆ ತಾಕಿದೆ. ನಾರಿಮನ್ ಹೌಸ್‌ನೊಳಗಿದ್ದ ಉಗ್ರನೊಂದಿಗೆ (ಸಲಾಉದ್ದೀನ್) ಸೆಕ್ಯುರಿಟಿ ಏಜೆನ್ಸಿಯವರು ನಡೆಸಿದರೆನ್ನಲಾದ ಸಂಭಾಷಣೆಯೊಂದನ್ನು ಇಂಡಿಯಾ ಟಿವಿಯವರು ಹೇಗೋ ಪಡೆದುಕೊಂಡರು. ನಂತರ ಅದು ರೀಡಿಫ್ ನ್ಯೂಸ್‌ನಲ್ಲಿ ಇಂಟರ್‌ನೆಟ್‌ನಲ್ಲಿ ಪ್ರಕಟವಾಯಿತು. ಕೆಲ ಪತ್ರಿಕೆಗಳಲ್ಲಿ ಅದರ ವರದಿಯೂ ಬಂತು. ಇದರ ಸತ್ಯಾಸತ್ಯತೆಗಳೇನೇ ಇರಲಿ, ಆದರೆ ಈಗ ಕೇಂದ್ರ ಸರ್ಕಾರ ಇಂಡಿಯಾ ಟಿವಿ ಸಂಸ್ಥೆಗೆ ವರದಿ ಪ್ರಕಟಿಸಿದ್ದಕ್ಕಾಗಿ ನೋಟೀಸ್ ನೀಡಿದೆ.

ರೀಡಿಫ್‌ನಲ್ಲಿ ವರದಿ ಈಗ ಕಣ್ಮರೆಯಾಗಿದೆ. ಇದೇ ಸಂದರ್ಭದಲ್ಲಿ ಇದ… ತದ್ವಿರುದ್ಧವಾದ ವಿದ್ಯಮಾನಗಳು ಸಂಭವಿಸುತ್ತಿವೆ.

ಭಯೋತ್ಪಾದಕರ ನಿಲುವುಗಳನ್ನು ಪ್ರಕಟಿಸುವುದಾಗಲಿ ಅಥವಾ ಅವರನ… ಸಮರ್ಥಿಸುವಂತಹ ವರದಿಗಳನ್ನು ಬಿಂಬಿಸುವುದ… ಅಪರಾಧ ಎಂದಾದಲ್ಲಿ ಆ ಕಾನೂನು ಹಿಂದೂ ಭಯೋ… ತ್ಪಾದಕರಿಗೂ ಅನ್ವಯವಾಗಬೇಕಲ್ಲವೇ?

ಆದರೆ ಇಲ್ಲಿ ಹಾಗಾಗುತ್ತಿಲ್ಲ!

ಉದಾಹರಣೆಗೆ ವಿಜಯಕರ್ನಾಟಕ ಪತ್ರಿಕೆಯನ್ನ… ನೋಡಿ

ಮಾಲೆಗಾಂವ್ ಸ್ಫೋಟ, ಸಂಜೋತ ರೈಲಿ… ಬಾಂಬಿಟ್ಟ ಆರೋಪಿಗಳಾದ ಸಾಧ್ವಿ ಪ್ರಗ್ಯಾಸಿಂಗ್, ಸೈನ್ಯಾ… ಕಾರಿ ಪುರೋಹಿತರ ದುಷ್ಕೃತ್ಯಗಳನ್ನು ಸಮರ್ಥಿಸಿಕೊಂಡ… ಸಂಘಪರಿವಾರದ ಸಂಸದ ರಾಮಾ ಜೋಯಿಸರ ಒಂದ… ಲೇಖನವನ್ನು ವಿಜಯ ಕರ್ನಾಟಕ ಮುಖಪುಟದಲ್ಲ… ಪ್ರಕಟಿಸಿತ್ತು. ಈಗಲೂ ಪ್ರತಿದಿನ ಈ ಪತ್ರಿಕೆಯ… ವಾಚಕರವಾಣಿ ಕಾಲಂಗೆ ಹಿಂದೂ ಟೆರರಿಸ್ಟರ ಪರವಾ… ಹಾಗೂ ಅವರ ವಿರುದ್ಧ ಕಾನೂನುಕ್ರಮ ಹಾಗೂ ತನಿಖೆ ನಡೆಸುವುದೇ ತಪ… ಎಂಬ ಅಭಿಪ್ರಾಯದ ಪತ್ರಗಳು ಪ್ರಕಟವಾಗುತ್ತಲೇ ಇವೆ!

ಹಾಗಾದರೆ ಭಾರತದಲ್ಲಿ ಮುಸ್ಲಿಂ ಭಯೋತ್ಪಾದನೆಗೆ ಒಂದು ಕಾನೂನ… ಮತ್ತು ಹಿಂದೂ ಟೆರರಿಸ್ಟರಿಗೆ ಬೇರೆ ಕಾನೂನುಗಳು ಇದೆಯಾ?

ಇಂಡಿಯಾ ಟಿವಿ ಸಂಸ್ಥೆಗೆ ಅನ್ವಯವಾಗುವ ಅದೇ ಕಾನೂನುಗಳು ಈ… ಹಿಂದೂ ಭಯೋತ್ಪಾದಕರ ಪರ ಮಾತನಾಡುತ್ತಿರುವ ಅಡ್ವಾಣಿ ಹಾಗ… ಸಂಘ ಪರಿವಾರದವರಿಗೆ ಅನ್ವಯವಾಗುತ್ತಿಲ್ಲ ಯಾಕೆ?

ಈ ಪ್ರಶ್ನೆಗೆ ಉತ್ತರ ಸಿಗುವುದೇ?

ಸುತ್ತಿಲ್ಲ. ಅವರ ಮುಖ ನೋಡಿದರೆ ಎಲ್ಲಿಂದಾದರೂ ಸರಿ ಒಬ್ಬರು 'ಈತ ನನಗೆ ಗೊತ್ತಿದ್ದವ. ಈತ ನಮ್ಮೂರಿನವ' ಎಂದು ವಲ್ಲರೆ?

ರ ಹಾಗೆ ಪಾರದರ್ಶಕವಾಗಿ ನಡೆದುಕೊಳ್ಳದಿದ್ದಾಗ ಜನರ ಗಳು ಬೆಳೆಯುತ್ತಲೇ ಹೋಗುತ್ತವೆ.

ಭವನದ ಮೇಲಿನ ದಾಳಿ ಪ್ರಕರಣದಲ್ಲಿ ಸರ್ಕಾರ ಇವತ್ತಿಗೂ ಯಾಗಿದ್ದವರ ಹೆಸರು, ಫೋಟೋ, ವಿವರ ನೀಡಲಿಲ್ಲ. ಅವತ್ತು ಸರ್ಕಾರದ ತವಹೆಲ್ಕಗೆ ಕಮಿಷನ್ ಹಗರಣ ಮತ್ತು ವಿಶ್ವಾಸಮತ ಸಂಸತ್‌ನಲ್ಲಿ ನಡೆಯುವುದಿತ್ತು. ಆದರೆ ಅದೇ ದಿನ ನಿಗೂಢ ದಾಳಿ ಆಯಿತು. ವಾಜಪೇಯಿ ಸರ್ಕಾರ ಅಪಾಯದಿಂದ ತು. ಈಗ ಹಿಂದೂತ್ವ ಭಯೋತ್ಪಾದಕರ ಜಾಲದ ಬಗ್ಗೆ ತೀವ್ರ ಗುತ್ತಿದ್ದಾಗಲೇ ಈ ತನಿಖೆಯ ಮುಖಂಡ ಕರ್ಕರೆ ಸಹಿತ ಇನ್ನೂರು ದಾಳಿಗೆ ಬಲಿಯಾಗಿದ್ದಾರೆ. ಅದರಿಂದಾಗಿ ಹಿಂದೂ ಟೆರರಿಸಂ ದಿಗೆ ಸರಿದು ಮುಸ್ಲಿಂ ಉಗ್ರವಾದ ಮತ್ತೆ ಮುಂಚೂಣಿಗೆ ಗಿದೆ.

ಯವಾಗಿ ಎರಡು ನೆಲೆಗಳಿಂದ ಈ ಭಯೋತ್ಪಾದನೆ ಬಗ್ಗೆ ಯ ತಜ್ಞರು ವಿಶ್ಲೇಷಿಸುತ್ತಿದ್ದಾರೆ.

ಬ:

ಶದ ಆಂತರಿಕ ಪರಿಸ್ಥಿತಿ ಹಾಗೂ ವಿದೇಶಾಂಗ ನೀತಿಗಳಿಂದ ಮವ ಉಗ್ರರ ಗುಂಪು ಈ ದುಷ್ಕೃತ್ಯ ನಡೆಸಿದೆ ಎಂಬುದು.

ಂದು

ಕ, ಇಂಗ್ಲೆಂಡ್ ಹಾಗೂ ಇಸ್ರೇಲ್‌ಗಳು ಜಾಗತಿಕವಾಗಿ ಮುಸ್ಲಿಮರ ಸಂಪದ್ಭರಿತ ಇಸ್ಲಾಮಿಕ್ ದೇಶಗಳ ವಿರುದ್ಧ ನಡೆಸುತ್ತಿರುವ ರ್ಮಗಳ ಭಾಗವಾಗಿ ಭಾರತವನ್ನು ಪಾಲುದಾರ ದೇಶವಾಗಿ ಲು ನಡೆಸುತ್ತಿರುವ ಸಂಚಿದು ಎಂಬುದು. ರಷ್ಯಾ ವಿರುದ್ಧ ಳನ್ನು ಅಮೆರಿಕಾ ಯಶಸ್ವಿಯಾಗಿ ಬಳಸಿಕೊಂಡಿತ್ತೆಂಬುದನ್ನು ದರೆ, ಸಿಐಎ ಹಾಗೂ ಇಸ್ರೇಲ್‌ನ ಮೊಸಾದ್ ಗೂಢಚರ್ಯೆ ಬೇಕಾದಷ್ಟು ಮುಸ್ಲಿಂ ಭಯೋತ್ಪಾದಕ ಭಿನ್ನಮತೀಯ ಂದಿಗೆ ಸಂಪರ್ಕಗಳಿರುವುದನ್ನು ನೋಡಿದರೆ ಮುಂಬೈ ದಾಳಿಗಳ ವು ಭಾವಿಸುತ್ತಿರುವುದಕ್ಕಿಂತ ದೊಡ್ಡ ಸಂಚೇ ಇರಲಿಕ್ಕೂ ಸಾಕು.

ಗಿಯೇ ಈ ಯುದ್ಧದಲ್ಲಿ ನಮ್ಮ ಕರ್ತವ್ಯನಿಷ್ಠ ಕಮಾಂಡೋಗಳು ದೂರದೃಷ್ಟಿಯಿರದ ನೇತಾಗಳಿಂದಾಗಿ ಭಾರತೀಯರಿಗೆ ನೆಮ್ಮದಿ ಸಾಧ್ಯತೆಗಳು ದಿನೇದಿನೇ ಕುಸಿಯುತ್ತಿದೆ.

ಭಯೋತ್ಪಾದನೆ–ಮುಸ್ಲಿಂ ಭಯೋತ್ಪಾದನೆ ಇವೆರಡನ್ನೂ ತಿರಸ್ಕರಿಸಿ ವ ನೈಜ ಭಾರತೀಯರು ಮಾತ್ರ ಸದ್ಯದ ಆಶಾಕಿರಣ.

ತೀಯರು ಎಚ್ಚೆತ್ತುಕೊಳ್ಳಬೇಕಾದ ಕಾಲವಿದು ಮತ್ತು ಳ್ಳುತ್ತಲೂ ಇದ್ದಾರೆ.

ಬೈನಲ್ಲಿ ಈ ಭಯಾನಕ ಘಟನೆಗಳು ನಡೆಯುತ್ತಿದ್ದಾಗ ತಮ್ಮ ಜಕೀಯ ಬೇಳೆ ಬೇಯಿಸಿಕೊಳ್ಳಲು ಅಲ್ಲಿಗೆ ಬಂದಿದ್ದ ಬಿಜೆಪಿ ಡ್ವಾಣಿಗೆ ಜನ ಛೀಮಾರಿ ಹಾಕಿ ವಾಪಸ್ ಕಳಿಸಿದ್ದಾರೆ. ಕರ್ಕರೆವರ ಹಾರ ನೀಡುತ್ತೇನೆಂದ ನರಹಂತಕ ನರೇಂದ್ರ ಮೋದಿಯ ವಾದಿ ಕೊಳಕು ಹಣ ಬೇಡವೆಂದು ತಿರಸ್ಕರಿಸಿದ್ದಾರೆ.

ಭಾರತೀಯರೂ ಬದುಕುತ್ತಿರುವ ಮುಂಬೈ ಮತ್ತೆ ಉಸಿರಾಡುತ್ತಿದೆ.

■ ಪಾರ್ವತೀಶ

E TIMES OF INDIA

ಮುಂಬೈ ಟೈಮ್ಸ್ ಆಫ್ ಇಂಡಿಯಾ ಪಾರು

ರ ದಾಳಿಯಿಂದ ಮುಂಬೈ ಟೈಮ್ಸ್ ಆಫ್ ಇಂಡಿಯಾ ಕಚೇರಿ ಪಾರಾದಂತಿದೆ.

ಪೊಲೀಸ್ ಬಂಧನದಲ್ಲಿರುವ ಉಗ್ರ ಕಸಬ್ ಹೇಳಿಕೊಂಡಿರುವ ಧವಾರ ರಾತ್ರಿ ಛತ್ರಪತಿ ಶಿವಾಜಿ ರೈಲ್ವೇ ನಿಲ್ದಾಣದಲ್ಲಿ ಮನಬಂದಂತೆ ಸಿ ಇಪ್ಪತ್ತು ಮಂದಿಯನ್ನು ಕೊಂದ ಕಸಬ್ ಹಾಗೂ ಇಸ್ಮಾಯಿಲ್ ಗ್ರರಿಬ್ಬರು ಅವರ ಅಸಲಿ ಪ್ಲಾನ್‌ನಂತೆ ಅಲ್ಲಿಗೆ ಸಮೀಪದಲ್ಲೇ ಇದ್ದ ಆಫ್ ಇಂಡಿಯಾ ಕಟ್ಟಡದೊಳಕ್ಕೆ ನುಗ್ಗುವವರಿದ್ದರು. ಅವರು ಆ ದ್ದಾಗಲೇ ಮುಂಬೈ ಪೊಲೀಸರೊಂದಿಗೆ ಗುಂಡಿನ ಚಕಮಕಿ ಸ್ಮಾಯಿಲ್ ಸತ್ತು ಕಸಬ್ ಗಾಯಗೊಂಡು ಅರೆಸ್ಟಾದ.

ಬೈ ದಾಳಿಗಾಗಿ ಬಂದ ಹನ್ನೆರಡು ಉಗ್ರರ ಪೈಕಿ ನಾಲ್ವರು ತಾಜ್ ಗೂ ತಲಾ ಮೂವರು ಟ್ರೈಡೆಂಟ್ ಒಬೇರಾಯ್ ಹಾಗೂ ನಾರಿಮನ್ ನುಗ್ಗಿದ್ದಾರೆ. ಉಳಿದಿಬ್ಬರ ಗುರಿ ಟೈಮ್ಸ್ ಆಗಿತ್ತು. ಉಗ್ರರ ಈ ಒಂದೆ ವಿದೇಶಿಯರು ಅದರಲ್ಲೂ ಅಮೆರಿಕಾ, ಇಸ್ರೇಲ್ ಪ್ರಜೆಗಳನ್ನು ಒತ್ತೆಯಾಳುಗಳಾಗಿ ಇರಿಸಿಕೊಳ್ಳುವ, ಕೊಲ್ಲುವ ಇತ್ತೆಂಬುದು ಸ್ಪಷ್ಟ.

ಟೈಮ್ಸ್, ಯಾಕೆ ಅವರ ಹಿಟ್ ಲಿಸ್ಟ್‌ನಲ್ಲಿತ್ತು?

ಆಗಿರಲಿ. ಟೈಮ್ಸ್ ಸಿಬ್ಬಂದಿ ಈ ಅಪಾಯಕ್ಕೆ ಸಿಲುಕಲಿಲ್ಲ ಸಮಾಧಾನದ ವಿಚಾರ. ■

ಟಿವಿ ಚಾನಲ್‌ಗಳ ಕ್ರೌರ್ಯ!

ಬಹುಶಃ ಇದನ್ನು ನೀವೂ ಗಮನಿಸಿರುತ್ತೀರಿ!

ನವೆಂಬರ್ 26 ರ ಬುಧವಾರ ರಾತ್ರಿ ಹತ್ತೂವರೆ ಸುಮಾರಿಗೆ ತಾಜ್ ಹೋಟೆಲ್, ಒಬೆರಾಯ್ ಹೋಟೆಲ್ ಹಾಗೂ ನಾರಿಮನ್ ಹೌಸ್‌ಗೆ ಕ್ಯಾಮರಾ ಹಿಡಿದುಕೊಂಡು ಓಡಿದ ಈ ಜನ ಶನಿವಾರ ಬೆಳಗಿನವರೆಗೂ ಅಲ್ಲಿಂದ ಕದಲಲಿಲ್ಲ.

ಹೌದು ಒಂದು ಮಾತಂತೂ ನಿಜ.



ಬರ್ಖಾದತ್

ಈ ಸ್ಥಳಗಳಲ್ಲೇ ಮಿಲಿಟೆಂಟ್‌ಗಳಿದ್ದರು. ಅಲ್ಲೇ ಮುಗ್ಧ ಜನ ಒತ್ತೆಯಾಳುಗಳಾಗಿದ್ದರು. ಪೊಲೀಸರು, ಕಮಾಂಡೋಗಳ ಕಾರ್ಯಕ್ಷೇತ್ರವೂ ಅದೇ ಆಗಿತ್ತು. ಅತೀ ಮುಖ್ಯವಾಗಿ ಅಲ್ಲಿ ಯಾವ ಕ್ಷಣದಲ್ಲಿ ಏನಾದರೂ ಸಂಭವಿಸುವ ಸಾಧ್ಯತೆಗಳಿದ್ದವು. ಭಾರತದ ಮೂಲೆಮೂಲೆಗಳಲ್ಲಿ ಜನ ಟಿವಿ ಮುಂದೆ ಕುಳಿತು ಇದನ್ನೆಲ್ಲಾ ನೋಡುತ್ತಿರುವಾಗ ಅವರಿಗೆ Breaking News ತಾಜಾ ಖಬರ್ ಮುಂತಾದ್ದನ್ನೆಲ್ಲಾ ಕೊಡಬೇಕಿತ್ತು ಸರಿ.

ಆದರೆ

ಈ ಸೆನ್ಸೇಷನಲ್ ನ್ಯೂಸ್‌ನ ಹಿಂದೆ ಬಿದ್ದ ಟಿವಿ ಪತ್ರಕರ್ತರು ಮುಖ್ಯವಾಗಿ ಮರೆತಿದ್ದು ಮನುಷ್ಯತ್ವವನ್ನು.

ಬುಧವಾರ ರಾತ್ರಿಯೇ ಮುಂಬೈನ ಅತ್ಯುನ್ನತ ಪೊಲೀಸ್ ಆಫೀಸರ್‌ಗಳಾದ ಹೇಮಂತ್ ಕರ್ಕರೆ, ಕಾಮ್ಟೆ, ವಿಜಯ್ ಸಾಲಸ್ಕರ್ ಉಗ್ರರಿಗೆ ಬಲಿಯಾಗಿದ್ದರು.

ಆದರೆ ಯಾವ ಟಿವಿಯವನೂ ಅವರ ಮನೆಗಳಿಗೆ ಹೋಗಿ ಕುಟುಂಬದವರ ಶೋಕವನ್ನು ದಾಖಲಿಸಲಿಲ್ಲ. ಛತ್ರಪತಿ ಶಿವಾಜಿ ರೈಲು ನಿಲ್ದಾಣದಲ್ಲಿ ಸತ್ತವರಲ್ಲಿ ಇಪ್ಪತ್ತು ಬಡ ನಾಗರಿಕರಿದ್ದಾರೆಂಬ ಬಗ್ಗೆ ಕಿಂಚಿತ್ತೂ ಗಮನ ಕೊಡಲಿಲ್ಲ. ಅವರ ಮನೆಗಳ ಬಳಿ, ಬಂಧುಗಳ ಹತ್ತಿರವೂ ಸುಳಿಯಲಿಲ್ಲ. ಗುಂಡೇಟಿಗೆ ಸಿಕ್ಕಿ ಗಾಯಗೊಂಡ ಒಬ್ಬರನ್ನೂ ತೋರಿಸಲಿಲ್ಲ. ಯಾವ ಆಸ್ಪತ್ರೆ ಹತ್ತಿರವೂ ತಲೆ ಹಾಕಲಿಲ್ಲ. ಪ್ರಸಿದ್ಧ ವರದಿಗಾರ್ತಿ ಬರ್ಖಾದತ್ ಕೂಡಾ

ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಈ ಸುದ್ದಿಜೀವಿಗಳು ಹೊಸದಾಗಿ ಮತ್ತೆ ರಕ್ತಪಾತವಾಗಬಹುದಾದ ಸ್ಥಳ ಬಿಟ್ಟು ಕದಲಲಿಲ್ಲ. ಸಾರಾಂಶದಲ್ಲಿ ಹೇಳಬೇಕೆಂದರೆ ಈ ಚಾನಲ್‌ಗಳಿಗೆ ಒಂದು Live Action ಬೇಕಿತ್ತು. ಅದಕ್ಕಾಗಿ ತಾಜ್ ಹೋಟೆಲಿನೆದುರು ನಿಂತು ಕಾದೇ ಕಾದರು. ಸಾಕಾಗಿ ಕುಂತರು. ಕೊನೆಗೆ ಗುಂಡೇಟಿಗೆ ಸಿಲುಕುವ ಭಯದಲ್ಲಿ ಅಲ್ಲೇ ನೆಲದ ಮೇಲೆ ಮಲಗಿ ವರದಿ ಒದರಿದರು. ಬಹುಶಃ ಊಟ, ಉಚ್ಚೆ, ಕಕ್ಕ, ನಿದ್ರೆಯನ್ನು ನಿರ್ಲಕ್ಷಿಸಿರಲಿಕ್ಕೂ ಸಾಕು. ಕೆಲವರು ಇದನ್ನೆಲ್ಲಾ ಮಹಾನ್ ಸಾಹಸವೆಂಬಂತೆ ಹೇಳಿಕೊಳ್ಳುತ್ತಿದ್ದಾರೆ.

ನಿಜ, ಸಾಹಸದ ಒಂದಂಶ ಇದರಲ್ಲಿರುವುದು ಹೌದು. ಆದರೆ ಆ ಮೂರೂ ದಿನ ದೇಶದ ಜನತೆಗೆ ಈ ಮಹಾನುಭಾವರು ರಕ್ತಪಾತದ Action ಉಣಬಡಿಸಿದರೇ ವಿನಃ ಇದನ್ನೆಲ್ಲಾ ನೋಡಿ ಸಂಕಟಪಟ್ಟ ಭಾರತೀಯರಿಗೆ ಮನುಷ್ಯತ್ವದ ಪಾಠ ಹೇಳಲಿಲ್ಲ.

ಕೊನೆಗೂ ಈ ಚಾನಲ್‌ಗಳು ಬಲಿಯಾದವರ ಮನೆಗಳಿಗೆ, ಗಾಯಗೊಂಡವರಿದ್ದ ಆಸ್ಪತ್ರೆಗಳಿಗೆ ಹೋಗಿದ್ದು ತಾಜ್ ಹೋಟೆಲಿನಲ್ಲಿ ಇನ್ನೇನು ಗಿಟ್ಟುವುದಿಲ್ಲ ಎನಿಸಿದ ಮೇಲೆ ಮಾತ್ರ.

ಹೇಮಂತ್ ಕರ್ಕರೆ, ಸಾಲಸ್ಕರ್, ಕಾಮ್ಟೆ

ನಿರ್ಲಕ್ಷ್ಯ ತಂದ ಸಾವು

ಬಹುಶಃ ಒಂದೇ ಒಂದು ನಿಮಿಷ ನಿಂತು ಯೋಚಿಸಿದ್ದಿದ್ದರೆ, ಮಿಲಿಟೆಂಟುಗಳು ಯಾರು, ಅವರ ತಯಾರಿ ಎಷ್ಟಿದೆ ಎಂಬ ಬಗ್ಗೆ ಅಷ್ಟೋ ಇಷ್ಟೋ ಲಭ್ಯ ವಿವರಗಳನ್ನಾದರೂ ಕೇಳಿಕೊಂಡಿದಿದ್ದರೆ ಮುಂಬೈ ಪೊಲೀಸ್ ಪಡೆಯ ಸೂಪರ್‌ಕಾಪ್‌ಗಳಾಗಿದ್ದ ಹೇಮಂತ್ ಕರ್ಕರೆ, ಅಶೋಕ ಕಾಮ್ಟೆ ಹಾಗೂ ವಿಜಯ್ ಸಾಲಸ್ಕರ್ ಇಂದು ಬದುಕಿರುತ್ತಿದ್ದರು.

ಅದರಲ್ಲೂ ಹಿಂದೂತ್ವ ಟೆರರಿಸಂನ ಬುಡಕ್ಕೇ ಕೈ ಹಾಕಿ ತನಿಖೆ ನಡೆಸುತ್ತಿದ್ದ ಮಹಾರಾಷ್ಟ್ರ ಭಯೋತ್ಪಾದನಾ ನಿಗ್ರಹ ಪಡೆಯ ಮುಖ್ಯಸ್ಥ ಹೇಮಂತ್ ಕರ್ಕರೆ ಸೆಕ್ಯುಲರ್ ಭಾರತಕ್ಕೆ ನೀಡಬಹುದಾಗಿದ್ದ ಕೊಡುಗೆ ಇನ್ನೂ ಬಹಳವಿತ್ತು. ಆದರೆ ಒಂದು ನಗರದ ಮೇಲೆ ಉಗ್ರರು ಎರಗಿದಾಗ ಏನೆಲ್ಲಾ ಮುನ್ನೆಚ್ಚರಿಕೆ ವಹಿಸಬೇಕೋ ಅದನ್ನೇ ಈ ಆಫೀಸರ್‌ಗಳು ನಿರ್ಲಕ್ಷಿಸಿ ಸಾವಿಗೆ ತುತ್ತಾದರು.





ಕರ್ಕರೆ

ನವೆಂಬರ್ 26ರ ಬುಧವಾರ ರಾತ್ರಿ ಹೇಮಂತ್ ಕರ್ಕರೆ ಮಹಾರಾಷ್ಟ್ರ ಉಪಮುಖ್ಯಮಂತ್ರಿ ಹಾಗೂ ಗೃಹ ಸಚಿವರು ಆದ ಆರ್.ಆರ್. ಪಾಟೀಲರ ಭೇಟಿಗೆಂದು ಮಲಬಾರ್ ಹಿಲ್‌ಗೆ ಹೋಗಿದ್ದರು. ಮಾಲೆಗಾಂವ್ ಸ್ಫೋಟದ ತನಿಖೆ ನಡೆಸುತ್ತಿದ್ದ ದೇಶಪ್ರೇಮಿ ಕರ್ಕರೆ ಮೇಲೆ ಎಲ್.ಕೆ. ಅಡ್ವಾಣಿ ಸೇರಿದಂತೆ ಹಿಂದೂ ಭಯೋತ್ಪಾದಕ ಸಂಘಟನೆಗಳ ನಿರಂತರ ಕಿರುಕುಳವಿತ್ತು. ಇದರಿಂದ ವಿಪರೀತ ನೊಂದುಕೊಂಡಿದ್ದ ಕರ್ಕರೆ ಸಚಿವರ ಮನೆಯಿಂದ ಹೊರಟಾಗಲೇ ಅವರಿಗೆ ಉಗ್ರರ ದಾಳಿ ಬಗ್ಗೆ ಮಾಹಿತಿ ಬಂತು. ಅಲ್ಲಿಂದ ನೇರವಾಗಿ ತಾಜ್ ಹೋಟೆಲ್‌ಗೆ ಧಾವಿಸಿ ಬಂದ ಕರ್ಕರೆ ಬುಲೆಟ್ ಪ್ರೂಫ್ ಜಾಕೆಟ್ ಹಾಗೂ ಹೆಲ್ಮೆಟ್ ಹಾಕಿಕೊಂಡು ಹೋಟೆಲ್‌ನೊಳಕ್ಕೆ ನುಗ್ಗಲು ಹೊರಟಿದ್ದನ್ನು ಟಿವಿ ಚಾನೆಲ್‌ಗಳು ತೋರಿಸಿದವು. ಆಗ ಈ ಕರ್ಕರೆ ಬುಲೆಟ್ ಪ್ರೂಫ್ ಜಾಕೆಟ್ ಅನ್ನೂ ಸರಿಯಾಗಿ ಹಾಕಿಕೊಂಡಿರಲಿಲ್ಲ. ಇದು ಎದ್ದು ಕಾಣುತ್ತಿತ್ತು. ಆಗಲೇ ಶಿವಾಜಿ ರೈಲ್ವೇ ಸ್ಟೇಷನ್‌ನಲ್ಲಿ ಉಗ್ರರ ದಾಳಿ ಬಗ್ಗೆ ಸುದ್ದಿ ಕೇಳಿದ ಕರ್ಕರೆ ತಕ್ಷಣ ಅಲ್ಲಿಗೆ ಹೋಗಿದ್ದಾರೆ. ಆದರೆ ಆಗತಾನೆ ಉಗ್ರರು ಅಲ್ಲಿಂದ ನಿರ್ಗಮಿಸಿದ್ದರು.

ಕರ್ಕರೆ ಅದೃಷ್ಟ ಕೈಕೊಟ್ಟಿದ್ದು ಇಲ್ಲಿಯೇ!

ಹೇಗೆಂದರೆ ರೈಲ್ವೇ ಸ್ಟೇಷನ್‌ನಲ್ಲಿ ಬಹುತೇಕ ಕಡೆ ಕ್ಲೋಸ್ ಸರ್ಕ್ಯೂಟ್ ಟಿವಿಗಳಿದ್ದವು.(CCTV) ಕರ್ಕರೆ ಅಲ್ಲಿ ಒಂದೈದು ನಿಮಿಷ ನಿಂತು CCTV ಗಮನಿಸಿದಿದ್ದರೆ ಉಗ್ರರ ತಯಾರಿ, ತರಬೇತಿ, ಆಯುಧಗಳ ಬಗ್ಗೆ ಒಂದು ಅಂದಾಜು ಸಿಕ್ಕಿರುತ್ತಿತ್ತು. ಆದರೆ ಕರ್ಕರೆ ಅದನ್ನು ಮಾಡಲಿಲ್ಲ. ಜೊತೆಯಿಲ್ಲಿದ್ದ ಎನ್‌ಕೌಂಟರ್ ಸ್ಪೆಷಲಿಸ್ಟ್ ವಿಜಯ ಸಾಲಸ್ಕರ್‌ಗೂ ಸಂದರ್ಭದ ಅಪಾಯದ ವಾಸನೆ ಸಿಗಲೇ ಇಲ್ಲ. ಅಷ್ಟರಲ್ಲಿ ಜಾಯಿಂಟ್ ಕಮೀಷನರ್ ಅಶೋಕ ಕಾಮ್ಟೆ ಕೂಡ ಅಲ್ಲಿಗೆ ಬಂದಿದ್ದಾರೆ.

ಆಗ ಕಾಮ ಆಸ್ಪತ್ರೆ ಬಳಿ ಇನ್ನೊಬ್ಬ ಪೊಲೀಸ್ ಆಫೀಸರ್ ಸಂದೀಪ್ ದಾಟೆಗೆ ಗುಂಡೇಟು ಬಿದ್ದ ಸುದ್ದಿ ಬಂತು. ಇದರಿಂದ ವಿಚಲಿತರಾದ ಈ ಚಾಣಾಕ್ಷ ಅನುಭವಿ ಆಫೀಸರುಗಳೇ ಯಾರೋ ಸೈಕಲ್ ಕಳ್ಳರನ್ನು ಬೆನ್ನಟ್ಟಿ ಹೋಗುವಂತೆ ಕೈಗೆ ಸಿಕ್ಕ ಪೊಲೀಸರ ಕ್ವಾಲೀಸ್ ಗಾಡಿ ಹತ್ತಿ ಹೊರಟಿದ್ದಾರೆ.

ಇವರೆಲ್ಲ ಹಾಗೆ ಹೊರಟ ಎರಡೇ ನಿಮಿಷಕ್ಕೆ ಹತ್ತಿರದಲ್ಲೇ ರಸ್ತೆ ಪಕ್ಕ ಇದ್ದ ಇಸ್ಮಾಯಿಲ್ ಹಾಗೂ ಅಮೀನ ಕಸಬ್ ಎಂಬ ಇಪ್ಪತ್ತು ವಯಸ್ಸಿನ ಹುಡುಗ ಉಗ್ರರು ಎ.ಕೆ.47 ಕೈಲಿಡಿದು ಕಾಣಿಸಿಕೊಂಡರು. ನೇರ ಕ್ವಾಲೀಸ್ ಗಾಡಿಯೊಳಕ್ಕೆ ಗುಂಡು ಹಾರಿಸಿಬಿಟ್ಟರು.

ಆಗ ಕ್ವಾಲೀಸ್ ಗಾಡಿಯಲ್ಲಿದ್ದವರು ಒಟ್ಟು ಎಂಟು ಜನ. ಸಮಯ ಬಹುಶಃ ರಾತ್ರಿ ಹತ್ತೂ ಕಾಲು. ಅಲ್ಲಿ ಹಾರಿದ ಬುಲೆಟ್‌ಗಳೆಷ್ಟೆಂಬುದು ಈಗಲೂ ಯಾರಿಗೂ ಲೆಕ್ಕ ಸಿಕ್ಕಿಲ್ಲ. ಆದರೆ ಬಲಿಯಾದವರ ಜೀವಕ್ಕೆ ಬೆಲೆ ಕಟ್ಟಲಾದೀತೆ?

ಹೀಗೆ ತಾವು ಕುಳಿತಿದ್ದ ಗಾಡಿಯಲ್ಲೇ ಅತ್ತಿತ್ತ ಅಲ್ಲಾಡಲೂ ಆಗದೆ ಪ್ರತಿದಾಳಿ ಮಾಡಲೂ ಅವಕಾಶವಿರದೆ ಬಲಿಯಾಗುವಲ್ಲಿ ಈ ಅಧಿಕಾರಿಗಳು ಮುಂದಾಲೋಚನೆಯಿರದ ಮನಸ್ಥಿತಿಯ ಕಾರಣವೂ ಇದೆ.

ಅವತ್ತಿನ ಸಂದರ್ಭದಲ್ಲಿ ಬಲಿಯಾದ ಪ್ರತಿಯೊಬ್ಬ ಆಫೀಸರ್‌ಗೂ ಉಗ್ರರ ಬೆನ್ನಟ್ಟಿ ಹೋಗಿ ಬಲಿಹಾಕಬೇಕೆಂಬ ಒಂದು 'ಸಾಹಸಿ' ಭಾವನೆ ಬಂದಿರಲು ಅನೇಕ ಕಾರಣಗಳಿರಬಹುದು.

ಹೇಮಂತ ಕರ್ಕರೆಗೆ ತಾವು ಕೇವಲ ಹಿಂದೂ ಟೆರರಿಸ್ಟರ ಬಗ್ಗೆ ಮಾತ್ರವಲ್ಲ; ಮುಸ್ಲಿಂ ಉಗ್ರರ ಬಗ್ಗೆಯೂ ಅಷ್ಟೇ ನಿಷ್ಠೂರವಾಗಿರಬಲ್ಲೆ ಎಂಬುದು ಸಾಬೀತು ಮಾಡುವ ಸಂದರ್ಭ ಅದು ಎನಿಸಿರಬಹುದು. ಇದು ನಿಜವೆಂದಾದರೆ ಕರ್ಕರೆ ಸಾವಿಗೆ ಹಿಂದೂ-ಕೋಮುವಾದಿಗಳದ್ದೇ ನೈತಿಕ ಹೊಣೆ ಅಲ್ಲವಾ?

ಇನ್ನೂ ವಿಜಯ್ ಸಾಲಸ್ಕರ್!

ಎನ್‌ಕೌಂಟರ್ ಸ್ಪೆಷಲಿಸ್ಟ್ ಎಂಬ ಬಿರುದು ಪಡೆದಿದ್ದ ಸಾಲಸ್ಕರ್ ಹೆಚ್ಚುಕಡಿಮೆ 75 ಜನರಿಗೆ ಗುಂಡಿಟ್ಟು ಕೊಂದಿದ್ದಾತ. ಈತ ನಡೆಸಿದ ಹತ್ಯೆಗಳಲ್ಲಿ ಕ್ಷಿಪ್ರನ್ಯಾಯದಾನದ ಮನೋಭಾವವಿರುತ್ತಿತ್ತು. ಅದಿಷ್ಟೇ ಅಲ್ಲ, ಮುಂಬೈ ಮಾಫಿಯಾಗಳ ಗುಂಪುಗಾರಿಕೆ ಬಳಸಿಕೊಂಡು, ಕೆಲವೊಮ್ಮೆ ಹಣ ಪಡೆದು, ಹಲವು ಬಾರಿ ಪ್ರಚಾರ, ಕೀರ್ತಿ ಪ್ರಮೋಷನ್‌ಗಳಿಗಾಗಿ ಎನ್‌ಕೌಂಟರ್ ನಡೆಸುತ್ತಿದ್ದ ಸಾಲಸ್ಕರ್‌ಗೆ ತನ್ನ ಸಾವು ಇಲ್ಲಿದೆ ಎಂಬ ಕಿಂಚಿತ್ ಅನುಮಾನವೂ ಬರಲಿಲ್ಲ. ಸಾಲಸ್ಕರ್‌ಗೆ ತನ್ನ ಸರ್ವೀಸ್‌ನಲ್ಲಿ ಎಪ್ಪತ್ತೈದು ಎನ್‌ಕೌಂಟರ್ ನಡೆಸಿದ್ದಾರೆಂಬ ಕೀರ್ತಿ ಇತ್ತಾದರೂ ಅವುಗಳಲ್ಲಿ ಬಹುತೇಕರು ಪೊಲೀಸರನ್ನು ನೋಡಿದಾಕ್ಷಣ ಓಡುತ್ತಿದ್ದವರೇ ಜಾಸ್ತಿ. ಆದರೆ ಈ ಉಗ್ರರು ಪೊಲೀಸ್ ಗಾಡಿ ನೋಡಿ ತಾವೇ ಹತ್ತಿರ ಬಂದು ಫೈರ್ ಮಾಡಿದ್ದಾರೆ. ತನ್ನಿಬ್ಬರು ಉನ್ನತ ಆಫೀಸರ್‌ಗಳನ್ನು ಕ್ವಾಲೀಸ್‌ಗೆ ಹತ್ತಿಸಿಕೊಂಡು ತಾನೇ ಡ್ರೈವರ್ ಸೀಟಿನಲ್ಲಿ ಕುಳಿತಿದ್ದ ಸಾಲಸ್ಕರ್‌ಗೆ ಅಸಲಿ ಎನ್‌ಕೌಂಟರ್‌ಗಳ ಅನುಭವವೇ ಇರಲಿಲ್ಲ ಎಂಬುದನ್ನೂ ಈ ಘಟನೆ ಹೇಳುತ್ತಿದೆ.

ಇದೇ ಪ್ರಕರಣದಲ್ಲಿ ಬಲಿಯಾದ ಅಶೋಕ ಕಾಮ್ಟೆ ಅತ್ಯಂತ ದಕ್ಷ ಹಾಗೂ ಪ್ರಾಮಾಣಿಕ ಅಧಿಕಾರಿ ಎನಿಸಿಕೊಂಡಿದ್ದರು. ಇವರೊಮ್ಮೆ ಸೋಲಾಪುರದಲ್ಲಿದ್ದಾಗ ಕರ್ನಾಟಕದ ಇಂಡಿ ಶಾಸಕ ರವಿಕಾಂತ ಪಾಟೀಲ್‌ನ ತಲೆಹರಟೆಗೆ ರೋಸಿಹೋಗಿ ಹಿಡಿದು ಒಳಗೆ ಹಾಕಿದ್ದರು.

ನಿಜವಾದ ದುರಂತ ಏನೆಂದರೆ ಮಹಾರಾಷ್ಟ್ರದಂತಹ ಒಂದು ದೊಡ್ಡ ರಾಜ್ಯದ ಭಯೋತ್ಪಾದಕ ನಿಗ್ರಹ ಪಡೆಯ ಮುಖ್ಯಸ್ಥನೊಬ್ಬ ಬುಲೆಟ್ ಪ್ರೂಫ್ ಸಹ ಅಲ್ಲದ ಮಾಮೂಲಿ ಕ್ವಾಲೀಸ್ ಗಾಡಿಯೊಳಗೆ ಕುಳಿತು ತನ್ನೊಂದಿಗೆ ನುರಿತ ಕಮಾಂಡೋಗಳನ್ನು ಕರೆದುಕೊಳ್ಳದೆ, ಯಾವುದೇ ಮುಂದಾಲೋಚನೆ ಇರದೆ, ಅಪಾಯದ ತೀವ್ರತೆಯನ್ನು ಗ್ರಹಿಸದೆ ನೇರ ಹೋಗಿ ಉಗ್ರರ ಗುಂಡಿನ ಬಾಯಿಗೆ ಸಿಕ್ಕಿಬಿದ್ದು ಪ್ರಾಣ ಕಳೆದುಕೊಂಡಿರುವುದು ಹೃದಯವಿದ್ರಾವಕವಾಗಿದೆ.

ಹೇಮಂತ್ ಕರ್ಕರೆಯಂತಹ ಪೊಲೀಸ್ ಆಫೀಸರ್‌ಗಳು ಸೆಕ್ಯುಲರ್ ಭಾರತದ ಭವಿಷ್ಯಕ್ಕಾಗಿ ನಿಜಕ್ಕೂ ಬದುಕಿರಬೇಕಿತ್ತು. ■

ಲಂಕೇಶ್

ಕೆಬಿಜೆಎನ್‌ಎಲ್ ಕರ್ಮಕಾಂಡ

ಉತ್ತರ ಕರ್ನಾಟಕದ ಪ್ರಮುಖ ಅಣೆಕಟ್ಟುಗಳಾದ ಆಲಮಟ್ಟಿ ಮತ್ತು ನಾರಾಯಣಪುರಗಳ ನೀರನ್ನು ರೈತರ ಹೊಲಗಳಿಗೆ ಸರಬರಾಜು ಮಾಡುವ ಮತ್ತು ಅಣೆಕಟ್ಟುಗಳ ನಿರ್ವಹಣಾ ಜವಾಬ್ದಾರಿಯನ್ನು ಹೊತ್ತಿರುವ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ (ಕೆಬಿಜೆಎನ್‌ಎಲ್) ಕಚೇರಿ ಭೀಮರಾಯನಗುಡಿಯಲ್ಲಿದೆ. ಆದರೆ ಅದ್ಯಾವುದನ್ನೂ ಮಾಡದ ಈ ಕಚೇರಿಯಲ್ಲಿ ಬೋಗಸ್ ಬಿಲ್‌ಗಳ ವ್ಯವಹಾರ ಮಾತ್ರ ನಿರಂತರವಾಗಿ ನಡೆಯುತ್ತದೆ.

ವಾಸ್ತವವಾಗಿ ಉತ್ತರ ಕರ್ನಾಟಕದ ಉದ್ದಗಲಕ್ಕೂ ಅಲ್ಲಲ್ಲಿ ಲ್ಯಾಟ್ರಲ್, ಸಬ್ ಲ್ಯಾಟ್ರಲ್‌ಗಳು ಕಾಣಿಸಿದರೂ ಅವ್ಯಾವು ಸುವ್ಯವಸ್ಥೆಯಲ್ಲಿ ಇಲ್ಲ. ಇದರಿಂದಾಗಿ ಡ್ಯಾಮ್‌ನಿಂದ ನೀರು ಕಾಲುವೆಗೆ ಹರಿಯುತ್ತಲೇ ಮುಖ್ಯ ಕಾಲುವೆಗಳು ಕುಸಿದು ಬೀಳುತ್ತವೆ. ಇನ್ನು ಕೆಲವು ಕಡೆಯಂತೂ ಉಪ ಕಾಲುವೆಗಳಲ್ಲಿ ಹುಲ್ಲು, ಕಸ ತುಂಬಿಕೊಂಡಿದ್ದು ನೀರು ಪಕ್ಕದ ಹೊಲಗಳಿಗೆ ನುಗ್ಗಿ ಅನವಶ್ಯಕವಾಗಿ ಹಳ್ಳ ಸೇರಿ ಹರಿದುಹೋಗುತ್ತದೆ. ಆದರೂ ಕೆಬಿಜೆಎನ್‌ಎಲ್ ಅಧಿಕಾರಿಗಳು ಮಾತ್ರ "ಈಗಾಗಲೇ ಉತ್ತರ ಕರ್ನಾಟಕದ ಹಳ್ಳಿಗಳ ಬಹುತೇಕ ರೈತರಿಗೆ ನೀರು ದೊರಕುತ್ತಿದೆ. ಅವರೆಲ್ಲ ಒಳ್ಳೊಳ್ಳೆಯ ಬೆಳೆ ಬೆಳೆದು ಸಮೃದ್ಧಿಯಿಂದ ಬದುಕುತ್ತಿದ್ದಾರೆ" ಎಂದೇ ದಾಖಲೆಗಳನ್ನು ತೋರಿಸಿ ಹೇಳುತ್ತಿದ್ದಾರೆ.

ಆ ದಾಖಲೆಗಳೇನೋ ಇವೆ. ಯಾಕೆಂದಾರೆ ಪ್ರತಿ ಬೇಸಿಗೆಯಲ್ಲಿ ಈ ಉಪ ಕಾಲುವೆಗಳಲ್ಲಿನ ಹೂಳು ಎತ್ತುವುದು, ಅದರ ದುರಸ್ತಿ ಕಾರ್ಯವನ್ನು ಕೆಬಿಜೆಎನ್‌ಎಲ್ ಮಾಡುತ್ತದೆ. ಈ ಕೆಲಸಕ್ಕೆಂದೇ ಓ ಆ್ಯಂಡ್ ಎಂ ಡಿವಿಜನ್ ಎಂಬ ವಿಭಾಗವೂ ಇದೆ. ಆದರೆ ಈ ವಿಭಾಗ ಕೆಲಸ ಮಾಡುವುದಕ್ಕಿಂತಲೂ ದುಡ್ಡು ಮಾಡುವುದಕ್ಕೆ ಹೇಳಿಮಾಡಿಸಿದಂತಿದೆ. ಇದರಿಂದಾಗಿ ಈ ವಿಭಾಗದ ಕಾಮಗಾರಿಗಳನ್ನು ವಹಿಸಿಕೊಳ್ಳಲು ಕಂಟ್ರ್ಯಾಕ್ಟರರು ಕ್ಯೂ ನಿಂತಿರುತ್ತಾರೆ. ಕಾಲುವೆಗಳಲ್ಲಿ ಹೂಳೆತ್ತುವ, ಕಾಲುವೆ ದುರಸ್ತಿಗೊಳಿಸುವ, ಈ ಕಾಲುವೆಯಲ್ಲಿ ನೀರು ಹರಿಯಲು ಅಡ್ಡಗಾಲಾಗಿರುವ ಜಾಲಿ-ಕಂಟಿ ಇತ್ಯಾದಿಯನ್ನು ಕಟಾವು ಮಾಡುವ ಕೆಲಸ ನಿಜವಾಗಲು ನಡೆಯದಿದ್ದರೂ ಕಾಗದದಲ್ಲಂತೂ ನಡೆಯುತ್ತದೆ. ಈ 'ಕೆಲಸಕ್ಕೆ' ಸಂಬಂಧಿಸಿದ ನಿರೀಕ್ಷಕರಾದ ಜೇಇಎಇಗಳೆಂಬ ತಿಮಿಂಗಲುಗಳಿಗೆ ಪರ್ಸೆಂಟೇಜ್ ನೀಡಿ ಬಿಲ್‌ಗಳೂ ಪಾಸ್ ಆಗುತ್ತವೆ.

ನಿನ್ನೆ ಮೊನ್ನೆಯವರೆಗೆ ಒಂದು ಊಟಕ್ಕೂ ಗತಿಯಿಲ್ಲದೆ ತಿರುಪೆ ತಿಂದು ಬದುಕುತ್ತಿದ್ದ ಬಹುತೇಕ ಕಂಟ್ರ್ಯಾಕ್ಟ್‌ದಾರರು ಇವತ್ತು ಕೆಬಿಜೆಎನ್‌ಎಲ್ ಕೃಪೆಯಿಂದ ಲಕ್ಷ್ಮೀಪುತ್ರರಾಗಿ ಮೆರೆಯುತ್ತಿದ್ದಾರೆ. ಇವರಂತೆ ಕೆಬಿಜೆಎನ್‌ಎಲ್‌ನ ಅಧಿಕಾರಿಗಳು ಮತ್ತು ನೌಕರರು ಸರ್ಕಾರ ನೀಡುವ ಸಂಬಳದೊಂದಿಗೆ ಕಂಟ್ರ್ಯಾಕ್ಟ್‌ದಾರರು ನೀಡುವ ಗಿಂಬಳವನ್ನೂ ಪಡೆದು ಕೊಬ್ಬಿಹೋಗಿದ್ದಾರೆ.

ಕೆಬಿಜೆಎನ್‌ಎಲ್‌ನಲ್ಲಿ ನಡೆಯುತ್ತಿರುವ ಅವ್ಯವಹಾರ ಕುರಿತು ಪತ್ರಿಕೆಗಳಲ್ಲಿ ವರದಿಗಳು ಪ್ರಕಟವಾಗಿದ್ದು ವಿಧಾನಸಭೆ ಮತ್ತು ಪರಿಷತ್ತಿನ ಅಧಿವೇಶನಗಳಲ್ಲೂ ಸಾಕಷ್ಟು ಚರ್ಚೆ-ವಿಚರ್ಚೆ ಆಗಿದೆ. ಆದರೆ ಇಲ್ಲಿಯತನಕ ಒಬ್ಬಾನೊಬ್ಬ ಅಧಿಕಾರಿ ಡಿಸ್‌ಮಿಸ್ ಆಗಿಲ್ಲ, ಒಬ್ಬಾನೊಬ್ಬ ಕಂಟ್ರ್ಯಾಕ್ಟರ್ ಸರಿಯಾಗಿ ಕೆಲಸ ಮಾಡದೇ ಬೋಗಸ್ ಬಿಲ್ ಎತ್ತಿದ್ದಾನೆಂದು ಆತನನ್ನು ಕಪ್ಪು ಪಟ್ಟಿಗೆ ಸೇರಿಸಿಲ್ಲ.

ತೀರಾ ಇತ್ತೀಚೆಗೆ ವಿಧಾನ ಪರಿಷತ್ ಸದಸ್ಯ ಅಮಾತೆಪ್ಪ ಕಂದಕೂರ ಕೃಷ್ಣಾ ಮೇಲ್ದಂಡೆ ಯೋಜನೆಯ 116 ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅವಶ್ಯಕತೆ ಇಲ್ಲದೆ ಇದ್ದರೂ ಒಟ್ಟು 68 ಕೋಟಿ ರೂಪಾಯಿನಷ್ಟು ಹೆಚ್ಚುವರಿ ಕೆಲಸಗಳನ್ನು ಕೈಗೊಳ್ಳಲಾಗಿದೆ ಎಂದು ದಾಖಲೆಗಳ ಸಮೇತ ಒಂದೇ ಸಮ ಕೂಗಾಡಿದರು. ಇದಕ್ಕೆ ಸರಿಯಾಗಿ ನೀರಾವರಿ ಖಾತೆಯ ಸಚಿವ ಬಸವರಾಜ ಬೊಮ್ಮಾಯಿ ವೀರಾವೇಶದಿಂದ "ಕಳೆದ ಮಾರ್ಚ್ 31 ರಂದು ವಿಚಕ್ಷಣಾ ದಳ ಸಲ್ಲಿಸಿರುವ ತನಿಖಾ ವರದಿ ಪ್ರಕಾರ ಆರು ಮುಖ್ಯ ಇಂಜಿನಿಯರ್, ಮೂರು ಸೂಪರಿಂಟೆಂಡಿಂಗ್ ಇಂಜಿನಿಯರ್, 25 ಕಾರ್ಯಪಾಲಕ ಇಂಜಿನಿಯರ್, 39 ಸಹಾಯಕ ಕಾರ್ಯಪಾಲಕ ಇಂಜಿನಿಯರ್, 48 ಸಹಾಯಕ ಇಂಜಿನಿಯರ್ ಹಾಗೂ 1[...] ಇಂಜಿನಿಯರುಗಳ ವಿರುದ್ಧ ದೋಷಾರೋಪ ಪ[...] ಸಿದ್ಧತೆ ನಡೆದಿದೆ" ಎಂದರು.

ಆದರೆ ಮುಂದೆ ಆದದ್ದೇನು? ಗುಡ್ಡದ[...] ಮಾಡಿ ಅದೆಂಥದೋ ಪದ ಹಾಡಿದರ[...] ಹೇಳುತ್ತಾರಲ್ಲ! ಹಾಗೆಯೇ ನಡೆಯಿತು ಬ[...] ಅವರ 'ಶೌರ್ಯ'! ಜೇವರ್ಗಿ ಬ್ರ್ಯಾಂಚ್[...] ಕಾರ್ಯನಿರ್ವಾಹಕ ಎಂಜಿನಿಯರ್ ಭಾಸ್ಕ[...] ರಾಜಶೇಖರ, ನಾರಾಯಣಪುರ ಬಲದಂಡೆ [...] ನಾಗರಾಜ ಮಹಿಪಾಲರೆಡ್ಡಿ ಮತ್ತು ಸುಬ್ರಮಣ್ಯ[...] ಅಮಾನತ್ತುಗೊಳಿಸುವ ನಾಟಕವಾಡಿ ಕೈತೊಳೆದು[...] ಇದರಿಂದಾಗಿ ಕೋಟ್ಯಂತರ ರೂಪಾಯಿಗಳನ್ನು [...] ಬಹುತೇಕ ತಿಮಿಂಗಲುಗಳು ಬಚಾವಾಗಿಬಿಟ್ಟ[...] ಕಾರಣ: ಯಾವ ಅಧಿಕಾರಿಗಳ ವಿರುದ್ಧ ದೋ[...] ಪಟ್ಟಿ ಸಲ್ಲಿಸಲಾಗಿತ್ತೋ ಅವರು ಮಾಡಿದ ಕ[...] ಕುರಿತ ಖಚಿತ ದಾಖಲೆಗಳನ್ನು ನೀಡಿದೆ [...]

2005-2007 ರವರೆಗೆ ನಾರಾಯಣಪುರ[...] ಕಾಲುವೆ, ಶಹಾಪುರ ಹಾಗು ಜೇವರ್ಗಿ ಶಾಖ[...] ಕಾಮಗಾರಿಗಳನ್ನು 12 ಕೋಟಿ ವೆಚ್ಚ[...] ಕಾಮಗಾರಿಗಳಿಗೆ ಅನುಮೋದನೆ ದೊರಕಿತ[...] 116 ಕಾಮಗಾರಿಗಳನ್ನು ಹೆಚ್ಚುವರಿಯಾಗಿ ತೆಗೆ[...] 26 ಕೋಟಿ 12 ಲಕ್ಷ ರೂಪಾಯಿ ನಷ್ಟ [...] ಎಂದು ಜಲಸಂಪನ್ಮೂಲ ಇಲಾಖೆಯ ಜಾಗ[...] ಐಜಿ ವರದಿ ನೀಡಿದ್ದರೂ ಯಾರ ಕೂದಲನ್ನೂ [...] ಕೊಂಕಿಸಲಾಗಿಲ್ಲ! ಮತ್ತೊಂದು ಮೋ[...] ಸಂಗತಿಯೆಂದರೆ ಈ ಅವ್ಯವಹಾರದಲ್ಲಿ ನೇರವ[...] ಯಾಗಿದ್ದ ಅರವಿಂದ, ಪ್ರಕಾಶ, ಶಶಿಧರ ಹಾಗ[...] ಸುಬ್ರಮಣ್ಯಂ ಎಂಬುವವರು ಈಗಾಗಲೇ[...] ಹೊಂದಿದ್ದಾರೆ!!



ಕಟ್ಟಡಗಳು ತುಡುಗರ ಪಾಲು!

1990ರ ದಶಕದಿಂದ ಇದುವರೆಗೆ ನಡೆದಿರುವ ನೀರಾವರಿ ಕಾಮಗಾರಿಗಳನ್ನು ನಿರ್ವಹಿಸಲು ಕಚೇರಿಗಳ[...] ಕೆಲಸಗಾರರಿಗೆಂದು ಕಟ್ಟಿಸಲಾಗಿದ್ದ ವಸತಿ ಸಮುಚ್ಚಯಗಳು ಈಗ ಕೆಲಸ ಮುಗಿದಿರುವುದರಿಂದ ಖಾಲಿ ಖಾಲಿ[...]


ಖಾಲಿ ಬಿದ್ದಿರುವ ಯುಕೆಪಿ ಕ್ಯಾಂಪ್ ವಸತಿ ಸಮುಚ್ಚಯಗಳ ಮೌಲ್ಯವನ್ನು ಸರಿಯಾಗಿ ಗ್ರಹಿಸಿದ ತೋಗಲುಬಾಜಿಗಳು ತಮ್ಮ ರಾಜಕೀಯ ಪ್ರಭಾವ ಬಳಸಿ ಈಗ ಆ ಸಮುಚ್ಚಯಗಳಲ್ಲಿ ವಾಸಿಸತೊಡಗಿವೆ. ಕೆಲವು ಜಾತಿಗಳು ಮತ್ತು ಸಂಘಟನೆಗಳು ನಿಗಮದ ಕೆಲವು ಬೃಹತ್ ಕಟ್ಟಡಗಳ ಆಡಳಿತಾಧಿಕಾರಿಗಳಿಗೆ ತಿನ್ನಿಸಿ ಅವುಗಳನ್ನು ತಮ್ಮ ವಶಕ್ಕೆ ಪಡೆದು ಆ ಕಟ್ಟಡಗಳಲ್ಲಿ ತಮ್ಮ ಕಚೇರಿಗಳನ್ನು ತೆರೆದಿವೆ.

ಇದೆಲ್ಲ ಕಾನೂನುಬಾಹಿರ ಎಂಬುದು ಅವುಗಳನ್ನು ಕೊಟ್ಟವರಿಗೂ, ಪಡೆದವರಿಗೂ ಗೊತ್ತಿದೆ. ಜಲಸಂ[...] ಮಂತ್ರಿ ಬಸವರಾಜ ಬೊಮ್ಮಾಯಿ ಇನ್ನೂ ಏನನ್ನು ಕಡಿಯುತ್ತಿದ್ದಾರೆ?

ಬಾಗಲಕೋಟೆ: ಸಂಧ್ಯಾವಂದನೆಯಲ್ಲಿಯೇ ಮೈಮರೆತ ಎಸ್ಪಿ ರಮೇಶ್ ಹರಿಹರ!

ಬಾಗಲಕೋಟೆಗೆ ಅಂಟಿದ ಶನಿ ಸದ್ಯಕ್ಕೆ ದೂರವಾಗುವಂತೆ ಕಾಣಿಸುತ್ತಿಲ್ಲ. ಇದು ಚರಂತಿಮಠನಾದಿಯಾಗಿ ಬಿಜೆಪಿಯ ಪುಂಡರ ಹಿಂಡನ್ನು ಎರಡೆರಡು ಬಾರಿ ಮತದಾರರು ಆರಿಸಿದ್ದರ ಫಲಶ್ರುತಿಯಿರಬೇಕು; ಮಾಡಬಾರದ ತಪ್ಪನ್ನು ಎರಡೆರಡು ಬಾರಿ ಮಾಡಿದ ಜನ ನಿಜಕ್ಕೂ ಈಗ ಪಶ್ಚಾತ್ತಾಪ ಪಡುತ್ತಿದ್ದಾರೆ. ಒಂದೆಡೆ ರಾಜಕಾರಣಿಗಳ ದೌರ್ಜನ್ಯವಾದರೆ ಇನ್ನೊಂದೆಡೆ ಪೊಲೀಸರ ಕಾಟ. ಇಬ್ಬರೂ ಸೇರಿಕೊಂಡು ಜಿಲ್ಲೆಗೊಂದು ಗತಿ ಕಾಣಿಸಿಯೇ ತೀರುತ್ತಾರೇನೋ?

ಈ ಹಿಂದೆ ಇಲ್ಲೊಬ್ಬ ಪದ್ಮನಯನ ಎಂಬ ನಾಲಾಯಕ್ ಎಸ್ಪಿ ಇದ್ದ. ಜನ "ಛೀ... ಥೂ..." ಎಂದು ಉಗಿದಿದ್ದರ ಪರಿಣಾಮವೋ ಅಥವಾ ಬಿಜೆಪಿಯ ಕುಳಗಳೊಂದಿಗೆ ಹೊಂದಾಣಿಕೆಯ ಸಮಸ್ಯೆಯೋ ಅಂತೂ ಇಲ್ಲಿಂದ ಆತ ಎತ್ತಂಗಡಿಯಾದ. ಇದನ್ನು ಕಂಡು ಜನ ಒಂದಿಷ್ಟು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದರು. ಆದರೆ, ಈ ನೆಮ್ಮದಿ ಬಹಳ ದಿನ ಇರಲಿಲ್ಲ. ಏಕೆಂದರೆ, ಈ ಜಾಗಕ್ಕೆ ರಮೇಶ್ ಹರಿಹರನೆಂಬ ಜನಿವಾರಿ ನಾಲಾಯಕ್ ಬಂದಿದ್ದಾನೆ.



ಈತ ಬರೀ ಜನಿವಾರಿ ನಾಲಾಯಕ್ ಆಗಿದ್ದರೆ ಜನ ಸಹಿಸಿಕೊಳ್ಳುತ್ತಿದ್ದರೇನೋ? ಆದರೆ, ಈತ ತಾನೊಬ್ಬ ಸರ್ಕಾರಿ ಅಧಿಕಾರಿ ಎಂಬುದನ್ನೂ ಮರೆತು ಬಿಜೆಪಿಯ, ಸಂಘಪರಿವಾರದ ಕಾರ್ಯಕರ್ತನಂತೆ ವರ್ತಿಸುತ್ತಿರುವುದು ಜನರಲ್ಲಿ ಅಸಹನೆ ಹುಟ್ಟಲು ಕಾರಣವಾಗಿದೆ. ಸಂಘಪರಿವಾರದ ವೈದಿಕಶಾಹಿ-ಬ್ರಾಹ್ಮಣಶಾಹಿ ಸಿದ್ಧಾಂತ ಎಷ್ಟರ ಮಟ್ಟಿಗೆ ಇವನ ತಲೆಹೊಕ್ಕಿದೆ ಎಂದರೆ ಜಿಲ್ಲೆಯ ಎಲ್ಲಾ ಪೊಲೀಸ್ ಸ್ಟೇಶನ್‌ಗಳನ್ನು, ಪೊಲೀಸ್ ಕಚೇರಿಗಳನ್ನು ಪಕ್ಕಾ ಬಿಜೆಪಿಯ, ಸಂಘಪರಿವಾರದ ಕಚೇರಿಗಳನ್ನಾಗಿ ಪರಿವರ್ತಿಸಿಬಿಟ್ಟಿದ್ದಾನೆ. ಸದಾ ಗಾಯತ್ರಿ ಮಂತ್ರ, ಸಂಧ್ಯಾವಂದನೆಯಲ್ಲಿಯೇ ಮುಳುಗಿರುವ ಈತನಿಗೆ ಜಿಲ್ಲೆಯಲ್ಲಿ ಅಪರಾಧಗಳು ಹೇಗೆ ನಡೆಯುತ್ತಿವೆ, ಅವುಗಳನ್ನು ಪೊಲೀಸರು ಹೇಗೆ ಕಂಟ್ರೋಲ್ ಮಾಡುತ್ತಿದ್ದಾರೆ, ಪೊಲೀಸ್ ಇಲಾಖೆಯ ಕಾರ್ಯವೈಖರಿ ಹೇಗೆ ನಡೆಯುತ್ತಿದೆ, ಅದನ್ನು ಸುಧಾರಿಸುವುದಕ್ಕೆ ಏನೇನು ಕ್ರಮ ಕೈಗೊಳ್ಳಬೇಕು – ಎಂಬಿತ್ಯಾದಿಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಕ್ಕೂ ಸಮಯವಿಲ್ಲ, ವ್ಯವಧಾನವಿಲ್ಲ. ಆಗೊಮ್ಮೆ ಈಗೊಮ್ಮೆ ತನ್ನ ಜನಿವಾರ ತೀಡಿಕೊಳ್ಳುತ್ತಾ ಕಚೇರಿಯಿಂದ ಹೊರಬರುವ ಈತ ಸಿನಿಮಾಗಳಲ್ಲಿನ ಪೊಲೀಸ್ ಅಧಿಕಾರಿಗಳಂತೆ ಒಂದಿಷ್ಟು ಫೋಜು ಕೊಟ್ಟು ಮತ್ತೆ ತನ್ನ ಗೂಡನ್ನು ಸೇರಿಕೊಳ್ಳುತ್ತಾನೆ.

ದುರಂತವೆಂದರೆ ಜಿಲ್ಲೆಯಾದ್ಯಂತ ಈತನ ಜಾಯಮಾನಕ್ಕೆ ಹೊಂದಿಕೊಳ್ಳುವಂತಹ ಪೊಲೀಸ್ ಅಧಿಕಾರಿಗಳಿದ್ದಾರೆ. ಬಾದಾಮಿಯ ಚಿದಂಬರ, ಬೀಳಗಿಯ ಆರ್.ಎಸ್. ಪಾಟೀಲ್, ಹುನಗುಂದದ ಸಂಗಪ್ಪ ಗುಂಬಗಿ, ಬಾಗಲಕೋಟೆಯ ಬೆಂತೂರ, ಮುಧೋಳದ ಹುಲಸಗುಂದ, ಜಮಖಂಡಿಯ ಸುಂಕದ ಎಂಬ ಸರ್ಕಲ್ ಇನ್ಸ್‌ಪೆಕ್ಟರ್‌ಗಳು ಹಾಗೂ ಬಾಗಲಕೋಟೆಯ ದಥೂತಿ ಪಾಟೀಲ್ ಮತ್ತು ಜಮಖಂಡಿಯ ಎಸ್.ಆರ್.ನಾಯಕ್ ಎಂಬ ಡಿವೈಎಸ್‌ಪಿಗಳು ರಮೇಶ್ ಹರಿಹರನ ಆಜ್ಞೆಯಂತೆ ತಮ್ಮ ತಮ್ಮ ಕಾರ್ಯವ್ಯಾಪ್ತಿಯ ಪೊಲೀಸ್ ಇಲಾಖೆಯನ್ನು ಬಿಜೆಪಿಯ ಕಚೇರಿಗಳನ್ನಾಗಿ ಪರಿವರ್ತಿಸಿದ್ದಾರೆ.

ಬಾದಾಮಿಯ ಚಿದಂಬರ ಕೊಂಚಮಟ್ಟಿಗೆ ಸೀದಾ ಸಾದಾ ಮನುಷ್ಯನೇ. ಯಾವುದೇ ಪ್ರಕರಣದ ತನಿಖೆಯಲ್ಲಿ ಸ್ವಲ್ಪ ವಿಳಂಬ ಕಂಡರೂ ನೀಟಾಗಿ ನಿಭಾಯಿಸುವ ವ್ಯಕ್ತಿ. ಭ್ರಷ್ಟಾಚಾರದಿಂದ ಒಂದಿಷ್ಟು ದೂರವೇ ಇರುವ ಈತ ಮೈಕೈ ಹೊಲಸು ಮಾಡಿಕೊಂಡ ಉದಾಹರಣೆಗಳು ತೀರಾ ವಿರಳ. ಇಂಥವನೂ ಈಗ ರಮೇಶ್ ಹರಿಹರನೆಂಬ ಎಸ್ಪಿಯ ಬಾಲಂಗೋಚಿಯಂತಾಡುತ್ತಿರುವುದು ಒಂದು ದುರಂತ.



ಇನ್ನು ಐದಾರು ವರ್ಷಗಳಿಂದ ಬೀಳಗಿಯಲ್ಲೇ ಠಿಕಾಣಿ ಹೂಡಿರುವ ಆರ್.ಎಸ್.ಪಾಟೀಲ್ ಮುಳುಗಡೆ ಸಂತ್ರಸ್ತರನ್ನೆಲ್ಲಾ ಹಿಂಡಿ ಹಿಪ್ಪೆ ಮಾಡಿದ್ದಾನೆ. ಈತ ಎಷ್ಟು ದಕ್ಷನೆಂದರೆ ಇಲ್ಲಿ ಗಾಂಜಾ, ಮಟ್ಕಾ, ಸಾರಾಯಿ ದಂಧೆಗಳು ಹುಲುಸಾಗಿ ನಡೆಯುತ್ತಿವೆ. ಮಂತ್ರಿ ಮುರುಗೇಶ್ ನಿರಾಣಿಯ ಹಿಂಬಾಲಕನಂತಿರುವ ಈತ ಕಳೆದ ಎಲೆಕ್ಷನ್ ಸಮಯದಲ್ಲಿ ನಿರಾಣಿಯ ಪ್ರಚಾರಕ್ಕೆ ಪೊಲೀಸ್ ಜೀಪುಗಳನ್ನು ಬಳಸಿದ್ದ ಎಂಬ ಪುಕಾರುಗಳಿವೆ. ನಿರಾಣಿಯ ಕೃಪಾಕಟಾಕ್ಷ ಇವನ ಮೇಲಿರುವುದರಿಂದ ಈತ ಬೀಳಗಿಯಲ್ಲಿಯೇ ಗೂಟ ಹೊಡೆದುಕೊಂಡು ಕುಳಿತಿದ್ದಾನೆ.


ವೀರಣ್ಣ ಚರಂತಿಮಠ

ಮುಧೋಳದ ಹುಲಸಗುಂದ ಕಳೆದ ಬಾರಿ ರಾಜ್ಯ ಪ್ರಶಸ್ತಿ ಪಡೆದ ಶೂರ. ಆದರೆ ಇಲ್ಲಿ ಅವ್ಯಾಹತವಾಗಿ ನಡೆಯುವ ಮೈಕಸುಬಿನ ದಂಧೆ ಮತ್ತು ಮಟ್ಕಾ-ಇಸ್ಪೀಟು ದಂಧೆಗಳನ್ನು ನೋಡಿದರೆ ಯಾವ ಕಾರಣಕ್ಕೆ ಈತನಿಗೆ ಪ್ರಶಸ್ತಿ ಕೊಡಲಾಯಿತು ಎಂದು ಗೊಂದಲವಾಗುತ್ತದೆ. ಗೋವಿಂದ ಕಾರಜೋಳನ ಬಾಡಿ ಗಾರ್ಡ್‌ನಂತೆ ಸೇವೆ ಸಲ್ಲಿಸುವ ಈತನ ಅದಕ್ಷತೆ ಬಗ್ಗೆ ಯಾರಾದರೂ ಪ್ರಶ್ನಿಸಿದರೆ ತನಗೆ ಬಂದಿರುವ ಪ್ರಶಸ್ತಿಗಳನ್ನು ತೋರಿಸಿ ಬಾಯ್ಮುಚ್ಚಿಸುವ ಕಲೆಯನ್ನು ಕರಗತ ಮಾಡಿಕೊ[...]

ಇನ್ನು ಹುನಗುಂದದ ತುಂಬಗಿ ಬಗ್ಗೆಯಂತೂ[...] ಬೇಡಿ. ಈ ಭಾಗದಲ್ಲಿ ಗ್ರಾನೈಟ್ ಮೈನಿಂಗ್[...] ಪ್ರಮಾಣದಲ್ಲಿ ನಡೆಯುತ್ತಿದ್ದರೂ ಈತ ಕ[...] ಕೂತಿದ್ದಾನೆ. ಇದನ್ನು ಕಂಡು ಕೆಲ ಪೊಲೀಸ್ [...] "ಸಾಹೇಬ್ರಿಗೆ ಇಲ್ಲಿಂದ ಎಷ್ಟು ಲಾರಿಗಳು [...] ತುಂಬಿಕೊಂಡು ಹೋಗುತ್ತವೆ, ಅದರಿಂದ ಎಷ್[...] ಬರುತ್ತೆ ಎಂಬುದರ ಬಗ್ಗೆಯೇ ಗಮನ" ತಮಾಷೆ ಮಾಡುತ್ತಾರೆ.


ಈ ಎಲ್ಲಾ ಪೊಲೀಸ್ ಠಾ[...] ಕೇಂದ್ರ ಕಚೇರಿಯೆಂದರೆ ಬಾಗಲಕೋ[...] ಎಸ್ಪಿ ಕಚೇರಿ. ಇವರೆಲ್ಲರ ಗಾಡ್‌ಫಾದರ್ [...] ಎಸ್ಪಿ ರಮೇಶ್ ಹರಿಹರ. ಬಾಗ[...] ಉದ್ಧಾರವಾಗಲು ಇನ್ನೇನು ಬೇಕು [...]

ಕಿರಣ್ ಕಮಟಗಿಯ ಮ[...]

ಬಾಗಲಕೋಟೆಯಲ್ಲಿ ಅದೆಷ್ಟೇ [...] ಸುಲಿಗೆಗಳು ನಡೆದರೂ ಅದಕ್ಕೂ [...] ಯಾವ ಸಂಬಂಧವಿಲ್ಲದಂತೆ ಪೊ[...] ಕುಂಭಕರ್ಣ ನಿದ್ರೆಯಲ್ಲಿರುತ್ತಾರೆ. ರಮೇಶ್ [...] ಕಾಲಾವಧಿಯಲ್ಲೇ ಜಿಲ್ಲೆಯಲ್ಲಿ ಹತ್ತಕ್ಕೂ ಹೆಚ್[...] ಗಳಾಗಿವೆ. ಇತ್ತೀಚೆಗೆ ಬಾಗಲಕೋಟೆ ಶಹರದ ವ[...] ದಲ್ಲಿಯೇ ಲಕ್ಷ್ಮನಾರಾಯಣ ರಾಠಿ ಎಂಬ ಮ[...] ದಂಪತಿಗಳ ಕೊಲೆಯಾಯಿತು. ಕೀರಸೂರ ಗ[...] ಮಹಿಳೆಯೊಬ್ಬಳು ಇದ್ದಕ್ಕಿದ್ದಂತೆ ದುಷ[...] ಕೈಗೆ ಸಿಕ್ಕು ಹೆಣವಾದಳು. ಗದ್ದನ[...] ಕೊಲೆ, ಬೋಡನಾಯದಿನ್ನಿಯ ಕೊಲೆ [...] ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಈ ಯಾವ ಪ್ರಕರಣವನ್ನೂ ಪೊ[...] ಸೀರಿಯಸ್ಸಾಗಿ ತೆಗೆದುಕೊ[...] ಕೊಲೆಗಡುಕರ್ಯಾರು ಎಂಬುದು ಪತ್ತೆಯ[...]

ಆದರೆ ಮೊನ್ನೆ ದೀಪಾವಳಿಯ [...] ದಲ್ಲಿ ನಡೆದ ಕಿರಣ್ ಕಮಟಗಿಯ [...] ವಿಚಾರದಲ್ಲಿ ಮಾತ್ರ ಎಚ್ಚೆತ್ತುಕೊಂಡು[...] ಸದಾ ತಮ್ಮ ತಮ್ಮ ಲೋಕದಲ್ಲಿ ಮ[...] ಪೊಲೀಸರು ಈ ಕೊಲೆ ವಿಚಾರದಲ್ಲೇಕೆ ಇಷ್[...] ವಹಿಸಿದ್ದಾರೆ? ಕೊಲೆಗಡುಕರನ್ನು [...]

...ಮು
...ಳ ತಾಲ್ಲೂಕಿನ
...ಮಾರಿ
...ಯಲ್ಲಿ ನಡೆದ
...ಳಿಂದ
... ಇಲಾಖೆಗೆ
...ಗಿ 53
... 36 ಲಕ್ಷ ರೂ.
...ಂಟಾಗಿದೆ.



ಸಮಗ್ರವಾಗಿ ...ಪಿ ಗುತ್ತೇದಾರರು, ಇಂಜಿನಿಯರ್‌ಗಳು, ಬೋಗಸ್ ...ಪಾಸ್ ಆಗಲು ಕಾರಣರಾದವರ ಮೇಲೆ ಕ್ರಮ ...ಳ್ಳಬೇಕೆಂದು ಒತ್ತಾಯಿಸಬೇಕಿರುವ ಶರಣಬಸಪ್ಪ ...ಮಠ ಸ್ವತಃ ಕಂಟ್ರ್ಯಾಕ್ಟರ್‌ಗಳ ಗುಂಪಿನಲ್ಲಿದ್ದಾರೆ; ...ರ್ಜುನ ಖರ್ಗೆಗಂತೂ ಈ ಕಡೆ ನದರಿಲ್ಲ; ಧರ್ಮ ...ವಿಯೊಳಗೆ ಈ ಸಂಗತಿ ಹೋಗುವುದಿಲ್ಲ; ಕೇದಾರಲಿಂಗಯ್ಯ ಹಿರೇ ಮಠ ಎಂಬ ರಾಜ ಕಾರಣಿ ಕಮ್ ಕಂಟ್ರ್ಯಾಕ್ಟರ್‌ನಿಗೆ ಕಾಳಜಿ ಇರಲು ಸಾಧ್ಯವಿಲ್ಲ, ಇನ್ನು ಶಶೀಲ ನಮೋಶಿ ಎಂಬ ಎಂಎಲ್‌ಸಿ ಇತ್ತೀಚೆಗೆ ತನಗೆ ಸಿಕ್ಕ ಚೇರಮನ್ ಸೀಟ್‌ನ ಖುಷಿಯಲ್ಲಿ ತೇಲಾಡುತ್ತಿದ್ದರೆ ಜೇವರ್ಗಿ ಮತಕ್ಷೇತ್ರದಿಂದ ಧರ್ಮ ಸಿಂಗ್‌ರನ್ನು ಹಿಂದಕ್ಕಿಕ್ಕಿ ಚುನಾಯಿತನಾದ ದೊಡ್ಡಪ್ಪಗೌಡ ನರಬೋಳಿಗಂತೂ ಶಾಸಕ ಸ್ಥಾನ ನಿಭಾಯಿಸುವುದೇ ಕಷ್ಟವಾಗತೊಡಗಿದೆ.

ಹೀಗಾದರೆ ಕೆಬಿಜೆಎನ್‌ಎಲ್‌ನಲ್ಲಿ ನಡೆಯುತ್ತಿರುವ ಅವ್ಯವಹಾರವನ್ನು ಪ್ರಶ್ನಿಸುವವರು ಯಾರು?

■ ವಿಶ್ವಾರಾಧ್ಯ ಸತ್ಯಂಪೇಟೆ

...ಗಳ್ಳರ ಪಾಲಾದ ನಿಗಮದ ಸಾವಿರಾರು ಎಕರೆ ಭೂಮಿ

...ವೆಡೆ ನೀರಾವರಿ ಕೆಲಸಗಳಲ್ಲಿ ಹಗಲು ಲೂಟಿ ... ಇನ್ನೊಂದೆಡೆ ಭೂಗಳ್ಳರ, ಅತಿಕ್ರಮಣಕಾರರ, ... ಸಾಗುವಳಿ ಮಾಡುವವರ ಸ್ವರ್ಗವೇ ಇಲ್ಲಿ ...ದೆ. ಕೃಷ್ಣಾ ಮೇಲ್ದಂಡೆ ಯೋಜನೆಯ ಅಡಿಯಲ್ಲಿ ...ನಿರ್ಮಾಣಕ್ಕೆ ಮತ್ತು ಕಾಲುವೆಗಳಿಗೆ ಸಾಕಷ್ಟು ...ಮನ್ನು ರೈತರಿಂದ ಭೂಸ್ವಾಧೀನ ಮಾಡಿಕೊಳ್ಳ... ಆದರೆ ಆ ಭೂಮಿಯ ಪೈಕಿ ಈಗ ಸಾವಿರಾರು ...ಮಿ ಬೇರೆಯವರ ಉಂಬಳಿಯಾಗಿದೆ.

... ಬರ್ಗಾ, ಬಾಗಲಕೋಟೆ, ವಿಜಾಪುರ ಹಾಗೂ ...ರು ಜಿಲ್ಲೆಗಳಲ್ಲಿ ಸುಮಾರು ಆರು ಸಾವಿರ ...ಮಿಯಲ್ಲಿ ಬೇನಾಮಿಯಾಗಿ ಸಾಗುವಳಿ ನಡೆದಿದೆ. ...ಯಲೆ ಕೂಡದು ಎಂದು ರೈತರಿಗೆ ಯುಕೆಪಿ ...ಮಾಡಿ ನಿಷೇಧಾಜ್ಞೆ ಹೇರಿದ್ದರೂ, ಇಲ್ಲಿ ಬಹುತೇಕ ...ಳ್ಳುರುವುದೆ ಭತ್ತದ ಬೆಳೆಯನ್ನು. ಇದು ಕದ್ದುಮುಚ್ಚಿ ...ತ್ತಿರುವ ವಿದ್ಯಮಾನವಲ್ಲ, ಬದಲಾಗಿ ಎಲ್ಲರ ...ದಲ್ಲೆ ನಡೆಯುತ್ತಿದೆ. ಈ ದಗಾಕೋರತನ ಸರಕಾರ ...ಿ ಭೂಸ್ವಾಧೀನ ಪಡಿಸಿಕೊಂಡ ಭೂಮಿಯಲ್ಲಿಯೇ ...ತ್ತಿದೆ ಎಂಬುದು ಇನ್ನೊಂದು ವಿಶೇಷ.

...ದಾಹರಣೆಗೆ ನಾರಾಯಣಪುರ ವಲಯದ ...ಲ್ಲಿ ಕೆಬಿಜೆಎನ್‌ಎಲ್ 453 ಎಕರೆ ಭೂಮಿ ಹೊಂದಿದೆ. ಅದರಲ್ಲಿ ಕೇವಲ 320 ಎಕರೆಗಳನ್ನು ಮಾತ್ರ ನಿಗಮ ಬಳಸಿಕೊಂಡಿದೆ. ಇನ್ನುಳಿದ 132 ಎಕರೆ ಭೂಮಿ ಭೂಗಳ್ಳರ ಒಡಲು ಸೇರಿದೆ. ಇನ್ನು ಹುಣಸಗಿ ವಲಯದಲ್ಲಿ 1013 ಎಕರೆ ಭೂಮಿ ನಿಗಮದ ಆಸ್ತಿಯಾಗಿದೆ. ಆದರೆ ಅದರಲ್ಲಿ ಕೇವಲ 201 ಎಕರೆ ಮಾತ್ರ ಇಲಾಖೆ ಬಳಸಿಕೊಂಡಿದೆ. ಇನ್ನುಳಿದ 567 ಎಕರೆ ಅನಾಮತ್ತು ದಗಾಕೋರರ ಪಾಲಾಗಿದೆ.

ಕೇವಲ ಎರಡು ಉಪವಿಭಾಗಗಳಲ್ಲಿಯ ಭೂಮಿಯ ಕತೆ ಇದಾದರೆ ಇನ್ನುಳಿದ ಕೆಬಿಜೆಎನ್‌ಎಲ್ ಪ್ರದೇಶಗಳಲ್ಲಿ ಇನ್ನೆಷ್ಟು ಭೂಮಿಯನ್ನು ಬೇರೆಯವರು ಕಬ್ಜಾ ತೆಗೆದುಕೊಂಡಿರಲಿಕ್ಕಿಲ್ಲ!? ಕಾಲುವೆಗಳಿಗಾಗಿ, ಕಚೇರಿಗಾಗಿ ನಿಗಮಕ್ಕೆ ರೈತರೇ ನೀಡಿದ್ದ ಈ ಭೂಮಿಯನ್ನು ರೈತರು ತಮ್ಮ ಸುಪರ್ದಿಯಲ್ಲಿಟ್ಟುಕೊಂಡು ಮುನ್ನಡೆದಿದ್ದರೆ ಅದನ್ನು ಸ್ವಲ್ಪ ನಿರ್ಲಕ್ಷಿಸಬಹುದಿತ್ತೇನೋ? ಆದರೆ ಸರಕಾರದ ಈ ಭೂಮಿಯನ್ನು ತಮ್ಮಪ್ಪನ ಆಸ್ತಿಯೆಂಬಂತೆ ವರ್ತಿಸುತ್ತಿರುವವರು, ಅವುಗಳನ್ನು ಕಬ್ಜಾ ಮಾಡಿಕೊಂಡಿರುವವರು ಈ ಭಾಗದ ಮರಿ-ಗಿರಿ ರಾಜಕಾರಣಿಗಳು ಮತ್ತು ಅವರ ಮಕ್ಕಳು!!

ಈ ಭ್ರಷ್ಟಾಚಾರವನ್ನು ತಡೆಯುವ ತಾಕತ್ತು ಯಡ್ಡಿಯ ಚೆಡ್ಡಿ ಸರಕಾರಕ್ಕೆ ಇದೆಯೆ?

...ತ್ತೇವೆಂದು ಪೌರುಷದಿಂದ ಓಡಾಡುತ್ತಿರುವುದರ ... ಕಾರಣವಾದರೂ ಏನು? ಈ ಪ್ರಶ್ನೆಗಳನ್ನಿಟ್ಟು ...ಪ್ರಕರಣವನ್ನು ಸ್ವಲ್ಪ ಕೆದಕಿದರೆ ಅಸಲೀ ರಾಜಕಾರಣ ...ಯುತ್ತದೆ.

...ದಾವಳಿಯ ಸಂದರ್ಭದಲ್ಲಿ ಕೊಲೆಯಾದ ಕಿರಣ ... ಎಂಬ ವ್ಯಾಪಾರಿ ಅಸಲಿಗೆ ಚರಂತಿಮಠನ ... ಕೇವಲ ಮೂವತ್ತು ವರ್ಷ ವಯಸ್ಸಿನ, ಲಿಂಗಾ...ಯತರ ಜಾತಿಗೆ ಸೇರಿದ್ದ ಈತ ಕಳೆದ ಚುನಾವಣೆಯಲ್ಲಿ ...ಠನ ಗೆಲುವಿಗೆ ಸಾಕಷ್ಟು ಶ್ರಮಿಸಿದ್ದ. ತನ್ನ ...ಧವರೆಲ್ಲಾ ಚರಂತಿಮಠನ ಬೆನ್ನಿಗಿರುವಂತೆ ...ವುದರಲ್ಲಿ ಈತನ ಪಾತ್ರವೂ ಇತ್ತು. ಯಾವಾಗ ...ಕೊಲೆಯಾಯಿತೋ ತಕ್ಷಣ ಕಾರ್ಯಪ್ರವೃತ್ತನಾದ ... ಎಸ್ಪಿ ರಮೇಶ್ ಹರಿಹರ. ಏಕೆಂದರೆ, ಚರಂತಿ...ಹಿತನೊಬ್ಬನ ಕೊಲೆಗಡುಕರನ್ನು ಹಿಡಿದು ಚರಂತಿ...ಸ್ನೇಹ ಸಂಪಾದಿಸುವುದು; ಅವನಿಂದ ಭೇಷ್ ...ಳ್ಳುವುದು!

...ಂತ ಎಂದರೆ ಇಷ್ಟು ದಿನ ನಿದ್ರೆಯಲ್ಲಿದ್ದ ...ರು ಈಗ ದಿಢೀರೆಂದು ಎದ್ದರೆ ಏನಾಗುತ್ತೆ? ...ಡೆದು ಒಂದು ತಿಂಗಳಾದರೂ ಕೊಲೆಗಡುಕರು ... ಎಂಬುದನ್ನು ಪತ್ತೆ ಮಾಡುವುದಕ್ಕಾಗಿಲ್ಲ!

ಕೊಲೆ ನಡೆದಿದ್ದೇಗೆ?

... ಕುಮಟಗಿಗೆ ಟಿವಿಎಸ್ ಏಜೆನ್ಸಿಯಿತ್ತು, ... ಫೋನ್ ವ್ಯಾಪಾರ ಮಾಡುತ್ತಿದ್ದ. ಅವತ್ತು ...ಯು ದಿನದಂದು ವ್ಯಾಪಾರ ಮುಗಿಸಿಕೊಂಡು ...ರವಲಯದ ರೋಜ್‌ಲ್ಯಾಂಡ್ ಕಾಲೋನಿಯಲ್ಲಿ ... ಮನೆಗೆ ಕಾರಿನಲ್ಲಿ ಹೊರಟಿದ್ದಾನೆ. ದಾರಿಯಲ್ಲಿ ... ಹಂತಕರು ಕಾರು ಬೇರೆ ದಾರಿಯಲ್ಲಿ ಮನೆಗೆ ...ವಂತೆ ವ್ಯವಸ್ಥೆ ಮಾಡಿದ್ದಾರೆ. ಆತನಿದ್ದ ಕಾರು ...ಧಿಯಲ್ಲದೇ ಇನ್ನೊಂದು ಮಾರ್ಗದಲ್ಲಿ ಮನೆ ...ಂದಿದೆ. ಅಲ್ಲೊಬ್ಬ ರಸ್ತೆಯಲ್ಲೇ ಪಟಾಕಿ ಹಚ್ಚುವ ...ಸಿಂತುಕೊಂಡಿದ್ದಾನೆ. ದೀಪಾವಳಿ ಹಬ್ಬವಾದ್ದರಿಂದ ... ಅನುಮಾನದಿಂದ ನೋಡದೇ ಕಾರ್ ಆಫ್ ...ಿಡು ಕಿರಣ ನಿಂತಿದ್ದಾನೆ.

... ಹೊಂಚುಹಾಕುತ್ತಿದ್ದ ಹಂತಕರು ನೇರವಾಗಿ ...ಗೆ ಬಂದು ಡ್ರೈವರ್ ಸೀಟಿನಲ್ಲೇ ಕುಳಿತಿದ್ದ ಕಿರಣ ... ಮೇಲೆ ಮುಚ್ಚಿಂದ ಹಲ್ಲೆ ನಡೆಸಿದ್ದಾರೆ. ...ನಿಸಿದ್ದ ಕ್ಯಾಶ್ ಬ್ಯಾಗನ್ನು ಎತ್ತಿಕೊಂಡು ಓಡಲಾರಂಭಿದ್ದೇ ತಡ ಹಂತಕರು ಅವನನ್ನು ಬೆನ್ನತ್ತಿ ದಾಳಿ ಮಾಡಿದ್ದಾರೆ. ಆತ ಹೆಣವಾಗಿ ನೆಲಕ್ಕುರುಳುತ್ತಿದ್ದಂತೆಯೇ ಹಂತಕರು ಕ್ಯಾಶ್ ಬ್ಯಾಗನ್ನು ಎತ್ತಿಕೊಂಡು ಕದ್ದುಕೊಂಡು ತಂದಿದ್ದ ಬೈಕ್‌ನಲ್ಲಿ ತ್ರಿಪಲ್ ರೈಡಿಂಗ್ ಮಾಡಿಕೊಂಡು ಪರಾರಿಯಾಗಿದ್ದಾರೆ. ನಂತರ ನವನಗರದ ಕುಮಾರೇಶ್ವರ ಆಸ್ಪತ್ರೆಯ ಹತ್ತಿರ ಈ ಬೈಕ್ ಸಿಕ್ಕಿದೆ.

ಮೇಲ್ನೋಟಕ್ಕೆ ಕಾಣುವಂತೆ ಇದು ಕೇವಲ ದುಡ್ಡಿಗಾಗಿ ನಡೆದ ಕೊಲೆಯಲ್ಲ. ಕೇವಲ ದರೋಡೆಕೋರರಾಗಿದ್ದರೆ ಬೆದರಿಸಿ ದುಡ್ಡು ಕಿತ್ತುಕೊಳ್ಳಬಹುದಿತ್ತು. ಕೊಲೆಗಡುಕರು ಕಳ್ಳರೇ ಆಗಿದ್ದರೆ ಈತನ ಮೈಮೇಲಿದ್ದ 50 ಗ್ರಾಂ ಬಂಗಾರದ ಒಡವೆಗಳನ್ನು, ಜೇಬಲ್ಲಿದ್ದ ಸಾವಿರಾರು ರೂಪಾಯಿಗಳನ್ನು, ಕೈಬೆರಳಿನಲ್ಲಿದ್ದ ವಜ್ರದ ಉಂಗುರವನ್ನು, ಕಾರ್‌ನಲ್ಲಿದ್ದ 5-6 ಕೆ.ಜಿ. ಬಂಗಾರವನ್ನು ಬಿಟ್ಟು ಹೋಗುತ್ತಿರಲಿಲ್ಲ. ಹಾಗಾಗಿ ಇದು ದುಡ್ಡಿಗಿಂತ ಹೆಚ್ಚಾಗಿ ಸೇಡಿನ ಕೊಲೆ ಎಂಬುದು ಮೇಲ್ನೋಟಕ್ಕೆ ಕಾಣುತ್ತದೆ.


ಘಟನೆ ನಡೆಯುತ್ತಿದ್ದಂತೆ ಪೊಲೀಸರಿಗೆ ಯಾರೋ ಸುದ್ದಿ ಮುಟ್ಟಿಸಿದ್ದಾರೆ. ಆದರೆ, ಮಾಮೂಲಿಯಂತೆ ಪೊಲೀಸರೂ ಅದರ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಏಕೆಂದರೆ, ಕೊಲೆಯಾದವನು ಚರಂತಿಮಠನ ಸ್ನೇಹಿತ ಎಂಬುದು ಅವರಿಗೆ ಆಗ ಗೊತ್ತಿರಲಿಲ್ಲ!

ಮತ್ತೊಂದು ಜೋಡಿ ಕೊಲೆ

ಕಿರಣ ಕಮಟಗಿಯ ಕೊಲೆ ನಡೆದು ಒಂದು ತಿಂಗಳು ತುಂಬುವ ಹೊತ್ತಿಗೆ ಮುಧೋಳ ತಾಲ್ಲೂಕಿನ ಮಹಾಲಿಂಗಪುರದಲ್ಲಿ ಹಾಡುಹಗಲೇ ಮತ್ತೊಂದು ಜೋಡಿ ಕೊಲೆ ನಡೆದಿದೆ. ಅಶೋಕ ಪೂಜಾರ್ ಮತ್ತು ಲಕ್ಷ್ಮಣ್ ಮೇತ್ರಿ ಎಂಬ ಪುರಸಭಾ ಸದಸ್ಯರು ಹಳೆಯ ವೈಷಮ್ಯಕ್ಕೆ ಬಲಿಯಾಗಿದ್ದಾರೆ. ಕೊಲೆ ಮಾಡಿದ ಸುಫಾರಿ ಹಂತಕರು ಕೊನೆಗೆ ತಾವೇ ಪೊಲೀಸರ ಎದುರು ಸರೆಂಡರ್ ಆಗಿದ್ದಾರೆ. ಆದರೆ ಅವರನ್ನು ಸಿನಿಮೀಯ ರೀತಿಯಲ್ಲಿ ಬಂಧಿಸಲಾಗಿದೆ ಎಂದು ರಮೇಶ್ ಹರಿಹರ ಪೇಪರುಗಳಿಗೆ ಪೋಜು ನೀಡಿದ್ದಾನೆ. ಆದರೆ, ಕೊಲೆಗೆ ಕುಮ್ಮಕ್ಕು ನೀಡಿದವರನ್ನು, ಸುಫಾರಿ ಕೊಟ್ಟವರನ್ನು ಹಿಡಿಯುವುದಕ್ಕೆ ರಮೇಶ್ ಹಿಂದುಮುಂದು ನೋಡುತ್ತಿದ್ದಾನೆ ಯಾಕೆ?

ಚರಂತಿಮಠ, ಮುರುಗೇಶ್ ನಿರಾಣಿಯಂಥ ರಾಜಕಾರಣಿಗಳು. ರಮೇಶ್ ಹರಿಹರನಂಥ ಎಸ್ಪಿ ..... ಬಾಗಲಕೋಟೆ ಬಿಹಾರವಾಗಲು ಇನ್ನೇನು ಬೇಕು ಹೇಳಿ.

■ ಮೇಘರಾಜ್



ಧೈರ್ಯವಂತ ಕರ್ಕರೆಗೆ ಶ್ರದ್ಧಾಂಜಲಿ

ಕೊಟ್ಟ ಕೊನೆಯ ತ್ಯಾಗಕ್ಕಾಗಿನ ಧೈರ್ಯವೇ ಒಬ್ಬ ನೈಜ ನಾಯಕನ ಹೆಗ್ಗುರುತಾಗಿರುತ್ತದೆ. ಅಂಥ ಧೈರ್ಯ ಮತ್ತು ನಾಯಕತ್ವಗಳನ್ನು ಹೊಂದಿರುವ ಅಧಿಕಾರಿಗಳು ತೀರಾ ಕಡಿಮೆ. ಅವರು ತುಂಬಾ ಉನ್ನತ ಮಟ್ಟದ ಅಧಿಕಾರಿಗಳೇನಲ್ಲ, ಆದರೆ ತಮ್ಮ ಕೆಲಸವನ್ನವರು ಚಾಣಾಕ್ಷತನದಿಂದ ಮತ್ತು ಪ್ರಾಮಾಣಿಕವಾಗಿ ಮಾಡುತ್ತಾರೆ. ಕಾರ್ಯನಿರ್ವಹಣೆಯ ನೈಜ ತೀರ್ಪುಗಾರರಾದ ತಮ್ಮ ಕೆಳಗಿನ ಅಧಿಕಾರಿಗಳ ನಂಬಿಕೆ ಮತ್ತು ವಿಶ್ವಾಸಗಳನ್ನು ಗಳಿಸಿಕೊಳ್ಳುವುದಕ್ಕೆ ಅವರಿಂದ ಸಾಧ್ಯವಾಗುತ್ತದೆ. ನಾನು ಖುದ್ದಾಗಿ ಬಲ್ಲ ಮುಂಬೈನ ಭಯೋತ್ಪಾದನೆ ನಿಗ್ರಹ ದಳದ (ಎಟಿಎಸ್) ಹೇಮಂತ್ ಕರ್ಕರೆ ಮತ್ತು ಅವರ ಪೊಲೀಸ್ ತಂಡದ ಇನ್ನಿತರ ಅಧಿಕಾರಿಗಳು ಈ ಮೌಲ್ಯಗಳಿಗೆ ಸೇರಿದವರಾಗಿದ್ದರು. ಭಯೋತ್ಪಾದನೆಯನ್ನು ನಿಭಾಯಿಸುವುದು ಸುಲಭದ ಕೆಲಸವಲ್ಲ. ಸಾಮಾನ್ಯ ಅಪರಾಧವನ್ನು ನಿಭಾಯಿಸುವುದಕ್ಕೆ ನಮ್ಮ ಪೊಲೀಸರಿಗೆ ತರಬೇತಿಯಿರುತ್ತದೆ. ಭಯೋತ್ಪಾದನೆ ಹಾಗಲ್ಲ. ತುಂಬಾ ಅನುಭವ ಹಾಗೂ ಆಂತರಿಕ ಪ್ರೇರಣಾಶಕ್ತಿಯಿರುವ ಹಲವಾರು ಅಧಿಕಾರಿಗಳು ಭಯೋತ್ಪಾದನೆಯನ್ನು ನಿಭಾಯಿಸುವುದಕ್ಕಾಗಿ ತಮ್ಮನ್ನು ತಾವೇ ತರಬೇತುಗೊಳಿಸಿಕೊಳ್ಳಲು ಖುದ್ದಾಗಿ ಮುನ್ನಡೆಯುತ್ತಾರೆ.

ಭಯೋತ್ಪಾದನೆಗೆ ಯಾವುವೇ ರಾಷ್ಟ್ರೀಯತೆಯ ಗಡಿಯಿಲ್ಲ; ಅದು ನ್ಯಾಯಕ್ಕಾಗಿ ತಾವು ದುಡಿಯುತ್ತಿದ್ದೇವೆಂದು ನಂಬಿಕೊಂಡು ಉನ್ನತವಾಗಿ ಪ್ರೇರಿತಗೊಂಡಿರುವ ವ್ಯಕ್ತಿಗಳ ಜಾಲ. ಸಾಮಾನ್ಯವಾಗಿ ಇಂಥವರು ತಮ್ಮ ನಾಯಕರುಗಳಿಂದ ತಪ್ಪು ಮಾರ್ಗದರ್ಶನಕ್ಕೊಳಗಾಗಿರುತ್ತಾರೆ.

ನನಗೆ ಹೇಮಂತ್ ಕರ್ಕರೆ ಪರಿಚಯವಾದದ್ದು ಅವರು ಮುಂಬೈನ ಭಯೋತ್ಪಾದನೆ ನಿಗ್ರಹ ದಳದ ಮುಖ್ಯಸ್ಥರಾಗಿ ಜವಾಬ್ದಾರಿ ವಹಿಸಿಕೊಂಡ ತಕ್ಷಣವೆ. ನಾನು ಅವರನ್ನು ಹಲವು ಬಾರಿ ಭೇಟಿಯಾಗಿದ್ದೇನೆ. ಆಂತರಿಕ ಭದ್ರತೆಯ ವಿಚಾರವಾಗಿ ನವದೆಹಲಿಯಲ್ಲಿ ನಡೆಯುತ್ತಿದ್ದ ಸಭೆಗಳಲ್ಲಿ ನಾವು ಪರಸ್ಪರ ಭೇಟಿಯಾಗುತ್ತಿದ್ದೆವು. ಆನಂತರದಲ್ಲಿ ನಮ್ಮಿಬ್ಬರ ನಡುವಿನ ಒಡನಾಟವೂ ಹೆಚ್ಚಾಗಿ ಕೆಲಸವಿರಲಿ, ಇಲ್ಲದಿರಲಿ ವಾರಕ್ಕೆರಡು ಬಾರಿ ಅವರೊಂದಿಗೆ ಫೋನಿನಲ್ಲಿ ಮಾತಾಡುತ್ತಿದ್ದೆ.

ನನಗೆ ಗೊತ್ತಿರುವ ಮಟ್ಟಿಗೆ ಕರ್ಕರೆ ಅತ್ಯಂತ ಶಿಸ್ತಿನ ಅಧಿಕಾರಿಯಾಗಿದ್ದರು ಮಾತ್ರವಲ್ಲ ದೇಶದ ಆಗುಹೋಗುಗಳ ಬಗ್ಗೆ ಅದರಲ್ಲೂ ವಿಶೇಷವಾಗಿ ದೇಶದ ಭದ್ರತಾ ವಿಚಾರಗಳ ಬಗ್ಗೆ ಅಪಾರವಾಗಿ ತಿಳಿದುಕೊಂಡಿರುತ್ತಿದ್ದರು. ತುಂಬಾ ಕ್ರಿಯಾಶೀಲವಾಗಿರುತ್ತಿದ್ದರು. ಭಯೋತ್ಪಾದನೆಯ ವಿರುದ್ಧ ಹೋರಾಡುವುದಕ್ಕೆ, ಅದನ್ನು ಮೂಲೋತ್ಪಾಟನೆ ಮಾಡುವುದಕ್ಕೆ ನಮ್ಮ ದೇಶಕ್ಕೆ ಸಾಕಷ್ಟು ಕುಶಲತೆಯಾಗಲೀ, ಧೈರ್ಯವಾಗಲೀ ಅಥವಾ ಇಚ್ಛಾಶಕ್ತಿಯಾಗಲೀ ಇಲ್ಲ ಎಂದು ಆಗಾಗ ಹೇಳುತ್ತಿದ್ದರು. ಭಯೋತ್ಪಾದನೆಯನ್ನಾಗಲೀ ಅಥವಾ ಸಂಘಟಿತ ಅಪರಾಧಗಳನ್ನಾಗಲೀ ನಿಗ್ರಹಿಸುವುದಕ್ಕೆ ರಾಜ್ಯಗಳ ಮತ್ತು ಕೇಂದ್ರದ ಭದ್ರತಾ ಇಲಾಖೆಗಳ ನಡುವೆ, ಪಡೆಗಳ ನಡುವೆ ಅವಶ್ಯವಾಗಿ ಬೇಕಿರುವ ವ್ಯವಸ್ಥಿತವಾದ ಸಮನ್ವಯವೇ ಇಲ್ಲದಿರುವ ಕೊರತೆಯನ್ನು ಆಗಾಗ ಎಲ್ಲರ ಗಮನಕ್ಕೆ ತರುತ್ತಿದ್ದರು.


ಈಗ್ಗೆ ಒಂದು ತಿಂಗಳ ಹಿಂದಷ್ಟೇ ನಾನು ಬೆಂಗಳೂರು ಸ್ಫೋಟದ ಬಗ್ಗೆ ಮಾಹಿತಿ ಕಲೆಹಾಕುವುದಕ್ಕೆ ಮುಂಬಯಿಯಲ್ಲಿ ಬಂಧಿತರಾಗಿದ್ದ ಆರೋಪಿಗಳ ವಿಚಾರಣೆಗಾಗಿ ಅಲ್ಲಿಗೆ ಹೋಗಿದ್ದೆ. ಆಗ ಕರ್ಕರೆ ಆಫೀಸಿನಲ್ಲಿ ಒಂದೆರಡು ತಾಸುಗಳನ್ನು ಕಳೆದು ಅವರೊಂದಿಗೆ ಭದ್ರತಾ ವಿಚಾರವಾಗಿ ಚರ್ಚಿಸಿದ್ದೆ.

ಹೇಮಂತ್ ಕರ್ಕರೆ ತನ್ನ ಕೆಳಗಿನ ಅಧಿಕಾರಿಗಳ ಜೊತೆಗೆ, ಸಿಬ್ಬಂದಿಯ ಜೊತೆಗೆ ಬಹಳ ಸ್ನೇಹಪೂರ್ಣವಾದ ಸಂಬಂಧಗಳನ್ನು ಬೆಳೆಸಿಕೊಂಡಿದ್ದರು. Research and Analysis Wing (RAW) ನಲ್ಲಿ ಕೆಲಸ ಮಾಡಿದ ಅನುಭವವಿದ್ದ ಕರ್ಕರೆ ಗುಪ್ತಚರ ಮಾಹಿತಿ ಕಲೆಹಾಕುವಲ್ಲಿ, ಗುಪ್ತಚರ ಜಾಲವನ್ನು ನಿರ್ಮಿಸುವಲ್ಲಿ expert ಆಗಿದ್ದರು. ಅವರು ಬುಧವಾರ ರಾತ್ರಿ ಸಾವಿನ ದವಡೆಯೆಡೆಗೆ ಹೋಗಿದ್ದು ನಿಜಕ್ಕೂ ದುರಾದೃಷ್ಟ.

ಹೇಮಂತ್ ಕರ್ಕರೆ ಪ್ರದರ್ಶಿಸಿದ ಧೈರ್ಯ ಮತ್ತು ಸಾಧ್ಯವಾದಷ್ಟು ಬೇಗ ಕಾರ್ಯಪ್ರವೃತ್ತರಾಗುವ ಅವರ ಪ್ರವೃತ್ತಿ ನಮ್ಮಲ್ಲಿ ಅನೇಕರಿಗೆ ಆದರ್ಶನೀಯವಾಗಿದೆ. ನಮ್ಮನ್ನಗಲಿದ ನನ್ನ ಸಹಪಾಠಿ ಕರ್ಕರೆಗೆ ನನ್ನ ಹೃದಯ ತುಂಬಿದ ಶ್ರದ್ಧಾಂಜಲಿ. ಅವರೊಳಗಡಗಿದ್ದ ಶಕ್ತಿ ಇನ್ನಷ್ಟು ಬಲಿಷ್ಠ ಶಕ್ತಿಯಾಗಿ ಹೊರಹೊಮ್ಮಿ ಭಯೋತ್ಪಾದನೆಯ ವಿರುದ್ಧದ ಯುದ್ಧವನ್ನು ಮುಂದುವರೆಸುತ್ತದೆ.

- ಗೋಪಾಲ್ ಹೊಸೂರ್, ಭಯೋತ್ಪಾದನಾ ನಿಗ್ರಹ ದಳದ ಮುಖ್ಯಸ್ಥರು, ಕರ್ನಾಟಕ

ಬಾಂದಳದಿಂದ ಕಳಚಿಬಿದ್ದ ಮತ್ತೊಂದು ನಕ್ಷತ್ರ ವಿ.ಪಿ. ಸಿಂಗ್



ಸಿಂಗ್ ಅವರು ಅಧಿಕಾರ ಕಳೆದುಕೊಂಡ ನಂತರ ಏಕಾಂಗಿಯಾದರು. ಆರೋಗ್ಯವೂ ಕೈಕೊಟ್ಟಿತು. ಮೂತ್ರಪಿಂಡಗಳು ಕೆಲಸ ಮಾಡದೆ ನಿಷ್ಕ್ರಿಯಗೊಂಡವು. ವಾರದಲ್ಲಿ ಎರಡು, ಮೂರು ಬಾರಿ ಡೈಯಾಲಿಸಿಸ್‌ನ ಮೊರೆಹೋಗಬೇಕಾಗಿತ್ತು. ಅಂತಹ ಸ್ಥಿತಿಯಲ್ಲೂ ಸಹ ಅವರು ಬಣ್ಣದ ವೈಚಿತ್ರಗಳಿಗೆ ಮರುಳಾಗಿ ಉತ್ತಮ ಪೇಂಟರ್ ಆಗಿ ಹೊಮ್ಮಿದರು. ಹತ್ತು ಹಲವು ಏಳುಬೀಳನ್ನು ಕಂಡಿದ್ದ ವಿ.ಪಿ.ಸಿಂಗ್ ಅವರು ಈಗ ಅಂತಿಮವಾಗಿ ನಮ್ಮನ್ನು ಅಗಲಿ ಹೋಗಿದ್ದಾರೆ. ಈ ದೇಶ ಕಂಡ ಅಪರೂಪದ, ಜನಪರ ಕಾಳಜಿಯ ನಾಯಕ ವಿ.ಪಿ. ಸಿಂಗ್ ಬಾಂದಳದಿಂದ ಕಳಚಿಬಿದ್ದ ನಕ್ಷತ್ರ ಎಂದರೆ ತಪ್ಪಾಗಲಾರದು.

■ ಎಂ.ಪಿ. ಪ್ರಕಾಶ್

ಮೊನ್ನೆ ನವೆಂಬರ್ 26 ರಂದು ಎಲ್ಲರನ್ನು ಅಗಲಿದ ವಿಶ್ವನಾಥ ಪ್ರತಾಪ್ ಸಿಂಗ್ ರಾಜವಂಶಸ್ಥ, ಹೋರಾಟದ ಕೆಚ್ಚಿನ ರಜಪೂತ. ಅವರ ಪೂರ್ವಜರು ಮೊಘಲರೊಂದಿಗೆ ಸಹಕರಿಸಿದರೆಂಬ ಅಪವಾದ ಅವರ ವಂಶದ ಮೇಲಿದ್ದರೂ, ತಮ್ಮ ಸರಳ, ಸಜ್ಜನಿಕೆಯ ನಡವಳಿಕೆ,' ಬಡವರ ಬಗ್ಗೆ ತೋರಿಸುತ್ತಿದ್ದ ಕಾಳಜಿ, ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತಿ ಹೋರಾಡುವ ಕೆಚ್ಚು ಈ ಎಲ್ಲಾ ಗುಣಗಳು ಸಿಂಗ್ ಅವರನ್ನು ಜನಪ್ರಿಯಗೊಳಿಸಿದ್ದವು. ವಿಶ್ವನಾಥ ಪ್ರತಾಪ್ ಸಿಂಗ್‌ರವರು ದೇಶದ ದೊಡ್ಡ ರಾಜ್ಯವಾದ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿ, ಕೇಂದ್ರದಲ್ಲಿ ಮಹತ್ವ ಖಾತೆಗಳನ್ನು ಹೊಂದಿದ್ದ ಸಚಿವರಾಗಿ, ಅಂತಿಮವಾಗಿ ಪ್ರಧಾನ ಮಂತ್ರಿಗಳಾಗಿ ವಿಕ್ರಮವನ್ನೇ ಸಾಧಿಸಿದರು. ಶ್ರೀಮತಿ ಇಂದಿರಾ ಗಾಂಧಿ ಹಾಗು ರಾಜೀವ್ ಗಾಂಧಿಯವರ ಆಪ್ತ ವಲಯದಲ್ಲಿದ್ದವರು. ಮೂಲತಃ ಕಾಂಗ್ರೆಸ್ಸಿಗರು.

ಅವರು ರಕ್ಷಣಾ ಮಂತ್ರಿಗಳಾಗಿದ್ದಾಗ 'ಬೋಫೋರ್ಸ್ ಫಿರಂಗಿಗಳ' ಖರೀದಿಯಲ್ಲಿ ಅವ್ಯವಹಾರ ನಡೆದಿದೆಯೆಂದೂ, ಭ್ರಷ್ಟಾಚಾರದ ಸಂಶಯದ ಮುಳ್ಳು ದೇಶದ ಪ್ರಧಾನ ಮಂತ್ರಿಗಳ ಕಡೆ ತೋರಿಸುತ್ತದೆಯೆಂದೂ ನೆಹರೂ ಮನೆತನದ ಬಗ್ಗೆ ಅತೃಪ್ತಿಹೊಂದಿದ್ದ ಕೆಲವು ಗೆಳೆಯರನ್ನು ಕಟ್ಟಿಕೊಂಡು, ಸಚಿವ ಸಂಪುಟಕ್ಕೆ ರಾಜೀನಾಮೆ ನೀಡಿ 'ಜನಮೋರ್ಚ' ಎಂಬ ಒಂದು ಸಂಸ್ಥೆಯನ್ನು ಕಟ್ಟಿದರು.

ಆ ಸಂದರ್ಭದಲ್ಲಿ ಅವರು ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಮಾಡಿದ ಭಾಷಣ ನನಗಿನ್ನೂ ನೆನಪಿದೆ. ಅವರ ಭಾಷಣವನ್ನು ಕೇಳಿ ಅಂದು ಕರ್ನಾಟಕದ ಮುಖ್ಯ ಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆಯವರು ಎಷ್ಟು ಆವೇಶಭರಿತರಾದರೆಂದರೆ "ಸಿಂಗ್‌ರವರು ರಾಜಕೀಯ ಪಕ್ಷ ಕಟ್ಟಿದರೆ ಅಥವಾ ಜನತಾ ಪಕ್ಷಕ್ಕೆ ಸೇರಿದರೆ ನಾನು ಸ್ವಯಂಸೇವಕನಾಗಿ ದುಡಿಯುತ್ತೇನೆ" ಎಂದಿದ್ದರು. ಜಾರ್ಜ್ ಫರ್ನಾಂಡಿಸ್ ಕೂಡ "ಒಂದು ವೇಳೆ ವಿ.ಪಿ. ಸಿಂಗ್‌ರವರಿಲ್ಲದಿದ್ದರೆ ಸದ್ಯದ ಪರಿಸ್ಥಿತಿಯಲ್ಲಿ ಬೇರೊಬ್ಬ ವಿ.ಪಿ. ಸಿಂಗ್‌ರವರನ್ನು ಸೃಷ್ಟಿಸಬೇಕಾಗುತ್ತದೆ" ಎಂದು ಹೇಳಿದ್ದರು.

ಮುಂದೆ 89 ರ ಸಂಸತ್ ಚುನಾವಣೆಯಲ್ಲಿ ಜನತಾದಳ ಬಹುಮತ ಸಾಧಿಸಿತು. ಪ್ರಜಾಪ್ರಭುತ್ವದ ಬಗ್ಗೆ ಹೊಸ ಆಶಯಗಳನ್ನು ಮೂಡಿಸಿದ್ದ ಭ್ರಷ್ಟಾಚಾರದ ವಿರುದ್ಧ ದನಿಯಾಗಿದ್ದ ಸಿಂಗ್ ಅವರು ಅಂದಿನ ಪ್ರಧಾನ ಮ ಆಯ್ಕೆ ಸಂದರ್ಭ ಬಂದಾಗ ದೇವಿಲಾಲರೊಂದಿಗೆ ಗೂಡಿ ನಡೆದುಕೊಂಡಿದ್ದು ಮಾತ್ರ ಪ್ರಜಾಪ್ರಭುತ್ವ ತ ವಿರುದ್ಧವಾಗಿತ್ತು.

"ವಿ.ಪಿ. ಸಿಂಗರವರು ಸ್ಪರ್ಧಿಸಿದರೆ ನಾನು ವಿರುದ್ಧವಾಗಿ ಸ್ಪರ್ಧಿಸುವೆ" ಎಂದು ಜನತಾ ಚಂದ್ರಶೇಖರವರು ಪ್ರಕಟಿಸಿದ್ದರು. ಹಾಗೆಂದು ಜನ ಸಂಸದೀಯ ಸಭೆಯಲ್ಲೂ ಭಾಷಣ ಮಾಡಿದ್ದರು. ವಾಮಮಾರ್ಗ ಅನುಸರಿಸಿದ ಕೆಲವರು ಚೌಧರಿ ಲಾಲರ ಹೆಸರನ್ನು ಪ್ರಧಾನಮಂತ್ರಿ ಸ್ಥಾನಕ್ಕೆ ಸೂಚಿಸಿ ಇದಕ್ಕೆ ಎಲ್ಲರೂ ಒಪ್ಪಿದ್ದರಿಂದ ಚಂದ್ರಶೇಖರ್ ಸ್ಪರ್ಧೆ ಹಿಂದೆ ಸರಿದರು. ಆದರೆ ಕೊನೆ ಕ್ಷಣದಲ್ಲಿ ದೇವಿಲಾ "ಈ ಉನ್ನತ ಸ್ಥಾನ ನಿರ್ವಹಿಸುವ ಅರ್ಹತೆ ನ ಆದುದರಿಂದ ನಾನು ವಿ.ಪಿ. ಸಿಂಗ್‌ರವರನ್ನು ಪ್ರ ಮಂತ್ರಿ ಸ್ಥಾನಕ್ಕೆ ಸೂಚಿಸುತ್ತೇನೆ" ಎಂದು ಹೇಳಿದ್ದ ಸಿಂಗ್‌ರವರು ಪ್ರತಿರೋಧವಿಲ್ಲದೆ ಪ್ರಧಾನ ಮಂತ್ರಿ ಆ ಹೀಗೆ ಮಾಡುವ ಮೂಲಕ ಸಿಂಗ್ ಅವರು ಪ್ರ ಮಂತ್ರಿಯ ಆಯ್ಕೆಯ ಪ್ರಕ್ರಿಯೆಯಲ್ಲಿ ತಪ್ಪು ಹೆಜ್ಜೆ ಹಾ ಮತ್ತು ಕೆಟ್ಟ ಸಂಪ್ರದಾಯಕ್ಕೆ ದಾರಿ ಮಾಡಿಕೊಟ್ಟ

ಭಾರತೀಯ ಜನತಾ ಪಕ್ಷ ಸಿಂಗ್‌ರವರ ಸರ್ಕಾ ಬೇಷರತ್ ಬೆಂಬಲ ಕೊಟ್ಟಿತ್ತು, ಆದರೆ ಅಯೋಧ್ಯೆ ರಾಮಜನ್ಮಭೂಮಿಗೆ ಸಂಬಂಧಿಸಿದಂತೆ ದೇಶಾದ್ಯಂತ ಯಾತ್ರೆಯನ್ನು ಕೈಗೊಂಡಿದ್ದ ಲಾಲ್ ಕಿಷನ್ ಅ ಯವರನ್ನು ಬಿಹಾರದ ಅಂದಿನ ಮುಖ್ಯಮಂತ್ರಿ ಲ ಪ್ರಸಾದ್ ಯಾದವರು ಬಂಧಿಸಿದಾಗ, ಬಿಜೆಪಿ ಪಕ್ಷ ಬೆಂಬಲವನ್ನು ಹಿಂತೆಗೆದುಕೊಂಡು ಸಿಂಗ್ ಅವರ ಸರ್ಕಾ ಪತನಕ್ಕೆ ನಾಂದಿ ಹಾಡಿತು. ಸಿಂಗ್ ಅವರು ಪ್ರ ಮಂತ್ರಿಗಳಾಗಿದ್ದಾಗ, ಹಿಂದುಳಿದ ಜನಾಂಗದ ಮೀಸಲಾತಿಯನ್ನು ಕಲ್ಪಿಸಿಕೊಡಲು ಶಿಫಾರಸ್ಸು ಮಾ ಮಂಡಲ್ ವರದಿಯನ್ನು ಅಂಗೀಕರಿಸಿದ್ದರು. ಈ ಕ್ರಮ ಕೇಂದ್ರ ಸರ್ಕಾರದ ಉದ್ಯೋಗದಲ್ಲಿ ಹಿಂದು ಜನಾಂಗದವರಿಗೆ ಶೇ. 27 ರಷ್ಟು ಮೀಸಲಾತಿ ದೊರ ಇದೊಂದು ಕ್ರಾಂತಿಕಾರಕ ನಿರ್ಣಯವಾಗಿತ್ತು. ಇದಕ್ಕಾಗಿ ಅವರನ್ನು ಜನ ಗೌರವಿಸಿದರು.

ಮನುಧರ್ಮಕ್ಕಿಂತ ಪ್ರವಾದಿ ಧರ್ಮಗಳೇ ಲೇಸು


ವಿಜಯ ಕರ್ನಾಟಕದ ಸಂಪಾದಕ ವಿಶ್ವೇಶ್ವರ ಭಟ್ಟ ಇತ್ತೀಚೆಗೆ ನಡೆಸಿದ 'ಸಂವಾದ'ದ ರಾಜ್ಯದ ಹಿರಿಯ ಲೇಖಕಿ ಸಾರಾ ಅಬೂಬಕ್ಕರ್, ಅವರ ಲೇಖನದ ಮೇ ಎರ್ರಾಬಿರ್ರಿ ಕತ್ತರಿ ಪ್ರಯೋಗಿಸಿದ್ದರು. ಕಾರಣ ಅಬೂಬಕ್ಕರ್ ಅವರು ಎತ್ತಿ ಹಲವಾರು ಪ್ರಶ್ನೆಗಳು ಚೆಡ್ಡಿಗಳಿಗೆ ಮುಜುಗರ ಉಂಟುಮಾಡುತ್ತವೆಂದು. ಸಾರಾ ಅವರ ಅದೇ ಲೇಖನವನ್ನು ಇಲ್ಲಿ ಸಂಪೂರ್ಣವಾಗಿ ಪ್ರಕಟಿಸುತ್ತಿದ್ದೇವೆ.

"ಇಂಥ ಘಟನೆ ಬೇರೆ ಯಾವ ದೇಶದಲ್ಲಿ ನಡೆದೀತು? ಎಂಬ ಭೈರಪ್ಪನವರ ಲೇಖನ ಹಾಗೂ ಅದಕ್ಕೆ ಹಲವರು ಬರೆದ ಪ್ರತಿಕ್ರಿಯೆಗಳನ್ನೂ ಓದಿದೆ. ಭೈರಪ್ಪನವರೊಡನೆ ನಾನೂ ಇದೇ ಪ್ರಶ್ನೆಯನ್ನು ಕೇಳುತ್ತೇನೆ: "ಗರ್ಭಿಣಿ ಹೆಣ್ಣಿನ ಹೊಟ್ಟೆ ಸೀಳಿ ಆ ಮಗುವನ್ನು ತ್ರಿಶೂಲದ ತುದಿಯಿಂದ ಚುಚ್ಚಿ ಎತ್ತಿ ಬೆಂಕಿಗೆಸೆದಂತಹ ಘಟನೆ ಬೇರೆ ಯಾವ ದೇಶದಲ್ಲಿ ನಡೆದಿದೆ? ಹಾಗೆಯೇ ಹಾಡುಹಗಲಲ್ಲೇ ನೂರಾರು ಜನರು ನೋಡುತ್ತಿದ್ದಂತೆಯೇ ಕ್ರೈಸ್ತ ಸನ್ಯಾಸಿನಿಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ ಘಟನೆ ಕೂಡಾ ಬೇರೆ ಯಾವ ದೇಶದಲ್ಲಿ ನಡೆದಿದೆ?"

ಕಾದಂಬರಿಕಾರ ಭೈರಪ್ಪನವರು ಒಳ್ಳೆಯ ಲೇಖಕರಾಗಿದ್ದರು. 'ವಂಶವೃಕ್ಷ', 'ಗೃಹಭಂಗ' ಮುಂತಾದ ಕಾದಂಬರಿಗಳನ್ನು ಬರೆದ ಈ ಲೇಖಕರ ಮನದಾಳದಲ್ಲಿ ಇಂತಹ ಕೊಳಚೆಗುಂಡಿಯೊಂದಿದೆ ಎಂಬುದರ ಅರಿವಾದಾಗ ನಾನು ಅವರ ಬಗ್ಗೆ ಇಟ್ಟುಕೊಂಡಿದ್ದ ಅಭಿಮಾನವೆಲ್ಲವೂ ಬಿರುಗಾಳಿಗೆ ಸಿಕ್ಕ ತರಗೆಲೆಯಂತೆ ಹಾರಿಹೋಯಿತು. ಓರ್ವ ಸಾಹಿತಿ ಎನಿಸಿಕೊಂಡವರೂ ಕೂಡಾ ಮಾನವೀಯತೆಯ ಲವಲೇಶವೂ ಇಲ್ಲದಂತಹ, ಜೀವ ವಿರೋಧಿಯಾದ ಲೇಖನವನ್ನು ಬರೆಯಲು ಸಾಧ್ಯ ಎಂಬುದು ಈ ದೇಶ ತಲುಪಿದ ಅಧೋಗತಿಯನ್ನು ಸೂಚಿಸುತ್ತಿದೆ."ಸೋನಿಯಾ ಗಾಂಧಿ ಪಟ್ಟಾಭಿಷೇಕದ ನಂತರ ಕ್ರಿಸ್ತೀಕರಣವು ಅಗಾಧ ಪ್ರಾಮಾಣಿಕೆ ಏರಿತು" ಎಂಬ ಒಂದೇ ವಾಕ್ಯ ಇವರು ಎಷ್ಟೊಂದು ಸುಳ್ಳುಗಳನ್ನು ಸತ್ಯದ ಮುಖಕ್ಕೆ ಹೊಡೆದಂತೆ ಹೇಳಬಲ್ಲರು ಎಂಬುದಕ್ಕೆ ಸಾಕ್ಷಿಯಾಗಿದೆ.

ಮರಳುಗಾಡಿನಲ್ಲಿ ಹುಟ್ಟಿದ ಪ್ರವಾದಿಗಳ ಧರ್ಮದ ಕುರಿತು ಭೈರಪ್ಪನವರು ಬಹಳ ವಿವರಣೆ ನೀಡುತ್ತಾರೆ. ಪ್ರವಾದಿ ಮತವು ಮೂಲತಃ ಮತಾಂಧವಾದುದೆಂದೂ, ಭಾರತದ ಧರ್ಮದ ವೇದದಲ್ಲಿ ಮತಾಂಧತೆ ಇಲ್ಲವೆಂದೂ ಸಾಬೀತುಪಡಿಸಲು ಮತ್ತು ಜನರನ್ನು ನಂಬಿಸಲು ಇವರು ಬಹಳ ಪ್ರಯತ್ನ ಪಟ್ಟಿದ್ದಾರೆ. ಆದರೆ ಈ ಧರ್ಮದಲ್ಲಿ ಮಾನವೀಯತೆ ಇದೆಯೇ? ಮನುಷ್ಯರ ತಲೆಯ ಮೇಲೆ ಮಲ ಹೊರಿಸುತ್ತಾ, ಅವರು ಎದುರಿಗೆ ಬಂದರೇನೇ ಅಪಶಕುನವೆನ್ನುತ್ತಾ, ಅವರನ್ನು ಅಸ್ಪೃಶ್ಯರಾಗಿಸಿ ಎಷ್ಟೆಷ್ಟು ರೀತಿಯಲ್ಲಿ ಆ ಮನುಷ್ಯರನ್ನು ಅಂದೂಇಂದೂ ಹಿಂಸಿಸುತ್ತಲೇ ಇದ್ದೀರಲ್ಲ? ನೀರೆಂಬುದು ಪ್ರಕೃತಿಯ ಕೊಡುಗೆ. ಜೀವಜಲ. ಆ ನೀರನ್ನೂ ನಿಮ್ಮದೆಂದುಕೊಂಡು ಇತರರಿಂದ ಕಸಿದುಕೊಳ್ಳುವ ನಿಮ್ಮ ದೌರ್ಜನ್ಯ ಕಮ್ಮಿಯದೇ? ಪತ್ರಿಕೆಯಲ್ಲಿ ಕಳೆದ ವಾರ ಬಂದ ವರದಿಯನ್ನು ಎಲ್ಲರೂ ಓದಿರಬಹುದು. ದಲಿತ ಹೆಣ್ಣುಮಗಳೊಬ್ಬಳು ಸರ್ಕಾರಿ ನಲ್ಲಿಯಿಂದ ನೀರೆತ್ತಿಕೊಂಡಳು. ಅದು ಸವರ್ಣೀಯರು ವಾಸಿಸುವ ಸ್ಥಳವಾದ ಕಾರಣ ಆಕೆ ನೀರೆತ್ತಿಕೊಂಡದ್ದಕ್ಕಾಗಿ ಆಕೆಯನ್ನು ಹಿಂಸಿಸಿ ಆಕೆಗೆ 101 ರೂ. ದಂಡ ವಿಧಿಸಿದರು. ಇದರಿಂದ ಅವಮಾನಿತಳಾದ ಆಕೆ ನೊಂದು ಆತ್ಮಹತ್ಯೆ ಮಾಡಿಕೊಂಡಳು. ದಲಿತ ಹೆಣ್ಣುಮಗಳು ಕಾಲೇಜಿಗೆ ಹೋಗಲು ಆರು ಮೀಟರ್ ನಡೆಯಬೇಕಾಗಿದ್ದ ಕಾರಣ ಆಕೆ ಸೈಕಲಿನಲ್ಲಿ ಹೋಗತೊಡಗಿದಳು. ದಲಿತ ಹುಡುಗಿಯೊಬ್ಬಳು ತಮ್ಮೆದುರಿಗೆ ಸೈಕಲ್ ತುಳಿಯುತ್ತಾ ಹೋಗುವುದು ಸವರ್ಣೀಯರಿಗೆ ಸಹನೆಯಾಗದೆ ಆಕೆ ಸೈಕಲ್ಲಿನಲ್ಲಿ ಹೋಗಬಾರದೆಂದು ಕಟ್ಟಪ್ಪಣೆ ವಿಧಿಸಿದರು. ಮರುದಿನದಿಂದ ಆಕೆ 6 ಕಿಲೋಮೀಟರ್ ನಡೆದುಕೊಂಡೇ ಕಾಲೇಜಿಗೆ ಹೋಗತೊಡಗಿದಳು. ದಲಿತ ಹುಡುಗನೊಬ್ಬ SSLC ಪಾಸಾದ ಕಾರಣಕ್ಕಾಗಿಯೇ ಆತನ ಕೊಲೆ ಮಾಡಲಾಗಿದೆ. ದಲಿತ ಹುಡುಗನೊಬ್ಬ ತನ್ನ ಮಗನಿಗಿಂತ ಅಧಿಕ ಅಂಕ ಪಡೆದ ಕಾರಣಕ್ಕಾಗಿಯೇ ಆತನ ತಂದೆ ದಲಿತರ ಮನೆಗೆ ಬಂದು ಆ ಮನೆಯ ಹದಿಹರೆಯದ ಹೆಣ್ಣುಮಗಳನ್ನು ಹೊರಗೆಳೆದು ಆಕೆಯ ಮೈಮೇಲೆ ಕೈ ಹಾಕಿ ಆಕೆಯನ್ನು ಅವಮಾನಿಸಿದನು. ಆಕೆಯ ತಾಯಿ ಬಂದು ಇನ್ನು ಮುಂದೆ ಆ ಯಜಮಾನನ ಮಗನಿಗಿಂತ ಅಧಿಕ ಅಂಕ ಪಡೆಯುವುದಿಲ್ಲವೆಂದು ಆತನ ಕ್ಷಮೆ ಕೇಳಿದ ಬಳಿಕ ಆ ಹುಡುಗಿಯನ್ನು ಬಿಟ್ಟರು. ಇಂಥ ಘಟನೆ ಬೇರೆ ಯಾವ ದೇಶದಲ್ಲಿ ನಡೆದೀತು ಭೈರಪ್ಪನವರೇ?

ಇದು ಒಂದು ವಿಧದ ದೌರ್ಜನ್ಯವಾದರೆ ಇನ್ನೊಂದು ವಿಧದಲ್ಲಿ ಮಹಿಳೆಯರ ಮೇಲೆ ಈ ಬ್ರಾಹ್ಮಣರು ನಡೆಸುತ್ತಿದ್ದ ದೌರ್ಜನ್ಯವನ್ನು ಎತ್ತಿ ಹೇಳಬೇಕಾಗಿದೆ. ಕಳೆದ 50 ವರ್ಷಗಳ ಹಿಂದೆ ಕೂಡಾ ಬಿಲ್ಲವರು, ಮೊಗವೀರರು, ದಲಿತರು ಬಿಡಿ ಕೊಂಚ ಮೇಲ್ವರ್ಗದವರೆನ್ನಿಸಿಕೊಂಡ ನಾಯರ್ ಹೆಣ್ಣುಮಕ್ಕಳಿಗೆ ಕೂಡಾ ಕೇರಳದಲ್ಲಿ ರವಿಕೆ ಧರಿಸುವ ಹಕ್ಕಿರಲಿಲ್ಲ. ಓಲೆ ಬೆಲ್ಲ ಮಾರುವ ಮಹಿಳೆಯರು, ಮೀನು ಮಾರುವ ಮಹಿಳೆಯರು ರವಿಕೆ ಧರಿಸದೆ ಕೇವಲ ಒಂದು ಬೈರಾಸನ್ನು ಕತ್ತು ಮತ್ತು ಕಂಕುಳಿಗೆ ಸೇರಿಸಿ ಕಟ್ಟಿಕೊಂಡು ಬರುತ್ತಿದ್ದುದನ್ನು ನಾನು ನೋಡಿದ್ದೇನೆ. ನಾಯರ್ ಮನೆಯಲ್ಲಿ ಸುಂದರಿಯರಾದ ಹೆಣ್ಣುಮಕ್ಕಳಿದ್ದರೆ ಅವರನ್ನು ನಂಬೂದಿರಿಗಳು ಇಷ್ಟಪಟ್ಟರೆ ಆ ಹೆಣ್ಣು ನಂಬೂದಿರಿಗಳಿಗೆ ಮೀಸಲು. ಆತನಿಗೆ ಅಧಿಕೃತ ಹೆಂಡತಿ, ಮಕ್ಕಳಿದ್ದರೂ ಈ ಅನಧಿಕೃತ ಹೆಂಡತಿಯರೂ ಇರುತ್ತಿದ್ದರು. ಈ ಮಹಿಳೆಯರು ಮಾಡಿದ ಅಡುಗೆಯನ್ನು ಇವರು ತಿನ್ನದಿದ್ದರೂ ಅವರ ದೇಹವನ್ನು ಧಾರಾಳವಾಗಿ ಉಪಯೋಗಿಸಿಕೊಳ್ಳುತ್ತಿದ್ದರು. ಅವರ ಆಸ್ತಿಯ ಹಕ್ಕು ಅಧಿಕೃತ ಹೆಂಡತಿ ಮಕ್ಕಳಿಗೆ ಮಾತ್ರ. ಈ ಅನಧಿಕೃತ ಹೆಂಡತಿ ಮಕ್ಕಳು ಆತನ ಮರಣಾನಂತರ ಬೀದಿ ಪಾಲಾಗುತ್ತಿದ್ದರು. ಮಲಯಾಳದ ಖ್ಯಾತ ಲೇಖಕ ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿ ಎಂ.ಟಿ. ವಾಸುದೇವನ್ ನಾಯರ್ ಈ ಕುರಿತು ಹಲವಾರು ಕತೆ, ಕಾದಂಬರಿಗಳನ್ನು ಬರೆದು ಕೆಲವು ಕತೆಗಳು ಸಿನಿಮಾ ಕೂಡಾ ಆಗಿವೆ.




ಈ ದೇಶಾದ್ಯಂತ ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯಕ್ಕೆ ಕೊನೆ ಇದೆಯೇ? ಖೈರ್ಲಾಂಜಿ, ಕಂಬಾಲ ಬಿಡಿ; ಸತ್ತ ದನಗಳ ಚರ್ಮ ಸುಲಿದರೆಂಬ ಕಾರಣ ಗಿಯೇ ನಾಲ್ಕೈದು ಜನ ದಲಿತರನ್ನು ಕೊಲೆ ಮಾ ಲ್ಲವೇ? ದಲಿತರ ಗುಡಿಸಲುಗಳನ್ನು ಸುಡುವು ಸಾಮೂಹಿಕ ಅತ್ಯಾಚಾರ ಮ ಕೊಲೆಯ ವರದಿಗಳು ವರದಿಯಾ ತ್ತಲೇ ಇರುತ್ತವೆ. ಮಹಿಳೆಯ ಹಿಂದುಳಿದವರು ಮತ್ತು ದಲಿ ಮೇಲೆ ಈ ರೀತಿಯ ದೌರ್ಜ ಶೋಷಣೆ ನಡೆಯುತ್ತಿದ್ದುದರಿಂದ ಕರಾವಳಿಗೆ ಬಂದ ಅರಬರು ಇಸ ಧರ್ಮದ ಕುರಿತು, ಕ್ರೈಸ್ತರು ಕ್ರ ಧರ್ಮದ ಕುರಿತು ಪ್ರಚಾರ ಮಾ ದಾಗ ಈ ಜನರು ತಮ್ಮ ಮೇ ಮೇಲ್ಜಾತಿಯವರು ನಡೆಸುತ್ತಿ ದೌರ್ಜನ್ಯ ಮತ್ತು ತುಳಿತದಿಂ ಹೊರಬರಲು ಕಂಡುಕೊಂಡ ದಾ ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳಿಗೆ ಮತಾಂತ ಗೊಳ್ಳುವುದು. 'ಈ ಜನರಿಗೆ ಕುಪ್ಪಸ ತೊಡ ಕಲಿಸಿದವರು ನಾವು' ಎಂದು ಕೇರಳದಲ್ಲಿ ಮುಸ್ಲಿಮ ಹೇಳಿಕೊಳ್ಳುವುದಿದೆ.

ಮರಳುಗಾಡಿನಲ್ಲಿ ಹುಟ್ಟಿದ ಪ್ರವಾದಿ ಧರ್ಮ ಎಂದು ತಿರಸ್ಕಾರದಿಂದ ಹೇಳುವ ಭೈರಪ್ಪನವರು ಧರ್ಮದ ತಿರುಳನ್ನು ಅರ್ಥಮಾಡಿಕೊಂಡಿದ್ದಾರೆಯೇ ಪ್ರವಾದಿ ಮುಹಮ್ಮದ್ ಅವರು ಎಂದೂ ಮನುಷ

ಬಳಿ ಜನತಾದಳ ಕೇಂದ್ರದಲ್ಲಿ ಸರ್ಕಾರ ಸ್ಥಾಪಿಸಿದ್ದರೂ ರ್ಣಾಟಕದಲ್ಲಿ ಸೋತಿತ್ತು. ಇದಾದ ಸ್ವಲ್ಪವೇ ದಿನಗಳಲ್ಲಿ ಪಕ್ಷ ಸೋತಿದ್ದಕ್ಕೆ ಕಾರಣವೇನೆಂದು ಆತ್ಮಾವಲೋಕನ ಳ್ಳುವ ಸಭೆಯನ್ನು ನಾನು ಹಂಪಿಯಲ್ಲಿ ಸಂಘಟಿಸಿದೆ. ಜಾರ್ಜ್ ಫರ್ನಾಂಡಿಸ್, ಮಧು ದಂಡವತೆ, 'ಜನತಾ' ಮುಂಚೂಣಿಯ ಪಟೇಲ್, ಪಾಸ್ವಾನ್, ರಾಮಕೃಷ್ಣ ಹೆಗಡೆ, ಯ ಮೊದಲಾದ ಎಲ್ಲಾ ನಾಯಕರು ಈ ಎರಡು ಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಆಗ ನಡೆದ ನಿರ್ಣಯಗಳು ರಾಜ್ಯದ ರಾಜಕೀಯ ಇತಿಹಾಸದಲ್ಲಿ ಒಂದು ಲ್ಲು. ಕೊನೆಯದಿನ ನಾಯಕರ ಬಹಿರಂಗ ಸಭೆಯನ್ನು ಟೆಯಲ್ಲಿ ಏರ್ಪಡಿಸಲಾಗಿತ್ತು. ಸಿಂಗ್ ಅವರ ಭಾಷಣವನ್ನು ನಾನು ಕನ್ನಡಕ್ಕೆ ತರ್ಜುಮೆ . ಅವರು ಅಂದು ಹೇಳಿದ ಕಥೆ ಬಹು ಕವಾಗಿತ್ತು:

ಊರಿನಲ್ಲಿ ಇಬ್ಬರು ಅಣ್ಣತಮ್ಮಂದಿರಿದ್ದರು. ಬುದ್ಧಿವಂತ, ತಮ್ಮ ತುಸು ದಡ್ಡ. ಅವರ ಆಸ್ತಿ ಪಾಲಾದಾಗ ಒಂದು ಎಮ್ಮೆಯನ್ನು ಹಳ್ಳುವ ಬಗ್ಗೆ ವಿವಾದ ಉಂಟಾಯಿತು. "ತಮ್ಮ ಎಷ್ಟೆಂದರೂ ವಯಸ್ಸಿನಲ್ಲಿ ಆದ್ದರಿಂದ ಆತ ಎಮ್ಮೆಯ ಮುಂದಿನ ಗೆದುಕೊಳ್ಳಲಿ, ನಾನು ಹಿಂದಿನ ಭಾಗ ಳ್ಳುತ್ತೇನೆ" ಎಂದು ಹೇಳಿದ. ಇದನ್ನು ಮ್ಮ ಹಿಗ್ಗಿಹೋದ. ಪ್ರತಿ ದಿನ ಎಮ್ಮೆಗೆ ಹುಲ್ಲು, ಮೇವು, ಕಲಗಚ್ಚು ಹಾಕಿ . ಹಾಗೆಯೇ ಅಣ್ಣ ಪ್ರತಿ ದಿನ ಹಾಲನ್ನು ಹಿಂಡಿಕೊಂಡು ಪಡುತ್ತಿದ್ದ. ಒಂದು ದಿನ ಇದರ ಕರಾಮತ್ತನ್ನು ಅರಿತ ಕೋಲಿನಿಂದ ಎಮ್ಮೆಯ ಮೂತಿಗೆ ಹೊಡೆದಾಗ, ಹಾಲು ದ್ದ ಅಣ್ಣನನ್ನು ಎಮ್ಮೆ ಜಾಡಿಸಿ ಒದೆಯಿತು."

ಮು ನೀತಿ ಪಾಠ ಇಷ್ಟೇ: ಬರೀ ಬುದ್ಧಿವಂತಿಕೆಯಿಂದ ದುಡಿಮೆಯ ಮೇಲೆ ಬದುಕ ಕೂಡದು. ಈಗ ಧವರು ಜಾಗೃತರಾಗಿದ್ದಾರೆ. ಶಿಕ್ಷಣ ಮತ್ತು ಗಗಳಲ್ಲಿ ಅವರ ನ್ಯಾಯಯುತ ಪಾಲನ್ನು ಅವರಿಗೆ ಕು. ಸಾಮಾಜಿಕ ವಲಯದಲ್ಲಿ ಮತ್ತು ರಾಜಕೀಯ ಹಿಂದುಳಿದವರಿಗೆ ಅವಕಾಶ ಕಲ್ಪಿಸಿಕೊಟ್ಟು ಅವರನ್ನು ಬೇಕು.


ವಿ.ಪಿ.ಸಿಂಗ್

ಇದನ್ನೆ ಸಿಂಗ್ ಅವರು ಕತೆಯ ಮೂಲಕ ಮಾರ್ಮಿಕವಾಗಿ ಹೇಳಿದಾಗ ಜನಸ್ತೋಮ ಕೇಕೆ ಹಾಕಿ ಚಪ್ಪಾಳೆ ತಟ್ಟಿತ್ತು.

ಸಿಂಗ್ ಅವರು ಅಧಿಕಾರ ಕಳೆದುಕೊಂಡ ನಂತರ ಏಕಾಂಗಿಯಾದರು. ಆರೋಗ್ಯವೂ ಕೈಕೊಟ್ಟಿತು. ಮೂತ್ರಪಿಂಡಗಳು ಕೆಲಸ ಮಾಡದೆ ನಿಷ್ಕ್ರಿಯಗೊಂಡವು. ವಾರದಲ್ಲಿ ಎರಡು, ಮೂರು ಬಾರಿ ಡೈಯಾಲಿಸಿಸ್‌ನ ಮರೆಹೋಗಬೇಕಾಗಿತ್ತು, ಅಂತಹ ಸ್ಥಿತಿಯಲ್ಲೂ ಸಹ ಅವರು ಬಣ್ಣದ ವೈಚಿತ್ರಗಳಿಗೆ ಮರುಳಾಗಿ ಉತ್ತಮ ಪೇಂಟರ್ ಆಗಿ ಹೊಮ್ಮಿದರು. ದೇಶದ ಅನೇಕ ಸಮಸ್ಯೆಗಳ ಬಗ್ಗೆ ಪ್ರತಿಕ್ರಿಯಿಸುತ್ತಿದ್ದರು, ಕೋರಿದವರಿಗೆ ಮಾರ್ಗದರ್ಶನ ಮಾಡುತ್ತಿದ್ದರು. ಒಂದು ರೀತಿಯಲ್ಲಿ ಅವರು ದುರಂತ ನಾಯಕರಾಗಿದ್ದರು.


96ರಲ್ಲಿ ಮತ್ತೆ ಕೇಂದ್ರದಲ್ಲಿ ತೃತೀಯ ರಂಗ ಅಧಿಕಾರಕ್ಕೆ ಬಂದಾಗ ರಾಮಕೃಷ್ಣ ಹೆಗಡೆಯವರನ್ನು ಪ್ರಧಾನಮಂತ್ರಿಗಳನ್ನಾಗಿ ಮಾಡಿ ಎಂದು ಕೇಳಲು ನಾನು ಹಾಗು ಆರ್.ವಿ. ದೇಶಪಾಂಡೆಯವರು ಸಿಂಗ್ ಅವರ ಹತ್ತಿರ ಹೋದಾಗ ಅವರು "ಬಹಳ ಜನ ಅನುಮೋದಕರಿದ್ದಾರೆ, ಆದರೆ ಸೂಚಕರಿಲ್ಲ" (**There are any number of seconders, but not a single proposer**) ಎಂದು ತಮಾಷೆ ಮಾಡಿದ್ದರು. ಆದರೆ ಅಂದು ಪ್ರಧಾನ ಮಂತ್ರಿಗಳ ಆಯ್ಕೆ ಬಗ್ಗೆ ತೆರೆಮರೆಯ ಹಿಂದೆ ನಡೆಯುತ್ತಿದ್ದ ಪ್ರಕ್ರಿಯೆಗಳ ಬಗ್ಗೆ ಗೊತ್ತಿಲ್ಲದಿದ್ದ ನಾನು ವಿ.ಪಿ.ಸಿಂಗ್ ಅವರ ಮಾತನ್ನು ಅಂದು ನಮ್ಮ ಮತ್ತೊಬ್ಬ ನಾಯಕರಾಗಿದ್ದ ಎಚ್.ಡಿ. ದೇವೇಗೌಡರ ಗಮನಕ್ಕೆ ತಂದೆ. ಅದನ್ನು ಕೇಳಿ ಅವರು ಮುಗುಳ್ನಕ್ಕಿದ್ದರು. ಆನಂತರ ದೇವೇಗೌಡರು ಹೆಗಡೆಯವರನ್ನೇ ಪಕ್ಷದಿಂದ ಹೊರಹಾಕಿದ್ದು ಎಲ್ಲರಿಗೂ ಗೊತ್ತಿರುವ ವಿಚಾರ.

ಹೀಗೆ ಹತ್ತು ಹಲವು ಏಳುಬೀಳನ್ನು ಕಂಡಿದ್ದ ವಿ.ಪಿ.ಸಿಂಗ್ ಅವರು ಈಗ ಅಂತಿಮವಾಗಿ ನಮ್ಮನ್ನು ಅಗಲಿ ಹೋಗಿದ್ದಾರೆ. ಈ ದೇಶ ಕಂಡ ಅಪರೂಪದ, ಜನಪರ ಕಾಳಜಿಯ ನಾಯಕ ವಿ.ಪಿ. ಸಿಂಗ್ ಬಾಂದಳದಿಂದ ಕಳಚಿಬಿದ್ದ ನಕ್ಷತ್ರ ಎಂದರೆ ತಪ್ಪಾಗಲಾರದು. ■

ಕುವೆಂಪುವನ್ನು ಅಪಹರಿಸಿದ 'ವಕ್ತಾರ'

"ಮತಾಂತರದಂತಹ ಸೂಕ್ಷ್ಮ-ಗಂಭೀರ ವಿಷಯಗಳು ರಾಷ್ಟ್ರದ ಸಾಮರಸ್ಯ ಹಾಗೂ ಏಕತೆಗೆ ಭಂಗ ತರುವ ಹಿನ್ನೆಲೆಯಲ್ಲಿ ಆರೋಗ್ಯಕರ(?) ಚರ್ಚೆಯ ಉದ್ದೇಶದಿಂದ ಈ ಕುರಿತಾದ ಪರ-ವಿರೋಧ ಪ್ರತಿಕ್ರಿಯೆಗಳಿಗೆಲ್ಲ ಮುಕ್ತ ಸ್ವಾಗತ ಹಾಗೂ ಈ ಸಂಪಾದಕೀ, ವಿ.ಕ. ಒಂದು ವೇದಿಕೆಯೇ ಹೊರತು ವಕ್ತಾರನಲ್ಲ" ಎಂದು ಹೇಳಿಕೊಂಡು ಆರಂಭಿಸಿದ ವಿಕದ ಮತಾಂತರ ಚರ್ಚೆ ಎಷ್ಟರಮಟ್ಟಿಗೆ ದೇಶದ ಏಕತೆ-ಸಾಮರಸ್ಯಗಳ ಬೆಸುಗೆಗೆ ಸ್ಪಂದಿಸಿದೆಯೋ, ಇಲ್ಲಾ ಈ ಮೂಲಕ ಇನ್ನಷ್ಟು ಹುಳಿ ಹಿಂಡಿ ಇದ್ದ ಸಾಮರಸ್ಯವನ್ನು ಮತ್ತಷ್ಟು ಹದಗೆಡಿಸಿದೆಯೋ ಅದನ್ನ ಗಮನಿಸಿದವರಿಗೆ ಹೊಸದಾಗಿ ಹೇಳಬೇಕಾದದ್ದೇನಿಲ್ಲ, ಯಾಕೆಂದರೆ, ತಾನು ಹೇಳಿಕೊಂಡಂತೆ ಇದರ ತಟಸ್ಥ 'ವಕ್ತಾರಗಿರಿ' ಎಷ್ಟರಮಟ್ಟಿಗೆ ನಿಜವೆಂಬುದನ್ನು ದಿ. 11.11.08ರ ವಿ.ಕ.ದಲ್ಲಿ ಪ್ರಕಟವಾದ ತಾರಿಣಿಯವರ ಪತ್ರದಿಂದಲೇ ವ್ಯಕ್ತವಾಗುತ್ತದೆ.

ಸುಳ್ಳನ್ನೇ ಧಾಳಾಗಿ ಬಿಂಬಿಸುತ್ತಾ ನೈಜ ಸಂಗತಿಯನ್ನು ಜನಮಾನಸದಿಂದ ಮರೆಸುವ ತಂತ್ರಗಾರಿಕೆಗೆ ಈ ಮತಾಂತರವೂ ಇಲ್ಲಿ ಒಳಪಟ್ಟಿದೆ. ಯಾಕೆಂದರೆ, ಕೆಲ **noted** ದಲಿತಪರ ಚಿಂತಕರನ್ನು ಹೊರತುಪಡಿಸಿದರೆ ಹೆಚ್ಚಿನ ಮಹತ್ವ ಸಿಕ್ಕಿದ್ದು ಇದೇ ಭೈರಪ್ಪನ ಅಣ್ಣನೋ ತಮ್ಮನೋ ಇರುವಂಥವರಿಗೆ ಮಾತ್ರ. ಆದರೆ ಇವೆಲ್ಲಕ್ಕಿಂತ ದಂಗುಬಡಿಸುವ ಸಂಗತಿಯೆಂದರೆ ಕುವೆಂಪುರವರ ಪುತ್ರ ತಾರಿಣಿಯವರು ಬರೆದೇ ಇಲ್ಲದ ಪತ್ರವನ್ನು ಭೈರಪ್ಪನ ಮನೆಹಾಳ ನಿಲುವನ್ನು ಕುವೆಂಪು ಸಹ ಸಮರ್ಥಿಸುತ್ತಾರೆ ಎಂಬಂತೆ ಕಾಣಲು ತಾರಿಣಿಯವರ ಗಮನಕ್ಕೂ ತಾರದೇ ಸಂವಾದದಲ್ಲಿ ಪ್ರಕಟಿಸಿದ್ದು. ಖ್ಯಾತರಾದ ಹಾಗು ಕೆಳವರ್ಗದಿಂದ ಬಂದಿರುವ ಅಬ್ರಾಹ್ಮಣ ಕುವೆಂಪುರವರ ಮುದ್ರೆಯೂ ಭೈರಪ್ಪನ ಲೇಖನಕ್ಕೆ ದೊರೆತರೆ ಅದಕ್ಕೊಂದು ಬೆಲೆ ಎಂಬುದು ಇದರ ಹಿಂದಿನ ಹುನ್ನಾರ. ಅದೇ ರೀತಿ ಭೈರಪ್ಪನನ್ನು ಬೆಂಬಲಿಸಿ ಕೆಳವರ್ಗದವರ ಹೆಸರಲ್ಲಿ ಬಂದ ಪತ್ರಗಳನ್ನು ಬ್ರಾಹ್ಮಣ ವಟುಗಳೇ ಬರೆದಿದ್ದರು ಎಂಬ ವದಂತಿಗಳೂ ಇವೆ.



ಢಂಬಾಚಾರವನ್ನು ಯಾರೇ ಮಾಡುತ್ತಿರಲಿ, ಅದನ್ನ ಕಟುವಾಗಿ ವಿರೋಧಿಸುತ್ತಿದ್ದ ಕುವೆಂಪು ಹಿಂದೂ ಮಠಾಧಿಪತಿಗಳು, ಜಗದ್ಗುರುಗಳನ್ನು ದೊಡ್ಡದಾಗಿ ಬಿಂಬಿಸುತ್ತಿದ್ದ ಪತ್ರಿಕೆಗಳನ್ನು ನೋಡಿದರೆ ಉರಿದುಬೀಳುತ್ತಿದ್ದರಂತೆ. ತೇಜಸ್ವಿಯವರು ಹೇಳುವಂತೆ ಪಾಪ! ಅಂತಹ ಪತ್ರಿಕೆಯನ್ನು ತಂದ ಪತ್ರಿಕೆ ಹುಡುಗನನ್ನೇ ಚೆನ್ನಾಗಿ ಬೈದು ಆ ಮೂಲಕ ತಮ್ಮ ಸಿಟ್ಟನ್ನು ಅವರು ತೀರಿಸಿಕೊಳ್ಳುತ್ತಿದ್ದರಂತೆ. ನ. 11ರ ವಿಕದ ಮುಖಪುಟದಲ್ಲಿ ಸಣ್ಣದಾಗಿ 'ಮತಾಂತರ ಒಂದು ಸಂವಾದ-ಪಾದ್ರಿ ಮತ್ತು ಕುವೆಂಪು ತಾರಿಣಿ ಚಿದಾನಂದ ಅವರ ಲೇಖನ ಪುಟ 7' ಎಂದು ಮುದ್ರಿಸಿ ಆ ಲೇಖನವನ್ನು ಸ್ವತಃ ತಾರಿಣಿಯವರೇ ಪತ್ರಿಕೆಗೆ ಬರೆದುಕಳಿಸಿದಂತೆ ಹೈಲೈಟ್ ಮಾಡಲಾಗಿತ್ತು. ಆದರೆ ಇದನ್ನು ಕುರಿತು 'ಲಂಕೇಶ್'ನಲ್ಲಿ ಓದಿದ ನಂತರವೇ ಇದು ಸಂಪಾದಕ ಮಹಾಶಯನ ಜಾಣ್ಮೆಯ ತಂತ್ರಗಾರಿಕೆ (ಕುವೆಂಪು ಶಿಷ್ಯರನ್ನ ಬಾಯ್ಮುಚ್ಚಿಸುವ ತಂತ್ರಗಾರಿಕೆ) ಎಂದು ಗೊತ್ತಾಗಿದ್ದು. ಕೊನೇ ಪಕ್ಷ ತಾರಿಣಿಯವರ ಪುಸ್ತಕದಿಂದ ಆರಿಸಿಕೊಂಡದ್ದು ಎಂದು ಸೂಚಿಸುವ ಗೋಜಿಗೂ ಕೂಡ ಈ 'ಸತ್ಯದ ಮೇಲೆ ಬೆಳಕು ಚೆಲ್ಲಲು ಹೊರಟ ವಕ್ತಾರ' ಹೋಗಲೇ ಇಲ್ಲ.

ಒಂದು ಪತ್ರ

ಕಾರ್ಲ್‌ಮಾರ್ಕ್ಸ್ ಹೇಳಿದ 'ಧರ್ಮ ಅಫೀಮಿನಂತೆ' ಎಂಬುದು ಕುವೆಂಪುವಿಗೂ ತಿಳಿದಿತ್ತು. ಬೇಕಿದ್ದವರಿಗೆ ಸಾಮಾಜಿಕ ಬದುಕಿನಲ್ಲಿ ಸ್ವಲ್ಪ ಮೆರುಗನ್ನು ನೀಡಲು ಸಹಾಯವಾಗಬೇಕಿದ್ದ ಈ ಧರ್ಮ ಕಂದಾಚಾರಿಗಳ ದೆಸೆಯಿಂದ ತಿರುವು ಮುರುವು ಆಗುತ್ತಿರುವುದರ ಬಗ್ಗೆ ಅವರಿಗೆ ವಿಷಾದವಿತ್ತು. ಇವತ್ತು ಒಂದು ರೀತಿಯಲ್ಲಿ ಊಟದ ಜತೆ ನಂಜಿಕೊಳ್ಳಲು ಇರಬೇಕಿದ್ದ ಉಪ್ಪಿನಕಾಯಿಯೇ ಊಟ ಆಗಲು ಹೊರಟಂತಿದೆ. ಅಂದರೆ ತಿಂದಾತ ಆಸ್ಪತ್ರೆ ಸೇರ ಬೇಕಾದೀತಷ್ಟೇ. ಇದನ್ನೇ ಇಲ್ಲಿ ಭೈರಪ್ಪ, ಚಿ.ಮೂ.ಸಂಘ ಮನಸ್ಸುಗಳು ಮಾಡಹೊರಟವೆ ಅಷ್ಟೆ.

ತಮ್ಮ ಸಂಸ್ಕೃತಿ-ಧರ್ಮದ ಬಗ್ಗೆ ಚಟ್ಟು ಹಿಡಿಯುವಷ್ಟು ಕೊರೆವ ಈ ಭೈರಪ್ಪ,ಚಿಮೂ, ನವರತ್ನರಾಂ, ಗಣೇಶ ಮುಂತಾದ **so called** ಧರ್ಮ ಸಂರಕ್ಷಕರ ಮಕ್ಕಳು, ಹೆಣ್ಮಕ್ಕಳು, ಖಾಸಾ ಸಂಬಂಧಿಕರು ಎಷ್ಟರಮಟ್ಟಿಗಿನ ಸಂಸ್ಕೃತಿ ಕಾಪಾಡುತ್ತಿದ್ದಾರೆ, ಪಾಲಿಸುತ್ತಿದ್ದಾರೆಂಬುದು ಅಭ್ಯಸಿಸಲು ಯೋಗ್ಯ. ತಮಾಷೆಯೆಂದರೆ ಇಲ್ಲಿ ಕ್ರಿಶ್ಚಿಯನ್ ಧರ್ಮವನ್ನ ಹೀಯಾಳಿಸಿದ ಜನವರ್ಗದ ಮಂದಿಯೇ ಅಂದರೆ ಈ ಭೈರಪ್ಪನ ಬ್ರಾಹ್ಮಣ ಮಂದಿಯೇ ಅತೀಹೆಚ್ಚು ಸಂಖ್ಯೆಯಲ್ಲಿ ಇದೇ 'ಕೆಟ್ಟ ಕ್ರಿಶ್ಚಿಯನ್' ಮಂದಿ ಇರುವ ದೇಶಗಳಾದ ಅಮೆರಿಕ, ಯೂರೋಪ್, ಆಸ್ಟ್ರೇಲಿಯಾ ದೇಶಗಳತ್ತ ಹಾರಿ ನೆಲೆ ನಿಂತಿವೆ. ಅದೇನೋ ಹೇಳ್ತಾರಲ್ಲ: ವೇದಾಂತ ಹೇಳ್ಳಿಕ್ಕೆ ಬದನೆಕಾಯಿ ತಿನ್ನಿಕ್ಕೆ ಅಂತ. ಹಾಗಿದೆ ಈ ವಕ್ತಾರರ ಕತೆ.

-ಶಿ. ಪುತ್ತೂರು, ದ.ಕ

ಹಂದಕ ತೋಡಲಿಲ್ಲ; ಎಂದೂ ತಾರತಮ್ಯ ಮಾಡಲಿಲ್ಲ. ನ್ನ ಕೋಣೆಯಲ್ಲಿಟ್ಟು ಬೀಗ ಹಾಕಿ 'ದೇವರು ನನ್ನವನು' ವಾದಿಸಲಿಲ್ಲ. ಸಹೋದರತೆಯೇ ಈ ಧರ್ಮದ ಜೀವಾಳ. ಬಂದವನು ಮಸೀದಿಯ ಮೊದಲ ಸಾಲಿನಲ್ಲೇ ನೆ. ಆಗರ್ಭ ಶ್ರೀಮಂತೆಯಾದ ಕತೀಜಾರನ್ನು ಮದುವೆ ಅವರನ್ನು ಆ ಧನಕನಕಗಳಿಂದ ದೂರ ಸರಿಸಿ, ತಮ್ಮ ನ್ನು ತಾವೇ ಮಾಡಿಕೊಳ್ಳುವಂತೆ, ಸರಳ ಬದುಕನ್ನು ಡಿಸಿಕೊಳ್ಳುವಂತೆ ಮಾಡಿದ್ದಾರೆ. ನಾನೇ ದೇವರು ಎಂದು ದೂ ಹೇಳಲಿಲ್ಲ. ನಾನೂ ನಿಮ್ಮಂತೆಯೇ ಸಾಮಾನ್ಯ ಎಂದೇ ಅವರು ವಾದಿಸುತ್ತಿದ್ದರು. ಅವರು ಜನರ ಭಾವವನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದರು. ರದ ಮರದ ಕೆಳಗೆ ಕುಳಿತು ಧರ್ಮ ಬೋಧನೆ ಅಲ್ಲಿಂದ ಹೋಗುವಾಗ ಆ ಮರವನ್ನೇ ಕಡಿದು ದ್ದರು. ತಾನು ಇಲ್ಲಿ ಕುಳಿತ ಕಾರಣ ನಾಳೆ ಜನರು ಈ ಪೂಜಿಸಬಹುದೆಂಬ ಆತಂಕ ಅವರನ್ನು ಕಾಡುತ್ತಿತ್ತು. ಮರಣ ಶಯ್ಯೆಯಲ್ಲಿದ್ದ ಸಂದರ್ಭದಲ್ಲಿ ಜನರು ಅವರ ದು, "ನಿಮ್ಮ ಬಳಿಕ ನಮ್ಮ ನಾಯಕರು ಯಾರಾಗ " ಎಂದು ಕೇಳಿದಾಗ ಅವರ ಉತ್ತರ ಹೀಗಿತ್ತು: "ಅದನ್ನು ವನು ನಾನಲ್ಲ. ನಿಮಗೆ ಬೇಕಾದವರನ್ನು, ನಿಮಗೆ ದರ್ಶನ ನೀಡಲು ಶಕ್ತಿ ಇರುವವರನ್ನು ನೀವೇ ಆಯ್ಕೆ ಳ್ಳಬೇಕು." ಆ ಕಾಲದಲ್ಲಿಯೇ ಪ್ರಜಾಸತ್ತೆಗೆ ಅವರು ಮುಖ್ಯತೆ ನೀಡಿದ್ದರು. ಇಷ್ಟಕ್ಕೂ ಅವರು ವಾದಿಸಿದ್ದೇನು? ರವಾದ ಮಹಾ ಶಕ್ತಿಯಾದ ಏಕದೇವನಲ್ಲಿ ಮತ್ತು ತೀರ್ಮಾನದ ದಿನದಲ್ಲಿ ವಿಶ್ವಾಸವಿಡಿ" ಎಂದು. ಈ ಲ್ಲಿ ಓರ್ವನು ವಿಶ್ವಾಸವಿಟ್ಟರೆ ಆತನು ಮುಸ್ಲಿಮನಲ್ಲ ಯಾರಿಗೂ ಅಧಿಕಾರವಿಲ್ಲ ಎಂದೂ ಕೂಡಾ ಅವರು ದ್ದರು. ಮನುವಿನಂತೆ ಸಂಸ್ಕೃತ ಕೇಳಿದವನ ಕಿವಿಗೆ ಸೀಸ ಹೊಯ್ಯಿರಿ; ವೇದ ವಾಕ್ಯ ಉಚ್ಚರಿಸಿದವನ ನಾಲಗೆ ಎಂದೂ ಬ್ರಾಹ್ಮಣನಿಗೆ ಕೊಂದರೆ ಕೊಟ್ಟವನನ್ನು ಜೆಂದೂ ಹೇಳಿಲ್ಲವಲ್ಲ? ಮರಳುಗಾಡಿನಲ್ಲಿ ಹುಟ್ಟಿದ ಗಳಿಗೆ ಮಾನವೀಯತೆ ಎಂದರೆ ಏನೆಂದು ಚೆನ್ನಾಗಿ

ದಿ ಧರ್ಮ ಮೂಲತಃ ಮತಾಂಧವಾದದ್ದು, ವೇದ ಉಪನಿಷತ್ತುಗಳ ಋಷಿಗಳಾರೂ ಪ್ರವಾದಿಗಳಲ್ಲ, ಅಲ್ಲಿ ಲ್ಲ ಎಂಬುದು ಭೈರಪ್ಪನವರ ವಾದ. ಮರಳುಗಾಡಿನಲ್ಲಿ ಧರ್ಮ 'ಬೇಟೆಗಾರ ಮತಗಳು' ಎಂಬ ಹೊಸ ಕೊಟ್ಟಿದ್ದಾರೆ. ಅವುಗಳು ಅಮಾನವೀಯವಾಗಿ ಲಕ್ಷ ಕೊಂದು ಹೆಂಗಸರು ಮತ್ತು ಮಕ್ಕಳನ್ನು ಅತ್ಯಾಚಾರ ವಾಗಿ ಎಳೆದುಕೊಳ್ಳುವರು ಎಂದೂ ಹೇಳುತ್ತಾರೆ

ಭೈರಪ್ಪ, ಆದರೆ ಅತ್ಯುತ್ತಮ ಸನಾತನ ಧರ್ಮಾನುಯಾಯಿಗಳು ಅಹಿಂಸಾವಾದಿಗಳು ಗುಜರಾತ್ ಮತ್ತು ಒರಿಸ್ಸಾದಲ್ಲಿ ಮಾಡಿದ್ದೇನು? ಹೈದರಾಬಾದಿನಲ್ಲಿ ದೇಶ ವಿಭಜನೆಯ ಸಂದರ್ಭದಲ್ಲಿ ಹೈದರಾಬಾದಿನ ನಿಜಾಮನ ಆಡಳಿತದಲ್ಲಿದ್ದ ಬಿಜಾಪುರದಲ್ಲಿ ಐವತ್ತು ಸಾವಿರ ಮುಸ್ಲಿಮರನ್ನು ಕೊಂದ ದಾಖಲೆಯನ್ನು ಕಂದಾಯ ಅಧಿಕಾರಿಯ ಕಡತಗಳಲ್ಲಿ ರಹಸ್ಯವಾಗಿಡಲಾಗಿದೆಯೆನ್ನಲಾಗಿದೆ. ಒರಿಸ್ಸಾದಲ್ಲಿ ಗ್ರಹಾಂ ಸ್ಟೇನ್ಸ್ ಮತ್ತು ಅವರ ಚಿಕ್ಕ ಪ್ರಾಯದ ಮಕ್ಕಳನ್ನು ಜೀಪಿಗೆ ಬೆಂಕಿ ಹಚ್ಚಿ ದಹಿಸಿದ್ದು ಎಲ್ಲವೂ ಮಾನವೀಯತೆಯ ಪ್ರತೀಕವೆಂದು ಭೈರಪ್ಪನವರೆನ್ನುತ್ತಾರೆಯೇ? ಬೇಟೆಗಾರ ಮತಗಳು ತಮ್ಮ ಮತಗಳನ್ನು ರಿಲಿಜನ್ ಎನ್ನುತ್ತವೆ; ವೈದಿಕರು, ಜೈನರು ಮತ್ತು ಬೌದ್ಧರು ಧರ್ಮ ಎಂಬ ಶಬ್ದವನ್ನು ಬಳಸುತ್ತಾರೆ ಎನ್ನುತ್ತಾರೆ ಇವರು. ಆದರೆ ಶಬ್ದಕೋಶಗಳಲ್ಲಿ ರಿಲಿಜನ್ ಎಂದರೆ ಧರ್ಮವೆಂದೇ ಅರ್ಥ ನೀಡಲಾಗಿದೆಯಲ್ಲಾ ಭೈರಪ್ಪನವರೇ?

ಮರಳುಗಾಡಿನಲ್ಲಿ ಹುಟ್ಟಿದ ಧರ್ಮ ಒಬ್ಬೊಬ್ಬನಿಂದಲೇ ಹುಟ್ಟಿದೆ ಎಂಬುದು ಭೈರಪ್ಪನವರ ಇನ್ನೊಂದು ಆರೋಪ. ಭಾರತದಲ್ಲಿ ಹುಟ್ಟಿದ ಎಲ್ಲ ಧರ್ಮಗಳೂ (ವೈದಿಕ ಧರ್ಮವನ್ನು ಹೊರತುಪಡಿಸಿ) ಒಬ್ಬೊಬ್ಬ ಸಂತನಿಂದಲೇ ಹುಟ್ಟಿಕೊಂಡ ಮತಗಳಾಗಿಲ್ಲವೇ? ಬುದ್ಧ, ಮಹಾವೀರ, ಬಸವಣ್ಣ, ಗುರುನಾನಕ್ ಇವರೆಲ್ಲರೂ ತಮ್ಮ ಸುತ್ತಮುತ್ತಲೂ ನಡೆಯುತ್ತಿದ್ದ ಹಿಂಸೆ, ಅನ್ಯಾಯ, ಅಧರ್ಮಗಳನ್ನು ಕಂಡು ಜನರನ್ನು ಅಂತಹ ದುಷ್ಕೃತನಗಳಿಂದ ಹೊರತರಲು ಹೊಸ ರೀತಿಯ ಬೋಧನೆ ಮಾಡುವುದು ಅಂದಿನ ಅಗತ್ಯವಾಗಿತ್ತು. ಅದನ್ನೇ ಮರಳುಗಾಡಿನಲ್ಲಿ ಹುಟ್ಟಿದ ಸಂತರೂ ಮಾಡಿದ್ದಾರೆ. ಈ ಸಂತರುಗಳಿಗೆ ಜ್ಞಾನೋದಯವಾದಂತೆ ಮರಳುಗಾಡಿನ ಸಂತರಿಗೂ ಜ್ಞಾನೋದಯವಾಗಿದೆ, ಅಂದಿನ ಸಂದರ್ಭಗಳಲ್ಲಿ ತಮ್ಮ ಸುತ್ತಲೂ ಅನಾಚಾರದಲ್ಲಿ ಮುಳುಗಿದ್ದ ಜನರನ್ನು ಸರಿದಾರಿಗೆ ತರುವ ಕೆಲಸದಲ್ಲಿ ಈ ಸಂತರೆಲ್ಲರೂ ಮುಳುಗಿದ್ದರು.

ಯಾವ ಮತ ಧರ್ಮಗಳೂ ಧರ್ಮದ ಹೆಸರಿನಲ್ಲಿ ಮನುಷ್ಯರ ನಡುವೆ ಕಂದಕ ತೋಡಲಿಲ್ಲ ಎಂಬುದನ್ನು ಭೈರಪ್ಪನವರು ಮನವರಿಕೆ ಮಾಡಿಕೊಳ್ಳಬೇಕು.

ತಮ್ಮ ನಂಬಿಕೆಯೇ ಶ್ರೇಷ್ಠವೆಂಬ ವಿಶ್ವಾಸ ಎಲ್ಲರಲ್ಲೂ ಇದೆ. ಆದರೆ ಅದಕ್ಕಾಗಿ ಇನ್ನಿತರರ ನಂಬಿಕೆಗಳನ್ನು ಅಲ್ಲಗಳೆಯಬೇಕಾಗಿಲ್ಲ, ತಾವು ಬೆಳ್ಳಗಿದ್ದೇವೆನ್ನಲು ತಮ್ಮ ಸುತ್ತಲೂ ಕೆಲವು ಕಪ್ಪು ಜನರನ್ನಿಟ್ಟುಕೊಳ್ಳಬೇಕಾಗಿಲ್ಲ, ಬೇರೆಯವರ ಮುಖಕ್ಕೆ ಮಸಿ ಹಚ್ಚಿ ತಮ್ಮ ಸೌಂದರ್ಯವನ್ನು ವೈಭವೀಕರಿಸುವುದರಿಂದ ಜನರ ಕಣ್ಣಲ್ಲಿ ಮತ್ತಷ್ಟು ಕೀಳಾಗುತ್ತಾರೆಯೇ ಹೊರತು ಜನರ ವಿಶ್ವಾಸ ಪಡೆಯಲಾರರು. ಈ ಮಾತುಗಳು ಸಂಘ ಪರಿವಾರಕ್ಕೂ ಅನ್ವಯಿಸುತ್ತವೆ. ■

ಇಲ್ಲಿ ಬದುಕೋರಿಗೆ ಯಾವ ಬರವಸೆನೂ ಇಲ್ಲ ಕಂಡ್ರ

ಬೊಂಬಾಯಿಯ ಕತೆ ಕೇಳಿದ ಕಾಳಮಾವ ಲೊಚ ಗುಡಿದು, ಸುಮಾರು ಹೊತ್ತಿನ ನಂತರ,

"ಯಾವ ಬರವಸೆನೂ ಇಲ್ಲ ಕಂಡ್ರ" ಎಂದ.

ಕಾಳಮಾವನ ಬರವಸೆ ಪದ ಜುಮ್ಮಿಗೆ ಅರ್ಥವಾಗಲಿಲ್ಲ, ಆದರೆ ವಾಟಿಸ್ಸೆಗೆ ಅರ್ಥವಾಗಿತ್ತು.

"ನಿಜ ದ್ವಡಪ್ಪ ನಾಳೆ ಏನಾದ್ರು ಆಗಬವುದು. ಜನಗಳು ಯಾವುದೊ ನಂಬಿಕೆ ಮ್ಯಾಲೆ ಕಾಲ ಹಾಕ್ತ ಅವುರೆ" ಎಂದ.

ಬಯಲುಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಇಂತವು ನ್ಯಡದಾಗ ಯಲ್ಲಾ ಕಡೆ ಕಟ್ಟೆಚ್ಚರ ವಯಿಸಲಾಗಿದೆ ಅಂತ ಟಿವಿ, ರೇಡಿಯೋ ಬಡಕತ್ತವೆ. ಅದೇನು ಕಟ್ಟೆಚ್ಚರನೊ ಏನೊ ನನಿಗಿವತ್ತಿನವರಿಗೂ ಅರ್ಥಾಗಿಲ್ಲ ಹೋಗತ್ತಗೆ" ಎಂದ ಉಗ್ರಿ.

"ಇಂತ ನನ್ನ ಮಕ್ಕಳ ಹಿಡಕೊಡೋ ಜವಾಬ್ದಾರಿಯ ಸಾಬರಿಗೇ ವಯಿಸಿದರ್‍ಯಂಗೇ?" ಎಂದ ಸೀರ, ಮಹಾ ಸಮಸ್ಯೆಯ ಪರಿಹಾರ ಕಂಡಂತೆ ಕಣ್ಣುಬಿಟ್ಟ.

"ಚಗಪ್ಪ ಈ ಟೈಮಲ್ಲಿ ನಿನ್ನಂಥೋರು ನಮ್ಮ ದೇಸದ ಸಾಬರನೂ ಬೈಯ್ಯಂಗಿಲ್ಲ, ಯಾಕಪ್ಪ ಅಂದ್ರೇ ಟೆರರಿಸ್ಟಗಳು ಬಂದಿರದು ಕರಾಚಿಯಿಂದ" ಎಂದ ವಾಟಿಸ್ಸೆ.

"ಪಾಕಿಸ್ತಾನದಲ್ಲೂ ಇಂತವು ನ್ಯಡಿತಾ ಅವಲ್ಲ, ಅದಕೇನೇಳ್ತೀ?" ಎಂದ ಉಗ್ರಿ.

"ಅವು ನಮ್ಮಂಗೆ ಆಗ್ಯವೆ ಅನ್ನು?" ಎಂದ ಕಾಳಮಾವ.

"ಅವುರಿಗೋಲಿಸಿದ್ರೆ ನಾವೆ ಪರವಾಗಿಲ್ಲ ಕಣಮಾವ. ಇಲ್ಲಾದ್ರೆ ಸಾಬರು ನಮಿಗೆ ಸಮಸ್ಯಾಗ್ಯವುರೆ. ಅಲ್ಲಿ ಸಾಬರೆ ಸಾಬರಿಗೆ ಸಮಸ್ಯೆ."

"ಇದೇನೊ ಉಗ್ರಿ ಹಿಂಗೇಳ್ತೀ? ನಮ್ಮ ದೇಸದಲ್ಲಿ ಸಾದು, ಸಂತ್ರ, ಮಿಲಿಟ್ರಿ ಆಫೀಸರ್‍ಗಳು ಟೆರರಿಸ್ಟಾಗಿದ್ದರಂತೆ. ಅವುರ್‍ನಾಗ್ಲೆ ಅರೆಸ್ಟು ಮಾಡಿ ಎನ್‌ಕ್ವಯಿರಿ ಮಾಡ್ತ ಅವುರೆ" ಎಂದ ವಾಟಿಸ್ಸೆ.

"ಇದೇನ್ಲ ಇಂತ ಸುಳ್ಳೇಳತಿ. ಸಾದು ಸಂತ್ರ ಅಂಗ್ಯಾಕಾದ್ರು?" ಎಂದ ಕಾಳಮಾವ.

"ದ್ವಡಪ್ಪ ಸಾದು ಸಂತ್ರ ಅಂದ್ರೇನು ತಿಳಕಂಡೆ ನೀನು? ಕಾವಿ ಬಟ್ಟೆ ಹಾಕಿದ ಕೂಡ್ಲೆ ಅವುರ ಕಾಮ ಕರಿಗೋಯ್ತದೆ ಅಂತ ಮಾಡಿದ್ದಿಯಾ? ಹರಿಯಾಣದಲ್ಲಿ ರೈಲಿಗೆ ಬಾಂಬು ಹಾಕ್ಸರೋಳು ಕಾವಿ ಬಟ್ಟೆ ಹಿಕ್ಕರೊ ಸಾದು ಸನ್ಯಾಸಿ ಪ್ರಗ್ನಾಸಿಂಗಿ."

"ಅವುಳಿಗೇನು ಬತ್ಲ ಮಲ್ಲಾಗ್ರು?" ಎಂದಳು ಜುಮ್ಮಿ.

"ಅವುಳ ಲವ್ವರ್‍ರ ಸಾಬ್ರು ಕೊಂದಾಕಿದರಂತೆ. ಅದ್ಕೆ ಈ ತಿಕ್ಲಿ ರೈಲಿಗೆ ಬೆಂಕಿ ಹಾಕಿ ಅರವತ್ಯಪತ್ತು ಜನ ಕೊಂದಳಂತೆ. ಇದಕೇನೇಳ್ತೀ?"

"ನೋಡ್ಮತ್ತೆ? ಅಂಗರೆ ತಿಕ್ಲನೆ ಬುಡವುಳು."

"ಅಲ್ಲಪ್ಪಾ, ಸಾಬರ ಜ್ವತಿಗೆ ಇವುರೂ ಸೇರಿಕಂಡ್ರೇ ಇನ್ನು ಮ್ಯಾಲೆ ಯಾರನ ಅಂತ ಹಿಡದೀ?'' ಎಂದು ಕಾಳಮಾವ ಚಿಂತಾಕ್ರಾಂತನಾದ.

"ಅದೇ ದ್ವಡಪ್ಪ ಈಗ ಆಗಿರೊ ಪ್ರಾಬ್ಲಮ್ಮು. ಎಲ್ಯಾರ ಬಾಂಬು ಸಿಡಿತು ಅಂದ್ರೆ ಹೋಗಿ ಅನುಮಾನ ಬಂದ ಸಾಬರನ್ಯಲ್ಲ ಹಿಡಕಂಡು ಬರೋರು. ಈಗ ಯಾರ್‍ನ ಹಿಡಿಯನಪ್ಪ ಅನ್ನಂಗಾಗ್ಯದೆ."

''ಬಂಬಾಯಿಲಿ ಸತ್ತೋರ ಪೈಕಿ ನಮ್ಮೊರ್‍ಯಾರು ಇಲವೇನ್ಲ?" ಎಂದಳು ಜುಮ್ಮಿ.

"ನಮ್ಮೋರ್‍ಯಾಕಕ್ಕ ಅಲ್ಲಿಗಂಟ ಹೋದರೂ. ನಮ್ಮೋರ್‍ಯಲ್ಲ ಕುರ್ಲಾದಲ್ಲವುರೆ. ಅಮ್ಯಾಲೆ ಧಾರಾವಿ, ಭೀವಂಡಿ, ಕಲ್ಯಾಣಿ ಇಲ್ಲೇ ಇರದು. ತಾಜ್‌ಮಹಲ್‌ಗೋಗಿ ಕ್ಯಲಸಕ್ಕೆ ಸೇರೊ ಅಂತ ನಾಲೆದ್ದು ನಮ್ಮೊರಿಗೆಲ್ಲಿ ಬರಬೇಕು?" ಎಂದ ವಾಟಿಸ್ಸೆ.

"ಅಂಗೇಳಬ್ಯಾಡ ಕಣೊ ವಾಟಿಸ್ಸೇ. ನಮ್ಮೊರ ಏನು ಅನ್ನಕಂಡಿದ್ದಿ ನೀನು? ಹೊನ್ನೇನಳ್ಳಿ ಶಿವಣ್ಣ ಏರ್‌ಪೋರ್ಟ್‌ನಲ್ಲಿ ಡ್ರೈವರ್‍ರಾಗಿದ್ದ, ರಾಮಲಿಂಗಣ್ಣ ದಿಲೀಪ್ ಕುಮಾರನಿಗೆ ಡ್ರೈವರಾಗಿದ್ದ ಇದೇ ಕಿತ್ತೂರಯ್ಯ, ಶಾಮಾಚಾರಿ, ನೀಲಾಚಾರಿ ಶ್ರೀಕಂಠಾಚಾರಿ ಇವುರ್‍ಯಲ್ಲ ಗೇಟವೇ ಅತ್ರ ಇರೊ ಹೋಟ್ಯಲ್ಲಿ ಕಿಟಕಿ ಬಾಗ್ಲು ಕ್ಯಲಸ ಮಾಡಿ ಬಂದವುರೆ, ಗೊತ್ತೆ?"

"ಗೊತ್ತು ಕಣೊ ಉಗ್ರಿ. ಅದರಲ್ಲಿ ಒಪ್ಪ ಪರಸೆಂಟು ನಿಜ ಇರಬವುದು. ಆದ್ರೆ ಗೇಟವೇ ಅತ್ರ ಇರೋ ಹೋಟ್ಯಗೆ ಪಾರಿನ್ನೋರು ಬತ್ತರೆ ಹೋಯ್ತರೆ. ಅಲ್ಯಲ್ಲ ಇರೋರು ಅವುರೆಯ."

"ನೀನ್ಯಾವಾಗೋಗಿದ್ಲ ಅಲ್ಲಿಗ್ಯಲ್ಲ?"

"ಇದೇನಕ್ಕ ಹಿಂಗಂತೀ? ಒಂದಲ್ಲ ಯರಡು ಸತಿ ಹೋಗಿ ಬಂದಿದ್ದಿನಿ. ಗೇಟವೇ ಅತ್ರ ನಿಂತಗಂಡು ಸಮುದ್ರನೂ ನೋಡಿ ಬಂದಿದ್ದಿನಿ. ಟೆರರಿಸ್ಟಗಳು ಯಂಗೆ ಬಂದು ಯಂಗೆ ಹೋದ್ರು ಅಂತ ಇಲ್ಲಿಂದ್ಲೆ ಹೇಳಬಲ್ಲೆ."

"ನಮ್ಮ ದೇಸದ ಸಮುದ್ರದಿಂದ ದೇಸದ್ವಳಿಕೆ ಹಿಂಗೂ ಬರಬವುದು ಅಂತ ತೋರಿಸಿಕೊಟ್ರು ಕಣೊ ವಾಟಿಸ್ಸೆ. ನಮ್ಮ ದೇಸದ ಪೊಲೀಸ್‌ನೋರು ಊರ್‍ನ ಕಾಯದೊ, ಸಮುದ್ರ ಕಾಯದೊ ಅನ್ನಂಗಾಗ್ಯದೆ."



"ನಮ್ಮ ದೇಸದ ಪೊಲೀಸ್‌ನೋರು ಪುತಾರ ಕಾಯ್ತಯಿಲ್ಲ ಕಣೊ ಉಗ್ರಿ. ಬಯಲು ಕಾಯ್ತಾ ಅವ್ರುರೆ. ಪರೆಗ್‌ಜಾಂಪಲ್ ಲಿಂಗನಮಕ್ಕಿ, ಹಿನ್ನೀರಲ್ಲಿ ಯಾವನುಬೇಕಾದ್ರು ಆಟ ಆಡಬವುದು. ಆದ್ರೆ ಸೆಕ್ಯೂರಿಟ ಇರದು ಡ್ಯಾಮತ್ರ. ಹಿನ್ನೀರಲಿ ಯಾವನಾರ ಬೋಟಲ್ಲಿ ಬರಬವುದಲ್ಲ ಅಂತ ನಾನು ಅಲ್ಲಿನ ಸಿಬ್ಬಂದಿಗೆ ಹೇಳಿ ಬಂದೆ. ಅವುರೇನು ನನ್ನ ಮಾತ ಸೀರಿಯಸ್ಸಾಗಿ ತಗಂಡ್ರೋ ಇಲ್ಲವೊ ಗೊತ್ತಾಗಲಿಲ್ಲ."

"ನಿನ್ನ ಮಾತ ಯಾರು ಕೇಳ್ತರ್ಲ?"

"ನಿಜ ಕಣಕ್ಕ, ಹಾಲಿ ಸರ್ಕಾರದಲ್ಲಿರೊ ಅಧಿಕಾರಿಗಳು ಮಂತ್ರಿಗಳ ಮಾತ್ನೆ ಕೇಳ್ತಯಿಲ್ಲವಂತೆ. ಇನ್ನ ನನ್ನ ... ಕೇಳ್ತರಾ?"

"ಮಂತ್ರಿಗಳ ಮಾತ್ಯಾಕ್ಲ ಕೇಳದಿಲ್ಲ?"

"ಹಾಲಿ ಇರೊ ಎಡೂರಪ್ಪನ ಸರ್ಕಾರದ ಮಂ... ಏನೂ ಗೊತ್ತಿಲವಂತೆ ದ್ವಡಪ್ಪ. ಗೊತ್ತಿಲ್ಲದೆ ಇರ... ಗೊತ್ತು ಮಾಡದಕಿಂತ ಸುಮ್ಮನಿರದೆ ವಾಸಿ ಅಂತ ... ಸುಮ್ಮನವುರೆ. ಆದ್ಕೆ ಇದೀ ಕರ್ನಾಟಕ ಕತ್ಲಲಿ ... ರದು" ಎಂದ ವಾಟಿಸ್ಸೆ.

"ನಿಜ ಕಂಡ್ಯ, ಮೂರು ದಿನಾಯ್ತ ಕರಂಟೊ... ಬಂಬಾಯಿಲಿ ಏನು ನ್ಯಡಿತು ಅಂತ ತಿಳಕಳನಾ... ಕರಂಟೇ ಬರಲಿಲ್ಲ ಹೋಗತ್ತಗೆ" ಎಂದಳು ಜು...

"ಕರಂಟಿನ ಕತೆ ಗೊತ್ತಿದ್ದೆ ಕಣಕ್ಕ, ಎಡ... ಈಸ್ಸುರಪ್ಪನಿಗೆ ಆ ಕಾತೆ ಕೊಟ್... ನೋಡೀಗ, ಇದೀ ರಾಜ್ಯನೆ ಈಸ... ಬೈತಾಯಿದ್ರೆ ಎಡೂರಪ್ಪ ಶೋಬ ಕರ... ಜ್ವತೆ ನಗತಾ ಕುಂತಿದ್ದನಂತೆ."

"ಆದ್ಯಾಕವುಳ ಜ್ವತೆ ನಗಾಡ್ಯನ..."

"ಅವುರಿಬ್ರು ಸಮಂದವ ... ಮಾಡಿದೋನು ಇದೇ ಈಸ್ವರ... ಕಣಕ್ಕ. ಆದ್ಕೆ ಎಡೂರಪ್ಪ ಇರ... 'ಹಾಡ್ತಿನಿ ಅಂತ ನೀರಾವರಿ ಖಾತೆ ... ಕರಂಟ್ ಖಾತೆ ಕೊಟ್ಟು ಪೀಜು ಕಿ... ವುನೆ" ಎಂದು ವಾಟಿಸ್ಸೆ ನಕ್ಕ.

"ಪೀಜು ಕಿತಗುಂಡಿರದಷ್ಟೇ ಅಲ್ಲ ... ಕರಂಟು ಎಲ್ಯಾರ ಇದ್ರೇಳಿ, ... ದುಡ್ಡಾದ್ರು ಕೊಟ್ಟು ತಗತಿನಿ ಅಂತಾ ಅವುನೆ ಎಡೂ... ಎಂದ ಉಗ್ರಿ.

"ಅದಪ್ಪ ಜೋಕು ಅಂದ್ರೆ. ಅಲ್ಲಾ ಕಣೊ ಕ... ಕಂಡ್ರೇಳಿ ಅನ್ನಕ್ಕೆ, ಅದೇನು ಮಳ್ಳುಗುಡ್ಡೇನೋ ... ಪೂಲಿಷ್ ಫೆಲೊಗಳು, ಕೆಲವು ಇಲಾಖೆಗೆ ಕೊ... ದುಡ್ಡ ನಿಲ್ಲಿಸಿ ಬರೀ ಕರಂಟಿಗೆ ಖರ್ಚು ಮಾ... ಎಷ್ಟೊ ಕರಂಟು ಸಿಗದು. ಏನು ಬ್ಯಾಡ... ರಾಮಚಂದ್ರಾಪುರದ ಮಠಕ್ಕೆ ಮೂರು ಕೆ... ಕೊಡದಕಿಂತ ಆದ್ಕೆ ಇನ್ನೊಂದಿಷ್ಟು ಕೋಟಿ ಸೇ... ಒಂದು ಥರಮಲ್ ಪ್ಲಾಂಟ್ ಆಗದು. ಪ್ರತಿ ...

ಹಿಂದೂ ಸ್ವರ್ಗ, ಮುಸಲ್ಮಾನ ಸ್ವರ್ಗ ಅಂತಾನೂ ಇದೆಯೋ

ಗುರುವಾರ ಬೆಳಿಗ್ಗೆ. ಪತ್ರಿಕೆ ಹಂಚುವ ಹುಡುಗ ಪತ್ರಿಕೆ ಬಿಸಾಕಿ ಹೋಗಿದ್ದ. 'ದ ಹಿಂದು' ಕಾಣೆಯಾಗಿತ್ತು, ಉಳಿದ ಎರಡು ಪತ್ರಿಕೆಗಳನ್ನೇ ತೆಗೆದುಕೊಂಡೆ. 'ವಾರ್ತಾಭಾರತಿ'ಯಲ್ಲಿ 'ಮುಂಬೈ: ಗುಂಡು ಹಾರಾಟ, ಸ್ಫೋಟ; ಭಯೋತ್ಪಾದಕರ ದಾಳಿ' ಎಂದಿತ್ತು, ಈ ಭಾರತಿಗೆ ಭಯೋತ್ಪಾದಕರದ್ದೇ ಸುದ್ದಿ ಎಂದು ಗೊಣಗುತ್ತಾ 'ಪ್ರಜಾವಾಣಿ' ನೋಡಿದೆ. ಇದರ ವಾಸನೇನೂ ಇರಲಿಲ್ಲ, ಅದರಲ್ಲಿ ಸುದ್ದಿ ಬಂದರೆ ಮಾತ್ರ ಅದು ಖಚಿತ ಅನ್ನೋ ಅಭಿಪ್ರಾಯದವನು ನಾನು. ಸರಿ ಏನೂ ಆಗಿಲ್ಲ, ಎಲ್ಲ ನಾರ್ಮಲ್ ಆಗಿದೆ ಅಂದುಕೊಂಡೆ. ಹೇಗಾದರೂ ಆಗಲಿ ಅಂತ ಟೆಲಿವಿಷನ್ ಆನ್ ಮಾಡಿದೆ. ವಾರ್ತಾಭಾರತೀದೇ ಖಚಿತ ಸುದ್ದಿ ಆಗಿತ್ತು! ಎಲ್ಲ ಸುದ್ದಿ ಚಾನೆಲ್‌ಗಳೂ ಇದೇ ಸುದ್ದಿ ಬಡಿದುಕೊಳ್ಳುತ್ತಿದ್ವೋ. ಕೇಳಿ ಕೇಳಿ ಬೇಸರ ಆಯ್ತು. ಏಕತಾನದ ದನೀಲಿ ಒದರುತ್ತಾ ಇದ್ದರೆ ಯಾರಿಗಾದರೂ ಹೀಗಾಗುವುದೇ ಸರಿ. ಹಾಗೆ ಜೋಂಪು ಹತ್ತಿತು.

ಮುಂಬಯಿಯ ತಾಜ್ ಹೋಟೆಲಿಗೆ ಅದರದ್ದೇ ಆದ ಇತಿಹಾಸ ಇದೆ. ಒಂದು ಸಲ ಜೆಮ್‌ಶೇಡ್‌ಜಿ ನಸೀರ್‌ವಂಜಿ ಟಾಟಾ ಅಂದರೆ ಈಗಿನ ರತನ್ ಟಾಟಾರ ಅಜ್ಜ ಒಮ್ಮೆ ಅಪೋಲೋ ಹೋಟೆಲ್‌ಗೆ ಹೋಗಿದ್ದರಂತೆ. ಈಗ ಅದು ಬರ್ಬಾದ್ ಆಗಿದೆ ಅನ್ನಿ. ಆಗ ಅಲ್ಲಿ 'ಬ್ರಿಟಿಷರಿಗೆ ಮಾತ್ರ ಪ್ರವೇಶ' ಎಂದು ಅವರನ್ನ ಸೇರಿಸಲಿಲ್ಲವಂತೆ. ಇದರ ಅಪ್ಪನಂತಹ ಹೋಟೆಲ್ ಕಟ್ಟುಸ್ತೀನಿ ಅಂತ ಅಂದೇ ಮನಸ್ಸು ಮಾಡಿದರಂತೆ. ಆ ಪ್ರತಿಜ್ಞೆಯ ಅಂಗವಾಗಿ ಈ ತಾಜ್ 1903ನೇ ಇಸವಿಯಲ್ಲಿ ಪ್ರಾರಂಭ ಆಯಿತಂತೆ. ಮುಂಬಯಿಯ ಪ್ರತಿಷ್ಠೆಯ ಕುರುಹು ಆಗಿದ್ದ ಇದಕ್ಕೆ ಉಗ್ರರು ದಾಳಿ ನಡೆಸಿದ್ದರು.

ಡೆಕನ್ ಮುಜಾಹಿದ್ದೀನ್ ಸಂಘಟನೆ ದಾಳಿಯ ಹೊಣೆಗಾರಿಕೆ ಹೊತ್ತಿದೆ. ಟಿವಿ ಏಕತಾನದಲ್ಲಿ ಸಾರುತ್ತಾ ಇತ್ತು, ಒಂದು ಚಾನಲ್ ಅಂತೂ ಹೋಟೆಲಿನ ಮೇನೇಜರ್ ಹೆಂಡತಿ ಮತ್ತು ಅವರ ಇಬ್ಬರು ಮಕ್ಕಳ ಬರ್ಬರ ಕೊಲೆಯನ್ನು ಊಹಿಸಿ ಪ್ರಚೋದಕ ರೀತಿಯಲ್ಲಿ ಬಿತ್ತರಿಸುತ್ತಿತ್ತು, ಅಷ್ಟಕ್ಕೆ ನಿಲ್ಲಲಿಲ್ಲ, ಜನರು ಸಾಕಷ್ಟು ಉದ್ರೇಕಗೊಂಡಿಲ್ಲ ಅನ್ನುವ ಅನುಮಾನ ಕಾಡಿರಬೇಕು. ಭಾರತದ ದುರ್ಬಲ ಕಾನೂನುಗಳೇ ಇದಕ್ಕೆ ಕಾರಣ



ಅಂತ ಇದಕ್ಕೆ ಕಾರಣರಾದವರನ್ನು ದೂಷಿಸಿತು. ಪಾರ್ಲಿಮೆಂಟ್ ಕಟ್ಟಡವನ್ನು ಸ್ಫೋಟಿಸಲು ಯತ್ನಿಸಿದ ಅಫಜಲ್ ಗುರುವಿಗೆ ಗಲ್ಲಿಗೇರಿಸಿದ್ದರೆ ಈ ದುರ್ಘಟನೆ ನಡೆಯುತ್ತಲೇ ಇರಲಿಲ್ಲ ಅನ್ನುವ ಫರ್ಮಾನು ನೀಡಿತು. ಈ ಬುದ್ಧಿವಂತ ವ್ಯಕ್ತಿಗೆ ಅಫಜಲ್ ಗುರು ಪರ ವಾದಿಸಲು ಯಾವ ನ್ಯಾಯವಾದಿಯೂ ಮುಂದೆ ಬರಲಿಲ್ಲ ಅನ್ನುವುದು ಯಾಕೋ ಏನೋ ಜ್ಞಾಪಕಕ್ಕೆ ಬರಲಿಲ್ಲ, ನ್ಯಾಯಾಲಯವೇ ನೇಮಿಸಿದ ವಕೀಲರೂ ಸಹ ಸಮರ್ಪಕವಾಗಿ ವಾದ ಮಂಡಿಸಲಿಲ್ಲ ಎಂಬುದೂ ನೆನಪಿಗೆ ಬರಲಿಲ್ಲ!

ಎಟಿಎಸ್ ಮುಖ್ಯಸ್ಥ ಹೇಮಂತ ಕರ್ಕರೆ ಅವರನ್ನು ಹಾದಿ ಹೊಗಳಲಾಯ್ತು, ಯಾವುದೇ ಒತ್ತಡಕ್ಕೆ ಮಣಿಯದೇ ಮಾಲೆಗಾಂವ್ ಸ್ಫೋಟದ ತನಿಖೆ ಮಾಡಿದ್ದನ್ನು ಕೊಂಡಾಡಲಾಯಿತು. ಇದು ಶ್ಲಾಘನೀಯವೇ. ಒಂದು ದಿನ ಮೊದಲೇ ಅವರಿಗೆ ಬೆದರಿಕೆಯ ಕರೆಗಳು ಬಂದಿದ್ದವು ಎಂದೂ ತಿಳಿಸಲಾಯಿತು. ಅವರು ಮರೆತಿದ್ದು ಯಾವುದು ಅಂದರೆ ಕೆಲವು ಹಿಂದೂ ಸಂಘಟನೆಗಳು - ಹಿಂದೂಗಳು ಭಯೋತ್ಪಾದಕರಾಗಿರಲ್ಲು ಸಾಧ್ಯವಿಲ್ಲ, ಸಾಧ್ವಿ ಪ್ರಗ್ನಾಸಿಂಗ್‌ಗೆ ತನಿಖಾ ವೇಳೆಯಲ್ಲಿ ಕಿರುಕುಳ ನೀಡಲಾಗುತ್ತಿದೆ ಎಂದು ಆರೋಪಿಸಿ ಭಯೋತ್ಪಾದಕರ ಬದುಗಡೆಗೆ ಆಗ್ರಹಿಸಿ ಪ್ರತಿಭಟಿಸಿದ್ದನ್ನು! ಅಲ್ಲ ಇಷ್ಟೆಲ್ಲ ಪ್ರತಿಭಟನೆ, ಪ್ರಾಣ ಬೆದರಿಕೆ ನಂತರವೂ ಕರ್ಕರೆ ನಿಲುವಿನಲ್ಲಿ ಬದಲಾವಣೆಯಾಗಿಲ್ಲದಿರುವುದರಿಂದ ಆಕ್ರೋಶಗೊಂಡ ಹಿಂದೂ ಸಂಘಟಕಾರರಲ್ಲಿ ಯಾರೋ ಸನ್ನಿವೇಶದ ದುರುಪಯೋಗ ಮಾಡಿ ಕೊಂಡು ಕೊಲೆ ಮಾಡಿರುವ ಸಾಧ್ಯತೆ ಇಲ್ಲವಾ...

ಇದುವರೆವಿಗೂ ಜನನಿಬಿಡ ಪ್ರದೇಶಗಳಲ್ಲಿ ಸ್ಫೋಟಕ ವಸ್ತುಗಳನ್ನು ಇರಿಸಿ ಅಮಾಯಕರನ್ನು ಸಾವಿನೇಟಿಗೆ ಈಡುಮಾಡಲಾಗುತ್ತಿತ್ತು. ಈಗ ನೋಡಿದರೆ ತಾಜ್, ಒಬೇರಾಯ್, ನಾರಿಮನ್ ಹೌಸ್... ಇಂತಹವುಗಳಿಗೆ ರಾಜಾರೋಷವಾಗಿ ನುಗ್ಗಿ ದಾಳಿ ಮಾಡ್ತಿದಾರಲ್ಲ ಅಲ್ಲೇನು ಸೆಕ್ಯೂರಿಟಿಯವರೇ ಇರಲಿಲ್ಲವಾ; ಅವರಾರಿಗೂ ಅನುಮಾನಾನೆ ಬರುವುದಿಲ್ಲವಾ ಅಂತ ಕಾಡಿತು. ಯಾರೋ ಅಡ್ಡ ಬಂದು 'ನಮ್ಮವರಿಗೇನ್ರಿ, ಲಂಚ ನೀಡಿದರೆ ಕಂಡೂ ಕಾಣದಂಗೆ ಇರ್‍ತಾರೆ. ಬೇಕಾದರೆ ವಿಧಾನಸೌಧವನ್ನೇ ವಿಧಾನಸಭೆ ನಡೆಯುತ್ತಿದ್ದಾಗಲೇ ಉಡಿಹಾರಿಸಬಹುದು' ಅಂದ ಹಾಗಾಯಿತು. ಇರಬಹುದೇನೋ. ತಾಂಡವವಾಡುತ್ತಿರುವ ಭ್ರಷ್ಟಾಚಾರ, ದೇಶದ ತುಂಬ ತುಂಬಿರುವ ಜಾತೀಯ... ದುರುಪಯೋಗವನ್ನು ಮಾಡಿಕೊಂಡಿರಲೂಬಹ... ಆದೇನಾದರೂ ಆಗಲಿ ಉಗ್ರರು ವಿಶ್ವದ ಗಮನ ಸೆಳೆಯುವುದರಲ್ಲಿ ಸಫಲರಾದರು.

ಅಣಕ

ಎಚ್.ಎಲ್. ಕೇಶವಮೂ...

ಈ ರಕ್ತಾಸುರರ ಹಾವಳಿ ನೋಡಿದಾಗ ಬೆಂಗಳ... ರೌಡಿಗಳು ದೇವರ ತರಹ ಕಂಡರು. ಕೊರಳಿಗೆ ... ಹಗ್ಗ ಕೈಗೆ ಬ್ರೇಸ್‌ಲೆಟ್ಟು, ಉಂಗುರದಿಂದಲಂಕೃತ ಕೈ... ಲಾಂಗ್ ಹಿಡಿದು ಸಿನಿಮಾದಲ್ಲಿ ದೇವರು ಪ್ರತ್ಯಕ್ಷ ಆ... ಹಾಗೆ ಸಕಲ ವಸ್ತ್ರಾಲಂಕಾರಗಳಿಂದ ಪ್ರತ್ಯಕ್ಷ ಆ... ದ್ವೇಷಿಸುವರನ್ನ ಮಾತ್ರ ಕೊಲ್ತಾರೆ. ಈ ಕೊಲೆಯ... ತಮಾಷೆ ನೋಡಿ ಆನಂದಿಸುವ ನಾಗರಿಕರಿಗೆ ಯಾ... ತೊಂದರೆ ನೀಡುವುದಿಲ್ಲ, ಅವರದ್ದೇನಿದ್ದರೂ ವೃತ್ತಿ ... ಇವರ ನೋಡಿದರೆ ಕಾರಣವೇ ಇಲ್ಲದೇ ಅಮಾಯಕ... ಹೊಡೆದು ಬಿಸಾಕ್ತಾರೆ.

ಭಯೋತ್ಪಾದನೆಯಿಂದ ಕೆಲವರಿಗೆ ಭ... ಖುಷಿಯಾಗಿದೆಯಂತೆ. ಮುಂಬಯಿ ದಾಳಿ ಮಾಲೆಗಾ... ಮರೆಸುತ್ತಲ್ಲಾ ಅಂತಾನಂತೆ ಈ ಸಂತೋಷ! ಇನ್ನು ಕೆ... ಸಂಘಟನೆಗಳಿಗೆ ಇದು ರಸಗುಲ್ಲಾ ಸಿಕ್ಕಿದ ಹಾಗಾಗಿದೆಯ... ಯಾಕಪ್ಪ ಅಂದರೆ ಇದರ ನೆಪದಲ್ಲಿ ಬಂದ್ ಕರೆ ... ಮುಸಲ್ಮಾನರ ವಿರುದ್ಧ ಹಿಂದೂಗಳನ್ನು ಎತ್ತಿ ಕಟ್... ಇದು ಸುಸಂದರ್ಭ ಅಂತಾನಂತೆ!!

ಭಯೋತ್ಪಾದಕರಿಗೆ ಯಾವುದೇ ಧರ್ಮದಲ್ಲಿ ... ಇಲ್ಲ ಅಂತಾರೆ. ಇರಬಹುದು. ಆದರೆ ಅವರು

...ಮ್ಯಾಲೆ ಒಂದೊಂದು ಗಾಳಿ ಪ್ಯಾನಾಕಿದ್ರೆ ಅದು ಈ ಊರಿಗೆ ...ಕೊಡದು. ಅಲವೇನೊ ಉಗ್ರಿ?"

...ವಾಗ್ಲು ನೀನು ಕರಂಟು ಮಂತ್ರಿ ಆಗಬೇಕಾಗಿತ್ತು ಕಣೊ. ಆಗಿದ್ರೆ ...ತ ಚೆನ್ನಾಗಿ ಆ ಖಾತೆ ನಿಭಾಯಿಸ್ತಿದ್ದೆ."

...ಮಾಡ್ತಿ, ಹಲ್ಲಿದ್ದೋರಿಗೆ ಕಡ್ಲಿಲ್ಲ, ಕಡ್ಲಿದ್ದೋರಿಗೆ ಹಲ್ಲಿಲ್ಲ."

...ಇದ್ದೋರಿಗೆ ಏನೊ ಕ್ಯಟ್ಟ ಕಾಯಿಲೆ" ಎಂದು ಉಗ್ರಿ ನಕ್ಕ. ...ರ್ಲಿ. ಈ ಗಲಾಟಲಿ ವಿ.ಪಿ. ಸಿಂಗ್ ತೀರೋಗಿದ್ದೆ ಗೊತ್ತಾಗಲಿಲ್ಲ ...ಗ್ರಿ. ಇಂತ ಟೇಮಲ್ಲಿ ಅವುರು ಹೋಗಬಾರದಾಗಿತ್ತು. ನಾನು ...ಅವುನ್ನೆಯ ಕಣೊ. ಚಂದ್ರಶೇಖರನಿಗಿಂತ ವಳ್ಳೆ ಲೀಡ್ರು."

...ಗಿತ್ತ ಅವುನಿಗೆ?" ಎಂದ ಸೀರ.

...ವಾಗಿತ್ತು ಚಿಗಪ್ಪ ಕ್ಯಾನ್ಸರಾದೋರ್ನಲ್ಲ ಹೆದ್ರಿಕಂಡ್ರೆ, ಇವುನು ಆರಾಮವಾಗಿ ...ದು ಚಿತ್ರ ಬರಕಂಡು ಇದ್ದ."

...ಸು ಮಾಡಿದ್ರೆ ದ್ಯಾವೇಗೌಡ್ರಿಗಿಂತ ಅವುನೆ ಪ್ರಧಾನಿಯಾಗಬವುದಿತ್ತು ...ವ. ಏನು ಮಾಡ್ತಿ ಅವುನಾಗದೆ ದ್ಯಾವೇಗೌಡನಿಗೆ ಬುಟ್ಟುಕೊಟ್ಟ. ... ದ್ಯಾವೇಗೌಡ ಮಾಜಿ ಪ್ರಧಾನಿ ಅನ್ನಿಸಿಗತ್ತಿದ್ನೆ?"

...ರೆ ದ್ಯಾವೇಗೌಡನ್ನ ಪ್ರಧಾನಿ ಮಾಡಿದೋನು ವಿ.ಪಿ. ಸಿಂಗ ಅನ್ನು?" ...ಳಮಾವ.

...ಕಣ ಮಾವ. ದಳ ಒಂದಿಷ್ಟು ಸೀಟು ಗೆದ್ದುಕೊಂಡು ...ಯ್ತು. ಲೋಕಸಭೆ ಅನ್ನೊ ಆನೆ ಮಾಲೆ ಹಿಡಕಂಡು ಜ್ಯೋತಿಬಸು ...ಮನೆತಕ್ಕೋಯ್ತಂತೆ. ಆಗ ಅವುನ ಕಡಿಯೋರು 'ನೀನಾಗದು ...ಮ್ಮದೇನಿದ್ರು ಪಶ್ಚಿಮ ಬಂಗಾಳವೇ ವರತೂ ಇಂಡಿಯಾದೇಸ ...ತೆ ಮಾಲೆ ಹಿಡದಾನೆಯ ಮುಂದುಕ್ಕಳಿಸಿದ್ರು. ಅದು ಅಲ್ಲಿಂದ ...ಗನ ಮನೆತಕ್ಕೆ ಬಂತು. ಆಗ ಈ ವಿ.ಪಿ. ಸಿಂಗ ಆನೆಯಿಂದೆ ...ಕಾಂಗ್ರೆಸ್ಸಿನೋರು, ದಳದೋರು, ಯಲ್ಲಾರ್ನು ಒಂದು ಸತಿ ನೋಡಿ ...ನ ಮ್ಯಾಲೆ ಬನ್ನಿ. ನಾನು ರಡಿಯಾಗಿರತಿನಿ' ಅಂದು ಹೋದ. ಸರಿ ...ಪ್ರಧಾನಿ ಹಾರವ ಲೋಕಸಭೆ ಆನೆ ಸೊಂಡ್ಲಿಗೆ ಕೊಟಗಂಡು ತಿರಗ ...ಮನೆತಕ್ಕೋದ್ರೆ, ಆಸಾಮಿ ನಾಪತ್ತೆಯಾಗಿದ್ದ."

...ಕ್ ನಾಪತ್ತೆ ಆಗಿಬುಟ್ಟಾ?"

...ಕಾಂಗ್ರೆಸ್ ಸೂಳೆಮಕ್ಕಳು ಏನೂ ಅಂತ ಅವುನಿಗೆ ಗೊತ್ತಿತ್ತು. ...ಅಂದ್ರಾವಾಗ ಬೆಂಬಲ ವಾಪಸ್ ತಗಳೋ ಅಂಥೋರ್ನ ಅವುನು ...ಆಗ ಅಲ್ಲೇ ಇದ್ದ ಲಲ್ಲು ಪ್ರಸಾದ 'ಅರೆ ಹಾತಿ ಕ್ಯಾ ದೇಕ್‌ರಾಹೈ. ...ಮಾರ ದೇವೇಗೌಡಾಕು' ಅಂದ. ಅವತ್ತಿಂದ ದ್ಯಾವೇಗೌಡ ಹನ್ನೊಂದು ...ಪ್ರಧಾನಿಯಾಗಿದ್ದು ಮನಿಗೆ ಬಂದ. ಇತ್ತಗೆ ಹದನೆಂಟು ತಿಂಗಳು ...ಂತ್ರಿಯಾಗಿದ್ದ, ಅತ್ತಗೆ ಹನ್ನೊಂದು ತಿಂಗಳೂ ಪ್ರಧಾನಿಯಾಗಿದ್ದ. ಈ ... ಅವುನಿಗೆ ಇವತ್ತಿಗೂ ಕಾಟ ಕೊಡ್ತಾಯಿರದ್ರಿಂದ ಯಾರೂ ...ಕೆಲ್ಲಿರಕ್ಕೆ ಬುಡ್ತಾಯಿಲ್ಲ ಕಣಮಾವ.

...ಟ್ಟೈ ಕರಟ್ ಕಣೊ ಉಗ್ರಿ. ನಾನೇಳೊ ಮಾತ್ನೆ ನೀನು ಹೇಳಿದೆ. ...!"

..."

■

...ಬಿಕೆ ಇಟ್ಟದ್ದಾರೆ. ಇಸ್ಲಾಂ ಧರ್ಮಕ್ಕಾಗಿ ಈ ಭಯೋತ್ಪಾದನೆ ಅಂತ ...ಭಯೋತ್ಪಾದಕರು, ಹಿಂದು ಧರ್ಮ ಉಳಿವಿಗಾಗಿ ಇದು ಎನ್ನುವ ...ಗ್ಯಾಸಿಂಗ್, ಪುರೋಹಿತ್ ತರಹದವರು. ಮರಣಹೊಂದಿದ ನಂತರ ... ಹೋಗುತ್ತಾರೆ? ಸ್ವರ್ಗಕ್ಕೋ? ನರಕಕ್ಕೋ?

...ಬ್ಬೈ ಸ್ಫೋಟವನ್ನೇ ನೋಡೋಣ.

...ಪ್ರ ಉಗ್ರರು ಮರಣವನ್ನಪ್ಪಿದರು.

...ಪ ನಂಬಿಕೆಯ ಪ್ರಕಾರ ಅವರು ನೇರ ಹೋಗುವುದು ಅಲ್ಲಾನ...

...ದನ್ನು ನಿಗ್ರಹಿಸಲು ಪ್ರಯತ್ನಿಸಿ ಹುತಾತ್ಮರಾದರಲ್ಲಾ... ಅವರಿಗೂ ...!

...ರೆ ಸ್ವರ್ಗದಲ್ಲೂ 'ಧರ್ಮದ ಜಗಳ' ಇರಬೇಕಲ್ಲಾ!

...ನಾ

...ದಲ್ಲೂ ಮುಸ್ಲಿಂ ಸ್ವರ್ಗ, ಹಿಂದೂ ಸ್ವರ್ಗ ಅಂತ ಇದೆಯೋ!

ಪೋಟಾ ರೋಗ

...ಕಾರಣಿಗಳಿಗೆ ಒಂದು ರೋಗ.

...ಳಿತಾರೂಢ ಪಕ್ಷವಾಗಿದ್ದರೆ: 'ಭಯೋತ್ಪಾದನೆಯನ್ನು ...ಕಾರಿಯಾಗಿ ನಿಗ್ರಹಿಸಲು ಸರ್ಕಾರ ಸಿದ್ಧ' ಅನ್ನೋದು.

...ಕ್ಷ ಆಗಿದ್ದರೆ : 'ಸರ್ಕಾರದ ವೈಫಲ್ಯವೇ ಭಯೋತ್ಪಾದನೆಗೆ ಕಾರಣ' ...ು.

...ವನ್ನು ಬಿಟ್ಟು ಇನ್ನೊಂದಿದೆ : 'ಪೋಟಾ ಕಾಯ್ದೆಯನ್ನು ಕೂಡಲೇ ...ಸಿ' ಎನ್ನೋದು.


... ಸಂಘ ಪರಿವಾರಿಗಳ ವರಸೆ.

...ಟಾ ಕಾಯ್ದೆ ಅಡಿ ಅಮಾಯಕರನ್ನು ಬಂಧಿಸಿ ಕಿರುಕುಳ ನೀಡಿದ್ದು ...ಮನಕ್ಕೆ ಬರಲ್ಲ.

...ಕಾ' ಕಾಯ್ದೆ ಅಡಿ ಶಂಕಿತ ಭಯೋತ್ಪಾದಕರಾದ ಸಾಧ್ವಿ ಪ್ರಗ್ಯಾಸಿಂಗ್, ... ಮುಂತಾದವರನ್ನು ಬಂಧಿಸಿದಾಗ ಇದೇ ಸಾಧ್ವಿ ತನಗೆ ದೈಹಿಕ ...ಮಾನಸಿಕ ಹಿಂಸೆ ನೀಡಲಾಗುತ್ತಿದೆ ಎಂದಿದ್ದರು. ಇಂತಹ ಕಿರುಕುಳದ ...ವಿರುದ್ಧ ದನಿ ಎತ್ತಿದ್ದರು! ಅಲ್ಲದೆ ಪೋಟಾ ಕಾಯ್ದೆ ಅಡಿ ... ಹಲವರನ್ನು ನ್ಯಾಯಾಲಯ ಆರೋಪ ಮುಕ್ತಗೊಳಿಸಿದೆ. ಆದರೂ ...ವಾರ ಹೇಳ್ತಾ ಇದೆ 'ಪೋಟಾ ಕಾಯ್ದೆ' ಜಾರಿಗೆ ತನ್ನಿ. ಇರುವ ... ಅಡಿಯಲ್ಲೇ ನಿಗ್ರಹಿಸಲು ಸಾಧ್ಯವಿಲ್ಲ ಅಂತ....

■

ಮರೆಯುವ ಮುನ್ನ



■ ಪಿ. ಲಂಕೇಶ್ -ಮಾರ್ಚ್ 3, 1991

ಮಲ್ಲಾಡಿಹಳ್ಳಿ: ರಾಘವೇಂದ್ರ ಸ್ವಾಮಿ

ಚೆನ್ನಗಿರಿಯಲ್ಲಿ ಮಹೇಶ ಎಂಬ ಒಳ್ಳೆಯ ಹುಡುಗ ನಮ್ಮ ಏಜೆಂಟ್ ಆಗಿದ್ದಾನೆ. ಆತ ಕೇವಲ ಆರು ತಿಂಗಳಲ್ಲಿ ಚೆನ್ನಗಿರಿಯಲ್ಲಿ ಐವತ್ತು ಪತ್ರಿಕೆ ಮಾರಾಟವಾಗುತ್ತಿದ್ದುದನ್ನು ನೂರೈವತ್ತಕ್ಕೆ ಏರಿಸಿದ್ದಾನೆ. ಇವನು ನನಗೆ ಒಂದು ವರದಿ ಕಳಿಸಿದ; ಅದರಲ್ಲಿ ಮಲ್ಲಾಡಿಹಳ್ಳಿಯ ರಾಘವೇಂದ್ರ ಸ್ವಾಮಿ ತೀರಾ ಕೆಟ್ಟವನೆಂದೂ ಆತ ತನ್ನ ವಯಸ್ಸು 85 ಮಾತ್ರ ಇದ್ದರೂ ನೂರು ವರ್ಷವಾಗಿದೆಯೆಂದು ಹೇಳಿ ಶತಮಾನೋತ್ಸವ ಆಚರಿಸಿಕೊಳ್ಳುತ್ತಿದ್ದಾನೆಂದೂ ಬರೆದ. ಅದನ್ನೇ ಅಂಬುಜ ಎಂಬ ಮಲ್ಲಾಡಿಹಳ್ಳಿಯ ಹೆಣ್ಣುಮಗಳೊಬ್ಬಳು ಈಚೆಗೆ ಬರೆದಳು. ನಾನು ಬೇರೇನನ್ನೂ ಹೇಳದೆ ಮಹೇಶನಿಗೆ ತಿಳಿಸಿದೆ: "ಆ ರಾಘವೇಂದ್ರ ಸ್ವಾಮಿ ಬ್ರಾಹ್ಮಣನಲ್ಲ, ಅಬ್ರಾಹ್ಮಣ; ಬ್ರಾಹ್ಮಣನೆಂಬ ಭಾವನೆ ಹುಟ್ಟಿಸಿದ್ದಾನೆ ಎಂಬುದು ನನಗೆ ಗೊತ್ತು. ಈ ಬಗ್ಗೆ ಶಿವರಾಮಕಾರಂತರು ಬರೆದಿದ್ದನ್ನು ಓದಿದ್ದೇನೆ. ಇಷ್ಟನ್ನು ಬಿಟ್ಟು ಈ ಸ್ವಾಮಿಯ ಅಪರಾಧಗಳೇನಾದರೂ ಇದ್ದರೆ ಬರಿ."

ಆರೆಸ್ಸೆಸ್ ಸ್ನೇಹ, ಸಿಡುಕಿನ ಮನುಷ್ಯ ಮುಂತಾಗಿ ಗೊಣಗುತ್ತಾರೆಯೇ ಹೊರತು ಈ ರಾಘವೇಂದ್ರ ಸ್ವಾಮಿಯ ಬಗ್ಗೆ ಮತ್ತೇನೂ ಹೇಳುತ್ತಿಲ್ಲ. ಇವರು ವಯಸ್ಸು ತಪ್ಪು ಹೇಳಿದ್ದು ಒಳ್ಳೆಯದಲ್ಲ. ಆದರೆ ನಾನೇ ಬಲ್ಲಂತೆ ಈ ಸರಳ, ಸಜ್ಜನ ಸ್ವಾಮಿ ಸಾವಿರಾರು ಜನಕ್ಕೆ ನೆರವಾಗಿದ್ದಾರೆ; ಅಸಂಖ್ಯಾತ ಮಕ್ಕಳಿಗೆ ಬೆಳಕು ನೀಡಿದ್ದಾರೆ; ಲೆಕ್ಕವಿಲ್ಲದಷ್ಟು ಜನ ರೋಗಿಗಳಿಗೆ ನೆಮ್ಮದಿ ತಂದಿದ್ದಾರೆ. ಈತ ಯಾವ ಮಾಯಮಂತ್ರವನ್ನೂ ಮಾಡಿಲ್ಲ, ಜನರ ಕಣ್ಣಿಗೆ ಮಣ್ಣೆರಚಿಲ್ಲ, ಯಾವ ಮನೆಯನ್ನೂ ಮುರಿದಿಲ್ಲ; ಈ ಸ್ವಾಮಿ ಯಾವ ರಾಜಕಾರಣಿಯ ಮರ್ಜಿಗೂ ಪ್ರಯತ್ನಿಸಿಲ್ಲ, ಮತ್ತು ಯಾವನಲ್ಲೂ ಮೂಢ ನಂಬಿಕೆ, ಅಜ್ಞಾನ ಬಿತ್ತಿಲ್ಲ.

ದೈಹಿಕ, ಮಾನಸಿಕ ಶಿಸ್ತು, ಬದುಕಲು ಬೇಕಾದ ಚೈತನ್ಯ ನೀಡುತ್ತಿರುವ ಈ ಸ್ವಾಮಿಯ ಸಣ್ಣಪುಟ್ಟ ತಪ್ಪುಗಳನ್ನು ದೊಡ್ಡದು ಮಾಡಿ ಕೂಗಾಡುವವರು ಸಿನಿಕರು, ಮಾನವದ್ವೇಷಿಗಳು ಎಂದು ನನ್ನ ಅಭಿಪ್ರಾಯ. ಘೋರಪಾತಕದಲ್ಲಿ ಮತ್ತು ವಂಚನೆಯಲ್ಲಿ ಮುಳುಗಿಹೋಗುತ್ತಿರುವ ಈ ಸಮಾಜಕ್ಕೆ ಯಾರು ಒಳ್ಳೆಯವರು, ಯಾರು ಕೆಟ್ಟವರು ಎಂಬುದನ್ನು ತಿಳಿಯುವ ಶಕ್ತಿ ಕೂಡ ಕ್ಷೀಣಿಸುತ್ತಿದೆ. ನನ್ನ ಪ್ರಕಾರ, ಈ ಪರಿಸರದಲ್ಲಿ ಒಂದು ವ್ಯಕ್ತಿಯ ನಿಟ್ಟುಸಿರು ನಿವಾರಿಸಬಲ್ಲ, ಒಂದು ವೃಕ್ಷ ಬೆಳೆಸಬಲ್ಲ, ಒಬ್ಬನ ಅಂಧಕಾರ ತೊಡೆದುಹಾಕಬಲ್ಲ ವ್ಯಕ್ತಿ ಕೂಡ ಅರ್ಥಪೂರ್ಣ ವ್ಯಕ್ತಿ. ರಾಘವೇಂದ್ರ ಸ್ವಾಮಿಗಳಂಥ ನೂರು ಜನ ಇಲ್ಲಿ ಬದುಕಿದ್ದಿದ್ದರೆ ದುಷ್ಟ ಸರ್ಕಾರಗಳ ಅಗತ್ಯವೇ ಇರುತ್ತಿರಲಿಲ್ಲ.

ಸಾಹಿತ್ಯದ ಮೂಲ: ಒಳಜೀವನ

ಒಂದು ಕಾದಂಬರಿ ಬರೆಯಲು ಶುರುಮಾಡಿದ್ದೇನೆ; ಪತ್ರಿಕೆಗೆ ಬರೆಯುವುದನ್ನೆಲ್ಲ ಬರೆದು ಮುಗಿಸಿ ವಾರಕ್ಕೆ ಎರಡು ದಿನವಾದರೂ ಬರೆದು ತಿಂಗಳೊಪ್ಪತ್ತಿನಲ್ಲಿ ತಿದ್ದಿ ಬರೆದು ಮುಗಿಸಿಬಿಡಬೇಕೆಂದು ನನ್ನ ಇಷ್ಟ. ಬರೆಯುತ್ತಿರುವುದು ಒಳ್ಳೆಯದೋ ಕೆಟ್ಟದ್ದೋ ಎಂಬುದಕ್ಕೆ ಕೆಲವು ಸೂಚನೆಗಳಿರುತ್ತವೆ. ಚೆನ್ನಾಗಿ ಬರೆಯುತ್ತಿದ್ದರೆ ಬರೆದಿಟ್ಟದ್ದಕ್ಕೆ ಮತ್ತೆಮತ್ತೆ ಹಿಂದಿರುಗಿ ಮುಂದುವರಿಸುವ ಆಶೆಯಾಗುತ್ತದೆ; ಚೆನ್ನಾಗಿಲ್ಲದಿದ್ದರೆ ಮುಂದುವರಿಯುವುದೇ ಇಲ್ಲ, ಬರೆಯುವುದರಿಂದ ತಪ್ಪಿಸಿಕೊಳ್ಳಲು ಆಶೆಯಾಗುತ್ತದೆ. ನನ್ನದೊಂದು ಅಭ್ಯಾಸವಿದೆ. ನಾನು ಬರೆಯಲಿರುವ ಕತೆ, ಕಾದಂಬರಿಯ ಬಗ್ಗೆ ಯಾರಿಗೂ ಹೇಳುವುದಿಲ್ಲ; ಅದನ್ನು ಬಿಟ್ಟು ಬೇರೆ ವಿಷಯ ಮಾತಾಡುತ್ತಿರುತ್ತೇನೆ. ಹೀಗೆ ವರ್ಷಗಳಷ್ಟು ಕಾಲ ಅದು ಹಾಗೆಯೇ ಇರುತ್ತದೆ. ನಡೆದಾಡುವಾಗ, ಹರಟುವಾಗ, ಓದುವಾಗ, ಮಾರುವಾಗ, ಕೊಳ್ಳುವಾಗ.... ಅದು ರೂಪುಗೊಳ್ಳುತ್ತಲೇ ಇರುತ್ತದೆ. ಅದು ಏನೆಂದು ವಿವರ ನನಗೇ ಗೊತ್ತಿರುವುದಿಲ್ಲ, ಬರೆದಾಗ ಮಾತ್ರ ವಿವರ ಗೊತ್ತಾಗುತ್ತಾ ಹೋಗುತ್ತದೆ.

ಬಿ.ಸಿ. ದೇಸಾಯಿ ವಿಚಿತ್ರ ಲೇಖಕ; ಅವರ 'ಸಾವು', 'ಬಲಾತ್ಕಾರ', 'ಅಧಿಕಾರ ಗಿಧಿಕಾರ'- ಪ್ರಕಟಿಸಿದ್ದೇನೆ. ಇನ್ನೊಂದು ಕತೆ ಪ್ರಕಟಿಸೋಣವೇ ಎಂದು ಹಾಳೆ ತಿರುವಿದೆ. ತೀರಾ ಗೊಂದಲದ ಕತೆ. ಆದರೆ ಅಲ್ಲಿ ನಾನು ಬಹುದಿನದಿಂದ ಕಂಡುಕೊಂಡಿದ್ದ ಒಂದು ಅಂಶವಿದೆ. ಕತೆಯ ಹೆಸರು 'ಗರ್ದಿ ಗಮ್ಮತ್ತು.' ತುಂಬ ಬೋರಿಂಗ್ ಕತೆ. ಆದರೆ ಅದರ ಜೀವಾಳ ಕುತೂಹಲಕರವಾಗಿದೆ. ಕತೆಯ ನಿರೂಪಕ ತನ್ನ ತಂಗಿ ನಪುಂಸಕಿ ಅಥವಾ frigid ಎಂದು ಕಂಡುಕೊಳ್ಳುತ್ತಾನೆ. ನಮ್ಮಲ್ಲಿ ಗಂಡಸರಲ್ಲಿ ನಪುಂಸಕರಿದ್ದಾರೆಯೇ ಹೊರತು ಹೆಂಗಸರಲ್ಲಲ್ಲ. ಅದು ಸುಳ್ಳು, ನಪುಂಸಕತ್ವ ದೈಹಿಕವಾದಷ್ಟೇ ಮಾನಸಿಕವಾಗಿರಲು ಸಾಧ್ಯ.

ಬಿ.ಸಿ. ದೇಸಾಯಿ ಬರೆಯುತ್ತಾರೆ: "ತಂಗಿ ಕುಮುದ ಗಂಡನಿಂದ 'ಫ್ರಿಜಿಡ್' ಎಂದು ಲೇಬಲ್ ಪಡೆದು ವಾಪಸ್ ಮನೆಗೆ ಮರುಳಿದಳು. 'ವ್ಯವಹಾರಕ್ಕಿಷ್ಟು ಸಾಕು' ಎನ್ನುವ ಏಳನೆಯ ತರಗತಿ ಪಾಸಾದ ನನ್ನ ತಂದೆಗೆ, ಅಷ್ಟನ್ನೂ ಕಲಿಯದ ನನ್ನ ತಾಯಿಗೆ ವಿಷಯವೇನೆಂದು ಅರ್ಥವಾಗಲಿಲ್ಲ. ಅವರಿಗೆ 'ಗಂಡಸ್ತನ' ಮಾತ್ರ ಒಂದಿಷ್ಟು ಸಂಕೀರ್ಣ ವಿಷಯ. ಮಲಗಲು ತೂತು ಇದೆಯೋ ಇಲ್ಲವೋ ಇದಷ್ಟೇ ಹೆಣ್ಣಿಗಿರುವ ಸಮಸ್ಯೆ ಎಂದು ಅವರ ನಂಬುಗೆ. ಕಲಿತ ಅಳಿಯ 'ಕಲಿತ ಮೋಸ' ಎಸಗುತ್ತಿದ್ದಾನೆ ಎಂದು ಜಗಳಕ್ಕೆ ಹೊರಟ ತಂದೆತಾಯಿಗಳನ್ನು ಹೇಗೋ ತಡೆದು ಸಮಸ್ಯೆಯನ್ನು ಹೇಗೆ ಪರಿಹರಿಸಬೇಕೆಂದು ತಲೆಕೆಡಿಸಿಕೊಂಡು ಕೂತೆ."

ಆಮೇಲೆ ಗೊತ್ತಾಗುತ್ತೆ-ಆ ಹುಡುಗಿ ಒಳಗೊಳಗೇ ಬೌದ್ಧಿಕ, ಮಾನಸಿಕ ಸಮಸ್ಯೆಗಳಲ್ಲಿ ಸಿಕ್ಕು ತತ್ತರಿಸಿದ್ದಾಳೆ. ಅವಳ ಒಳಜೀವನದ ಪರಿಣಾಮ ಅವಳ frigidity.....

ಇದು ಮನುಷ್ಯನಲ್ಲಾಗುವ ವಿಚಿತ್ರ ಕ್ರಿಯೆ- ಅದರ ಅರಿವಿಲ್ಲದಿದ್ದರೆ ಒಬ್ಬ ಲೇಖಕ ಆಗುವುದಿಲ್ಲ, ಇದಕ್ಕಿದ್ದಂತೆ ಮನುಷ್ಯನಾಳದ ಜೀವ ಉಕ್ಕತೊಡಗುತ್ತದೆ.

ಶಿಶುನಾಳ ಶರೀಫರಿಗೆ ಇದು ಗೊತ್ತಿತ್ತು. 'ನನ್ನೊಳಗಾ ನಾ ತಿಳಕೊಂಡೆ' ಎಂದು ಹೇಳುತ್ತಾಳೆ. ಆತನ ನಾಯಕಿ. ಎಲ್ಲರೂ ಹೇಳಿದಂತೆ ಅರ್ಥಮಾಡಿಕೊಳ್ಳುವುದಕ್ಕೂ 'ನನ್ನೊಳಗಾ ನಾ ತಿಳಿಕೊಳ್ಳುವುದಕ್ಕೂ ವ್ಯತ್ಯಾಸವಿದೆ. 'ನನ್ನೊಳಗಾ ನಾ ತಿಳಕೊಂಡೆ, ನನಗೆ ಬೇಕಾದ್ದ ಗಂಡನ ಮಾಡಿಕೊಂಡೆ" ಎನ್ನುವ ಹುಡುಗಿ, ಶಿಶುನಾಳ ದೇವರನ್ನು ವರಿಸಿದ ಹುಡುಗಿ....

ನನ್ನ ಕಾದಂಬರಿಯ ವಸ್ತು ಇದಲ್ಲ, ತಿಳಕೊಳ್ಳುವ ರೀತಿ.... ಇದು, ಅಷ್ಟೆ.


ಕೊನೇ 'ಕಿಕ್'



ಅದೂಇದೂ ಮಾತಾಡುತ್ತಾ "ಈಚೆಗೆ ಬಂದಿದೆಯಂತಲ್ಲ ಈ ಎಸ್.ಎಲ್. ಭೈರಪ್ಪನವರ ಕಾದಂಬರಿ 'ಅಂಚು'- ಅದು ಹೇಗಿದೆ?" ಅಂದೆ.

"ತುಂಬ ಸೆಕ್ಸ್...ಆತನ ಗೋಜಲು ಶೈಲಿಯಲ್ಲಿ ಈ ಲೈಂಗಿಕತೆ ವಿಚಿತ್ರವಾಗಿ ಕಾಣುತ್ತೆ. ಅದನ್ನು ಕಾದಂಬರಿ ಎನ್ನುವುದಕ್ಕಿಂತ 'ಕೀದಂಬರಿ' ಅನ್ನಬಹುದು" ಅಂದ ವಿಮರ್ಶಕ.

ಚಪ್ಗೋಡು



ಭಯ
ಭಯ, ಭಯ
ನನ್ನುಟ್ಟೂರೆಂದರೆ ಇನ್ನಿಲ್ಲದ ಭಯ.

ಚೆಡ್ಡಿಲಾಡಿ ಕಟ್ಟಲುಬಾರದ
ಗೊಣ್ಣೆಮುಸುರೆ ತೆಗೆಯಲು ಬಾರದ
ಪಟೇಲನ ಎಳೆಯಪ್ಪೋರ
ಶತಾಯುಷಿ ನನ್ನಜ್ಜನನ್ನು
ಕರೆವ ಪರಿಯ ಕರ್ಕಶಧ್ವನಿ
ನನ್ನ ಕಿವಿದೆರೆಗೆ ಬದ್ದೀತೆಂಬ ಭಯ.

ಬಸ್ಸಿಳಿದು ಚಪ್ಗೋಡು ದಾಟಿ
ಊರ ಓಣಿಯಲಿ ಹಾದು ಹೋಗುವಾಗ
ನಗರದಲಿ ಯಾರೂ ಕ್ಯಾಬಿನ್ಗೆ ಅನ್ನದ
ನನ್ನ ಡ್ರೆಸ್ಸು ಸವರ್ಣೀಯ ಪೋರಿಗಳ ಕಣ್ಣುಕುಕ್ಕಿ
ಓ.... ಇವ್ನ.... ಇವ್ನ ಮಗ ಅಲ್ವಾ....!

ಎಂಬ ಬಿಂಕದೋರೆನೋಟಕ್ಕೆ ಉರಿದೋದೆನೆಂಬ ಭಯ.


ದಸಂಸದ ಹೆಡ್ಬಾಸ್ ತ್ಯಾಗಪ್ಪರೂ
ಏನೇ ರಸಭರಿತ ಭಾಷಣ ಜಡಿದರೂ
ಅದ ತನ್ನಂಡಿಗೆ ಸೀಟೆಸೆದು, ನಮಗೆಲ್ಲ ನೀರಿಳಿಸಿ
ಊರೊಳ್ಗೆ ಇಕ್ಕಿಸಿಕೊಂಡು ಬರುವ
ಎಲೆಅಡಿಕೆ ನವರಸಪ್ಪನ
ಭಂಗಿ ಕಂಡೀತೆಂಬ ಭಯ.

ಬೇಡ, ಊರಸಹವಾಸವೆ ಬೇಡೆಂದು
ಲಕ್ಷಾಂತರ ಕ್ಯೂನಲ್ಲಿರುವ MUDA ದ
ಮುವ್ವತ್ತು ನಲವತ್ತಕ್ಕೆ ಅರ್ಜಿ ಗುಜರಾಯಿಸಿ
ಕೂತು ತೂಕಡಿಸುತ್ತಿರುವ
ಭಯಮುಕ್ತಿಗಾಗಿ ಬುದ್ಧಗುರುವಿನ ನೆನಪಿನಲ್ಲಿ.

■ ಡಾ. ಎಂ.ಎಸ್. ಶೇಖರ್

ಬದುಕಿನ ಪಯಣ ನಿಲ್ಲಿಸಿದ ಮನೋಹರ

ಮೂಡಣದಿ ಸೂರ್ಯ ಮೂಡಿ ಬರುವ ಮುನ್ನವೇ ನನ್ನೂರಿನ ಹಾದಿಯಲ್ಲ ಕೆಂಪಾಗಿತ್ತು... ಹೆತ್ತ ಕರುಳಿನ ರೋದನಕ್ಕೆ 'ಖಾಕಿ'ಧಾರಿಗಳ ಕಣ್ಣಾಲಿಗಳು ತೇವವಾಗಿದ್ದವು. ಬಂದು ನಮಿಸಿ ನಿರ್ಗಮಿಸುವವರ ಮೇಲೆ ಅರೆಗಣ್ಣಿನ ದೃಷ್ಟಿ ನೆಟ್ಟಿದ್ದವು. ಚಿಕ್ಕಮಗಳೂರಿನ ಮಾವಿನ ಕೊಪ್ಪಲಿನಲ್ಲಿ ಹುತಾತ್ಮರಾದವರಲ್ಲಿ ಮನೋಹರ ಕೂಡ ಒಬ್ಬ. ನಕ್ಸಲ್ ಹಣೆಪಟ್ಟಿಯಲ್ಲಿ ಹತ್ಯೆಯಾದವರ ಸಾಲಿಗೆ ಈತನೂ ಸೇರಿ ಹೋದ. ಹೆತ್ತವರ ಹೊಂಗನಸುಗಳಿಗೆ ಬೊಬ್ಬುದಿಯನೆರಚಿ ಸಶಸ್ತ್ರ ಹೋರಾಟದಿಂದ ಜಗತ್ತನ್ನೆ ಗೆಲ್ಲುವೆನೆಂಬ ಭ್ರಮೆಗೆ ಬಿದ್ದು ಬದುಕಿನ ಅರ್ಧದಾರಿಯಲ್ಲಿಯೆ ಪಯಣ ನಿಲ್ಲಿಸಿದಾತನಿಗೆ ಬದುಕು ಹೀಗೆ ಮುಗಿಯುತ್ತದೆ ಎಂದು ಗೊತ್ತಿರಲಿಲ್ಲವೇ? ಅದು ಬಿಜೆಪಿಯಂತಹ ರಕ್ತಪಿಪಾಸು ಪಕ್ಷ ಅಧಿಕಾರಕ್ಕೆ ಬಂದ ಸಮಯದಲ್ಲಿ.



ರಸಗೊಬ್ಬರ ಕೇಳಿದವರನ್ನೆ ಗೋಲಿಬಾರ್ ಮಾಡಿ ಬಾಯಿ ಮುಚ್ಚಿಸುವ ಸರ್ಕಾರ, ಶೋಷಿತರ ಪರವಾಗಿ ಬಂದೂಕು ಹಿಡಿದವರನ್ನು ಬಿಡುತ್ತದೆಯೇ? ಮೊದಲ ಶತದಿನವನ್ನು ಸಾವಿನ ಸೂತಕದಲ್ಲಿ ಕಳೆದ ಯಡ್ಡಿ ಸರ್ಕಾರ ಎರಡನೆ ಶತದಿನದ ಆಚರಣೆಗೆ 'ನರಬಲಿ' ಪಡೆದು ಸನ್ನದ್ಧವಾಗಿದೆ.


ವಿಧಾನಸೌಧವನ್ನೇ ಹಣಗಳಿಸುವ ಅಡ್ಡೆಯನ್ನಾಗಿ ಮಾಡಿಕೊಂಡ ಭ್ರಷ್ಟ ರಾಜಕಾರಣಿಗಳಿಗೆ, ಮುಖ್ಯಮಂತ್ರಿಯ ಮಕ್ಕಳಿಗೆ ರಾಜಮರ್ಯಾದೆ. ಹೆದ್ದಾರಿಯಲ್ಲಿ ನಿಂತು ಸಾರ್ವಜನಿಕರಿಂದ ಹಣ ಸುಲಿಯುವ ಪೊಲೀಸ್, ಸಾರಿಗೆ ಅಧಿಕಾರಿಗಳಿಗೆ ಕಾನೂನು ರಕ್ಷಣೆ. ಜಾತಿ, ಧರ್ಮಗಳ ಆಧಾರದ ಮೇಲೆ ಸಮಾಜವನ್ನು ಒಡೆಯುವ ಧರ್ಮಾಂಧರಿಗೆ ಪ್ರಜಾಪ್ರಭುತ್ವದಲ್ಲಿ ಬಹುದೊಡ್ಡ ಸ್ಥಾನಮಾನ. ಆದರೆ ಜೀವನದಲ್ಲಿ ಸಮಾನತೆಯ ಕನಸು ಕಾಣುವವರಿಗೆ ಮಾತ್ರ ಬಂದೂಕಿನೇಟು.

ಉಚಿತ ವಿದ್ಯುತ್ ನೀಡುತ್ತೇನೆಂದ ಯಡ್ಡಿಗೆ, ದುಡ್ಡು ಕೊಟ್ಟರೂ ವಿದ್ಯುತ್ ದೊರೆಯದಂತೆ ಮಾಡಿದ ಇಂಧನ ಸಚಿವ ಈಶ್ವರಿ, ಇರುವ ಶಿಕ್ಷಣ ಪದ್ಧತಿಯನ್ನು ಅಧ್ವಾನಗೊಳಿಸಲು ಹೊರಟ ಕಾಗೇರಿ, ಇವರಿಂದ ಕರ್ನಾಟಕ ಮುಕ್ತಿಗೊಳ್ಳುವುದು ಯಾವಾಗ? ರಾಜ್ಯಕ್ಕೆ ಅಂಟಿರುವ ಈ ಶನಿಗಳು ತೊಲಗಿದರೆ ಸಾಕು.

-ಮಂಜಣ್ಣ ಸೊರಬ

ಡಿಸೆಂಬರ್ 3 ರ ತಮ್ಮ ಪತ್ರಿಕೆಯ ಸಂಚಿಕೆಯಲ್ಲಿ 'ಮೈಸೂರು ಸೋಪ್ಸ್' ಕಾರ್ಖಾನೆಯ ವಿಚಾರವಾಗಿ ಪ್ರಕಟಿಸಿರುವ ನೈಜ ವರದಿಯನ್ನು ಓದಿ ನಮಗೆ ಬಹಳ ಸಂತೋಷವಾಯಿತು. ಈ ಕಾರ್ಖಾನೆ ಮಹಾಲಕ್ಷ್ಮಿಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ನಾವು ನಿಮ್ಮ ಜೊತೆಯಿದ್ದು ಕಾರ್ಖಾನೆಯನ್ನು ಉಳಿಸಲು ಕರ್ನಾಟಕದ ನೆಲ, ಜಲ, ಬೇರೆ ರಾಜ್ಯದವರ ಪಾಲಾಗದಂತೆ ನೋಡಿಕೊಳ್ಳುತ್ತೇವೆ. ಈ ಕುರಿತು ತಮ್ಮ ಪತ್ರಿಕೆಯಲ್ಲಿ ವರದಿ ಮಾಡಿರುವುದಕ್ಕೆ ತಮಗೂ ತಮ್ಮ ವರದಿಗಾರರಿಗೂ ಅಭಿನಂದನೆಯನ್ನು ಸಲ್ಲಿಸುತ್ತೇನೆ.

-ಕೆ. ಗೋಪಾಲಯ್ಯ, ರಾಜ್ಯ ಪ್ರಧಾನ ಕಾರ್ಯದರ್ಶಿ,
ಜನತಾದಳ (ಜಾತ್ಯತೀತ),
ಬೆಂಗಳೂರು



2008 ನವೆಂಬರ್ 19 ರ ಸಂಚಿಕೆಯ 'ಕಂಡಹಾಗೆ' ನನ್ನನ್ನು ಸುಮಾರು 56 ವರ್ಷಗಳಷ್ಟು ಹಿಂದಕ್ಕೆ ತಳ್ಳಿತು.

ಹೈಸ್ಕೂಲಿನಲ್ಲಿ ಕಲಿಯುತ್ತಿದ್ದಾಗ (1952-53) ಇಂಗ್ಲಿಷ್ ಪಠ್ಯಪುಸ್ತಕದಲ್ಲಿ 'ಮಗಳಿಗೆ ತಂದೆಯ ಓಲೆಗಳು' ಎನ್ನುವ ಪಾಠವಿತ್ತು (letters to daughter). ಆಗ ಭಾರತದ ಪ್ರಧಾನಿಯಾಗಿದ್ದ ಪಂಡಿತ್ ಜವಾಹರಲಾಲ್ ನೆಹರೂರವರು ತಮ್ಮ ಮಗಳು ಇಂದಿರೆ (ಪ್ರಿಯದರ್ಶಿನಿ)ಗೆ ಜೈಲಿನಿಂದ ಬರೆದಿದ್ದ ಪತ್ರಗಳವು ಎಂದು ನಮ್ಮ ಅಧ್ಯಾಪಕರು ಹೇಳಿದ್ದರು.

"ನಿನಗೆ ನೋಡುವ ಕಣ್ಣುಗಳಿದ್ದರೆ ಕೇಳುವ ಕಿವಿಗಳಿದ್ದರೆ ಕೇವಲ ಒಂದು ಮಳಲ ಕಣ (ಹರಳು)ವೂ ತನ್ನ ಆತ್ಮಕತೆಯನ್ನು ಹೇಳುತ್ತದೆ" ಎನ್ನುವುದು ಪಾಠದ ಆರಂಭದ ವಾಕ್ಯ.

ಅಟಲ್ ಬಿಹಾರಿ ವಾಜಪೇಯಿಯವರು ಪ್ರಧಾನಿಯಾಗಿದ್ದಾಗ "ಭಾರತವು ಪ್ರಕಾಶಿಸುತ್ತಿದೆ" ಎಂದು ವಾರ್ತಾ ಪತ್ರಿಕೆಗಳಲ್ಲಿ ಓದಿದ ನೆನಪು.

ಪ್ರಚಲಿತ ರಾಜಕೀಯ, ಸಾಮಾಜಿಕ ವಿದ್ಯಮಾನಗಳು ಏನನ್ನು ತೋರಿಸುತ್ತವೆ? ಏನನ್ನು ಕೇಳಿಸುತ್ತವೆ? ಎನ್ನುವ ಚಿತ್ರಣವು ಪ್ರಸ್ತುತ ಪತ್ರಿಕೆಯಲ್ಲಿದೆ. ಓದುವ ಕಣ್ಣು ಗ್ರಹಿಸುವ ಮನಸ್ಸುಗಳು ಬೇಕು, ಅಷ್ಟೆ!

ಪತ್ರಿಕಾ ಬಳಗಕ್ಕೆ ಧನ್ಯವಾದಗಳು.

-ಪಿ. ಗೋಕುಲ್‌ದಾಸ್, ಮಂಗಳೂರು

ನವೆಂಬರ್ 12 ರ ಸಂಚಿಕೆಯಲ್ಲಿ ಪ್ರಕಟಿಸಿದ ಬಿಡಿಎ ಹಗಲು ದರೋಡೆ ವರದಿ ನೂರಕ್ಕೆ ನೂರರಷ್ಟು ಸತ್ಯವಾಗಿದೆ. ಬಿಡಿಎ ನೌಕರರ ಸಂಘಕ್ಕೆ ಚಿಟ್ಟೇಗೌಡ ಎಂಬಾತ ಅಧ್ಯಕ್ಷರಾಗಿದ್ದು, ಸಂಘದ ಸುಮಾರು ಸದಸ್ಯರಿಗೆ ನಿಯಮಾನುಸಾರ ನಿವೇಶನಗಳನ್ನು ಹಂಚಿಲ್ಲ. ಬದಲಾಗಿ ತನ್ನದೇ ಬಳಗಕ್ಕೆ-ಅಂದರೆ ನೆಂಟರಿಷ್ಟರಿಗೆ, ಸ್ನೇಹಿತರಿಗೆ ಮತ್ತು ತನ್ನ ತಾಳಕ್ಕೆ ಕುಣಿಯುವ ಮತ್ತು ಆಮಿಷಗಳಿಗೆ ನಾಲಿಗೆ ಚಾಚುವ ಅಧಿಕಾರಿಗಳಿಗೆ-ನಿವೇಶನಗಳನ್ನು ಹಂಚಿದ್ದಾನೆ. ಹಾಗೆಯೇ ಇತರೆ ಖಾಸಗಿ ವ್ಯಕ್ತಿಗಳಿಗೆ ನಿವೇಶನಗಳನ್ನು ಮಾರಾಟ ಮಾಡಿದ್ದು, ಸಂಘಕ್ಕೆ ಎರಡು ವರ್ಷಗಳ ಹಿಂದೆಯೇ ಲಕ್ಷಾಂತರ ರೂಪಾಯಿ ಹಣ ಸಾಲ ಮಾಡಿ ಕೊಟ್ಟಿದ್ದ ನೈಜ ಸದಸ್ಯರಿಗೆ ನಿವೇಶನ ಹಂಚಿಲ್ಲ.

ಬಿಡಿಎ ನಿವೇಶನಗಳನ್ನು ಪಡೆಯಬೇಕಾದ ವ್ಯಕ್ತಿಗಳು ಒಂದು ಕುಟುಂಬದ ಒಬ್ಬ ವ್ಯಕ್ತಿಗೆ ಒಂದೇ ನಿವೇಶನಕ್ಕೆ ನಿಯಮ ಪ್ರಕಾರ ಅರ್ಹನಾಗಿರುತ್ತಾನೆ. ಆದರೆ ಇಲ್ಲಿನ ಅನೇಕ ವ್ಯಕ್ತಿಗಳಿಗೆ 2-3 ನಿವೇಶನಗಳು ಮತ್ತು 2-3 ಮನೆಗಳಿದ್ದರೂ ಸಹ ಅವರಿಗೆ ಸೈಟುಗಳನ್ನು ಕೊಡಲಾಗಿದೆ.

ಚಿಟ್ಟೇಗೌಡನ ಈ ಅಕ್ರಮ ದಂಧೆ ಈಗಲಾದರೂ ಅಧಿಕಾರಿಗಳ ಗಮನಕ್ಕೆ ಬರುತ್ತದೆಂಬ ಆಶೆಯಿಂದ,

-ಡಿ.ಟಿ. ಕೃಷ್ಣೇಗೌಡ,
ಅಪರ ಕಾನೂನು ಅಧಿಕಾರಿಗಳು
ಬಿಡಿಎ, ಬೆಂಗಳೂರು

ಮಹಿಳೆಯರಿಗಿಂತ ಪುರುಷರು ಯಾಕೆ 'ದಿಲ್‌ಖುಷ್' ಆಗಿರುತ್ತಾರೆ?



* ಮದುವೆಯಾದರೂ, ಆನಂತರ ವಿಚ್ಛೇದನ ಪಡೆದರೂ ತಮ್ಮ ಹೆಸರನ್ನು ಬದಲಿಸಿಕೊಳ್ಳಬೇಕಿಲ್ಲ.
* ಗರ್ಭ ಧರಿಸುವ ಅಪಾಯ ಎಂದೂ ಎದುರಾಗುವುದಿಲ್ಲ.
* ಎಲ್ಲಿ ಬೇಕೆಂದರಲ್ಲಿ ಸು ಸು ಮಾಡಬಹುದು.
* ಮಹಿಳೆಯರು ಮಾಡುವಷ್ಟೇ ಕೆಲಸಕ್ಕೆ ಹೆಚ್ಚು ಸಂಬಳ.
* ಮುಖದ ಮೇಲಿನ ಸುಕ್ಕುಗಳು ಪುರುಷರ ವ್ಯಕ್ತಿತ್ವಕ್ಕೆ ಒಂದು ಹೊಸ ಕಳೆ ಕೊಡುತ್ತದೆ.
* 30 ಸೆಕೆಂಡ್‌ಗಳಲ್ಲಿ ಫೋನ್ ಸಂಭಾಷಣೆಗಳು ಅಂತ್ಯಗೊಳ್ಳುತ್ತವೆ.
* ಐದು ದಿನದ ರಜೆ ಮೇಲೆ ಹೋದರೂ ಒಂದೇ ಒಂದು ಸೂಟ್‌ಕೇಸ್ ಸಾಕು.
* ಕಿಂಚಿತ್ತು ಸೂಕ್ಷ್ಮತೆ ವ್ಯಕ್ತಪಡಿಸಿದರೂ ಅಭಿನಂದನೆಗಳ ಮಹಾಪೂರವೇ ಹರಿದುಬರುತ್ತದೆ.
* ಮೂರು ಜೊತೆ ಪಾದರಕ್ಷೆಗಳೇ ಬೇಕಾದಷ್ಟು ಅನ್ನಿಸುತ್ತದೆ.
* ದಶಕಗಳ ಕಾಲ ಅದೇ ಕ್ಷೌರಿಕನ ಹತ್ತಿರ ಹೇರ್ ಕಟ್ ಮಾಡಿಸಿಕೊಂಡೇ ಜೀವನ ಸಾಗುತ್ತದೆ.
* ಬಟ್ಟೆ ಮೇಲಿನ ಸುಕ್ಕುಗಳು ಪುರುಷರ ಕಣ್ಣಿಗೆ ಕಾಣಿಸುವುದಿಲ್ಲ.
* ಪುರುಷರು ಮುಖದ ಮೇಲಿನ ಕೂದಲನ್ನು ಮಾತ್ರ ಶೇವ್ ಮಾಡಿದರೆ ಸಾಕು.
* ಹೊಸ ಆಟಿಕೆಗಳೊಂದಿಗೆ ವೃದ್ಧಾಪ್ಯದವರೆಗೂ ಆಟವಾಡಬಹುದು.
* ಒಂದೇ ಬಣ್ಣದ ಒಂದೇ ವಾಲೆಟ್ ಇದ್ದರೆ ಸಾಕು.
* ಮೀಸೆ ಹೊಂದಿರಬೇಕೊ, ಬೇಡವೊ ಎಂಬ ಆಯ್ಕೆ ಇದ್ದೇ ಇರುತ್ತದೆ.



ಸತ್ಯವಚನ

ತನ್ನ ಮಗನ ಸಾವಿನಿಂದ ತುಂಬಾ ದುಃಖಿತಳಾಗಿದ್ದ ತಾಯಿ ಸಾಂತ್ವನಕ್ಕಾಗಿ ಗುರುಗಳನ್ನು ಮಾತನಾಡಿಸಲು ಬಂದಳು.

ಆಕೆ ಕಣ್ಣೀರಿಡುತ್ತಾ ತನ್ನ ತೀವ್ರ ವ್ಯಥೆಯನ್ನು ತೋಡಿಕೊಂಡದ್ದನ್ನು ಗುರುಗಳು ತಾಳ್ಮೆಯಿಂದ ಆಲಿಸಿದರು.

ತಾಯಿ ತನ್ನ ಮಾತು ಮುಗಿಸಿದ ನಂತರ ಗುರುಗಳು ಮೆಲುದನಿಯಲ್ಲಿ ಆಕೆಗೆ ಹೇಳಿದರು : "ತಾಯಿ, ನನ್ನಿಂದ ನಿನ್ನ ಕಣ್ಣೀರನ್ನು ಒರೆಸಲಾಗುವುದಿಲ್ಲ ಬದಲಾಗಿ ನಿನ್ನ ಕಣ್ಣೀರನ್ನು ಹೇಗೆ ಪವಿತ್ರಗೊಳಿಸಬಹುದು ಎಂದಷ್ಟೇ ಹೇಳಿಕೊಡಬಲ್ಲೆ."



ಶಿಷ್ಯಂದಿರೊಂದಿಗೆ ಗುರುಗಳ ಗುದ್ದಾಟ



ದಯಾಳ್ ತನ್ನ ಹ... ಗುರು ಎಸ್. ಮಹೇಂದ... ಬಳಿಯಿದ್ದ ಕಥೆಯನ್ನು ಅಬೇಸ್ ಮಾಡಿ, ಅದನ್ನು 'ಸರ್ಕಸ್' ಎಂಬ ಚಿತ್ರದಲ್ಲಿ ಉಪಯೋಗಿಸಿಕೊಳ್ಳಲು ರೆಡಿಯಾ... ಕೊನೆಗೆ ಫಿಲಂ ಛೇಂಬರ್‌ನವರಿಂದ ಕ್ಯಾಕರಿಸಿ ಉಗಿ... ಕೊಂಡು ಒಂದೂವರೆ ಲಕ್ಷ ರೂಪಾಯಿಯ ದಂಡವ... ಕಟ್ಟಿದ್ದು ಕಳೆದ ವಾರದ ಸುದ್ದಿ.

ಈ ವಾರದ ಸುದ್ದಿ ಏನೆಂದರೆ 'ಸರ್ಕಸ್' ಮಹೇಂದ... ಅವರ ಅಸಲಿ ಕತೆ ಅಲ್ಲವಂತೆ. ಬದಲಾಗಿ ಮಹೇಂದ... ಅದನ್ನು ಯಾವುದೋ ಇಂಗ್ಲೀಷ್ ಚಿತ್ರದಿಂದ ಕಟಾ... ಮಾಡಿಟ್ಟಿದ್ದರಂತೆ. ಗುರು ಮಹೇಂದರ್ ಚೋರಿಟ್ಟ... ಕಥೆಯನ್ನೇ ಶಿಷ್ಯ ದಯಾಳ್ ಕದಿಯುತ್ತಾನೆಂದರೆ ಈ... ಇನ್ನೆಂಥಾ ಚಾಂಡಾಳನಿರಬೇಕು? ಎಂದು ಗಾಂಧಿನಗರದವರು ಮುಸಿಮುಸಿ ನಗುತ್ತಿದ್ದಾರೆ.




ಅದೇಕೋ ಏನೋ, ಕಥೆ ವಿಚಾರದಲ್ಲಿ ಮೊದಲಿನಿಂದಲೂ ಕನ್ನಡ ಚಿತ್ರರಂಗದಲ್ಲಿ ಗುರು ಶಿಷ್ಯರ ನಡುವೆ ಹಳೇ ರಗಳೆ ಇದದ್ದೇ. ವರ್ಷದ ಹಿಂದಷ್ಟೇ ಎಸ್.ವಿ. ರಾಜೇಂದ್ರ ಸಿಂಗ್ ಬಾಬು 'ನನ್ನ ಮಾಜಿ ಶಿಷ್ಯ ಶಶಾಂಕ್ ನಾನು ತಯಾರಿಸಿದ್ದ ಕತೆಯನ್ನೇ ಕದ... 'ಮೊಗ್ಗಿನ ಮನಸು' ಚಿತ್ರ ಮಾಡಿದ್ದಾನೆ' ಎಂದು ಎಗರಾ... ದ್ದರು. ಆಗಲೂ ಹಲವು ಜನರಿಗೆ ಗೊತ್ತಾಗಿದ್ದೆಂದ... ಸಿಂಗ್ ಬಾಬು ಕೂಡ ಆ ಕಥೆಯನ್ನು ಯಾವುದೋ... ವಿದೇಶೀ ಚಿತ್ರವೊಂದರಿಂದ ಕಡ ತಂದಿದ್ದರು ಎಂಬುದು...



ಗುರುಶಿಷ್ಯರ ಇಂತ... ಜಗಳಗಳಿಂದಾಗಿಯೆ... 'ದುನಿಯಾ' ಸೂರಿ ಒಂದ... ಹೊಸ ತಂತ್ರವನ್ನು ಕಾಯ... ರೂಪಕ್ಕೆ ತಂದಿದ್ದಾರಂತ... ಅವರು ಚಿತ್ರದ ಕತೆ ಮತ್ತು... ಡೈಲಾಗ್‌ಗಳನ್ನು ಬರೆಯು... ತ್ತಿರುವಾಗ ವೇಸ್ಟ್ ಆ... ಕಾಗದವನ್ನೂ ಸಣ್ಣಸಣ್ಣ... ತುಂಡಾಗಿ ಹರಿದುಹಾಕುತ್ತಾರಂತೆ. "ಹಾಗೆ ತುಂಡರಿಸಿದ... ಪೇಪರನ್ನು ಸೂರಿ ಮಡಚಿ ಬಾಯಿಗಿಟ್ಟು ನೀರ... ಕುಡಿದುಬಿಡುತ್ತಾರೆ" ಅನ್ನೋ ಗಾಸಿಪ್ಪುಗಳೂ ಕೇಳಿಬರುತ್ತಿವೆ... ಈ ಗಾಳಿ ಸುದ್ದಿ ಸೂರಿ ಬಗ್ಗೆ ಅಪಪ್ರಚಾರದಂತೆ ಕಂಡರೂ... ಅವರು ಬರೆದ ಕಥೆ, ಸಂಭಾಷಣೆಯನ್ನು ಚಿತ್ರೀಕರಣವಾಗು... ತನಕ ತಮ್ಮ ಶಿಷ್ಯಂದಿರ ಕೈಗೆ ಸಿಗದಂತೆ ನೋಡಿಕೊಳ್ಳುತ್ತಾ... ಅನ್ನೋದು ಮಾತ್ರ ದೇವರಾಣೆಗೂ ನಿಜ.


ಇಂಥ ಕಳ್ಳತನ, ಮನಸ್ತಾಪಗಳಾಗಬಾರದು ಎಂಬ... ಕಾರಣಕ್ಕೇ ಇರಬಹುದು ಸುನೀಲ್‌ಕುಮಾರ್ ದೇಸಾಯಿ... ಯಂಥ ನಿರ್ದೇಶಕರು ಕಥೆ, ಸ್ಕ್ರಿಪ್ಟು ಬರೆಯೋ ಗೋಜಿಗೆ... ಹೋಗದೆ ಫಾಸ್ಟ್ ಫುಡ್ ಥರಾ ಸ್ಪಾಟಲ್ಲೇ ಸ್ಟೋರಿಯ... ಕತ್ತನೆ, ಡೈಲಾಗುಗಳ ಬತ್ತನೆ ನಡೆಸೋದು!

'ಆಪ್ತಮಿತ್ರ'ನೇ ಅಂತಿಮ!



ದಕ್ಷಿಣಭಾರತದ ಸೂಪರ್‌ಸ್ಟಾರ್ ರಜನೀಕಾಂತ್ ಜೊತೆ ವಿಷ್ಣುವರ್ಧನ್ ನಟಿಸಲಿದ್ದಾರೆ ಎಂಬ ಸುದ್ದಿ ಈಗ ಟುಸ್ ಆಗಿದೆ. ಹೀಗಾಗಿ ವಿಷ್ಣುವರ್ಧನ್ ಅವರ 200ನೇ ಚಿತ್ರ ತಮಿಳು ಚಿತ್ರವಾಗದೆ ಕನ್ನಡದ 'ಆಪ್ತಮಿತ್ರ ಭಾಗ-2' ಆಗಲಿದೆ. ವಿಷ್ಣು-200 ಚಿತ್ರ ಆರಂಭವಾಗುವ ಮೊದಲೇ ಅನೇಕ ಸುದ್ದಿಗಳಿಗೆ ಗ್ರಾ... ವಾಗಿದೆ. ಅದರಲ್ಲಿ ಮುಖ್ಯವಾಗಿ ಈ ಚಿತ್ರದ ನಿರ್ಮಾಪ... ಯಾರು? ಮತ್ತು ಇದರ ನಿರ್ದೇಶಕ ಯಾರು? ಎಂಬುದ... ಆಗಿತ್ತು.

ಆದರೆ ಇತ್ತೀಚೆಗೆ ಕೇಳಿಬಂದಿರುವ ಸುದ್ದಿಯ ಪ್ರಕಾ... ಈ ಚಿತ್ರವನ್ನು ... 'ಆಪ್ತಮಿತ್ರ' ನಿರ್ದೇಶಿಸಿದ್ದ ವಾಸು ಅವರೇ ನಿರ್ದೇಶಿಸಲಿದ್ದಾರಂತೆ. ಅಲ್ಲಿ... ವಿಷ್ಣು ಅವರ 200ನೇ ಚಿತ್ರವನ್ನು ನಿರ್ಮಿಸಿ ನಿರ್ದೇಶಿ... ಬೇಕೆಂದುಕೊಂಡಿದ್ದ ನಾರಾಯಣ್ ಕನಸು ಭಗ್ನವಾದಂತಾ... ಗಿದೆ. ಇದಕ್ಕೆ 'ಚೈತ್ರದ ಚಂದ್ರಮ' ಚಿತ್ರದ ದಯನೀಯ ಸೋಲಂತೂ ಖಂಡಿತ ಕಾರಣವಲ್ಲ ಎನ್ನುತ್ತಿದ್ದಾರೆ ಹಲವ... ಗಾಂಧಿನಗರಿಗರು.



ಪೂಜಾ ಗಾಂಧಿಯ ಜಮಾನ ಮುಗೀತಾ?

"ಪೂಜಾ ಗಾಂಧಿಯ ಜಮಾನ ಮುಗೀತಾ?" ಎಂಬ ಮಾತು ಗಾಂಧಿ ನಗರದಿಂದ ಕೇಳಿಬರುತ್ತಿದೆ.

ಕಳೆದ ವರ್ಷ ಇದೇ ಗಾಂಧಿನಗರ ಪೂಜಾ ಗಾಂಧಿಯನ್ನು 'ಲಕ್ಕಿ ಸ್ಟಾರ್' ಎಂದು ಬ್ರಾಂಡ್ ಮಾಡಿತ್ತು, ಪೂಜಾ ಇಷ್ಟೊಂದು ಮೆರೆಯಲು ಕಾರಣಗಳೂ ಇದ್ದವು. ಒಂದೆಡೆ ಆಕೆ ಎಂಟ್ರಿ ಪಡೆದಾಗ ರಕ್ಷಿತಾ ಚಿತ್ರರಂಗಕ್ಕೆ ಗುಡ್‌ಬೈ ಹೇಳಲು ನಿರ್ಧರಿಸಿದ್ದಳು. ಇನ್ನೊಂದೆಡೆ ರಮ್ಯಾ ತಮಿಳು ಚಿತ್ರರಂಗದತ್ತ ಒಂದು ಕಾಲನ್ನು ಇರಿಸಿದ್ದಳು; ಅಷ್ಟೇ ಅಲ್ಲ 'ಮುಂಗಾರು ಮಳೆ' ಸೂಪರ್ ಹಿಟ್ ಆಗಿತ್ತು, ಮಾತ್ರವಲ್ಲ; ಈಕೆ ಯಾವ ಹಮ್ಮು ಬಿಮ್ಮು ಇಲ್ಲದೆ ನಾಯಕಿಯಾಗಿಯೂ, ಅತಿಥಿ ನಟಿಯಾಗಿಯೂ, ಐಟಂ ಸಾಂಗ್ ನರ್ತಕಿಯಾಗಿಯೂ ಕಾಣಿಸಿಕೊಂಡಳು. ಅದೇ ವೇಳೆ ಈಕೆ ಅತಿಥಿ ನಟಿಯಾಗಿ ಕಾಣಿಸಿಕೊಂಡ 'ಮಿಲನ' ಚಿತ್ರದ ಹಾಡು ಸೂಪರ್ ಹಿಟ್ ಆದ ನಂತರವಂತೂ ಈಕೆಗೆ ಎಲ್ಲಿಲ್ಲದ ಡಿಮ್ಯಾಂಡ್ ಸೃಷ್ಟಿಯಾಗಿತ್ತು.

ಹಾಗಂತ ಈ ವರ್ಷ ಈಕೆ ಸಂಪೂರ್ಣವಾಗಿ ನೆಲಕಚ್ಚಿದ್ದಾಳೆ ಎಂದರ್ಥವಲ್ಲ, ಈಕೆ ನಾಯಕಿಯಾಗಿ ನಟಿಸಿದ 'ತಾಜ್‌ಮಹಲ್' ನೂರು ದಿನ ಪೂರೈಸಿದೆ. ಈಕೆಯಿಂದಾಗಿ ನಾಯಕ ಅಜಯ್ ಮತ್ತು ನಿರ್ದೇಶಕ ಚಂದ್ರುಗೆ ಬ್ರೇಕ್ ಸಿಕ್ಕಿದೆ. ಮತ್ತೊಂದೆಡೆ 'ಬುದ್ಧಿವಂತ' ಚಿತ್ರದ ರೀಮಿಕ್ಸ್ 'ರವಿವರ್ಮನ....' ಹಾಡಿನಲ್ಲಿ ಉಪ್ಪಿ ಜೊತೆ ಪೂಜಾ ಅಭಿನಯಿಸಿದ್ದು ಕೂಡಾ ಸೂಪರ್‌ಹಿಟ್ ಆಗಿದೆ.


ಆದರೆ ಈ ಎರಡು ಚಿತ್ರಗಳ ಯಶಸ್ಸಿನ ಹೊರತಾಗಿಯೂ ಪೂಜಾ ಗಾಂಧಿ ಕ್ರೇಜ್ ಕಡಿಮೆಯಾಗಿದೆ ಎಂಬುದರಲ್ಲಿ ಸಂಶಯವೇ ಇಲ್ಲ, ಉದಾಹರಣೆಗೆ 'ಕೋಡಗನ ಕೋಳಿ ನುಂಗಿತ್ತಾ' ಚಿತ್ರದಲ್ಲಿ ಜಗ್ಗೇಶ್ ಜತೆ ಈಕೆ ನಟಿಸಿದ್ದಳು. ಅಷ್ಟೇ ಅಲ್ಲ, ಪಡ್ಡೆ ಹುಡುಗರನ್ನು ಆಕರ್ಷಿಸಲು ತನ್ನ ದೇಹಸಿರಿಯನ್ನು ಪ್ರದರ್ಶಿಸುವ ಉಡುಗೆಯಲ್ಲಿ ಕಾಣಿಸಿಕೊಂಡಿದ್ದಳು, ಆದರೂ ಜನ ಥಿಯೇಟರ್ ಕಡೆ ತಿರುಗಲೇ ಇಲ್ಲ, ಅದಾದನಂತರ ಪೂಜಾ 'ಮಹರ್ಷಿ' ಚಿತ್ರದಲ್ಲೂ ಮತ್ತೊಮ್ಮೆ ಪೂಜಾ ಉಡುಗೆಯಲ್ಲಿ ಕಾಣಿಸಿಕೊಂಡಿದ್ದಾಳೆ. ಆದರೆ ಆ ಚಿತ್ರವೂ ಬಾಕ್ಸಾಫೀಸ್‌ನಲ್ಲಿ ನೆಲಕಚ್ಚಿತು. ಈ ಕಾರಣಕ್ಕಾಗಿಯೇ ಈಕೆ ನಾಯಕಿಯಾಗಿ ನಟಿಸಿರುವ 'ಅನು' ಚಿತ್ರ ಬಿಡುಗಡೆಗೆ ಸಿದ್ಧವಾಗಿದ್ದರೂ ಅದನ್ನು ಖರೀದಿಸಲು ಹಂಚಿಕೆದಾರರು ಹಿಂಜರಿಯುತ್ತಿದ್ದಾರೆ.

ಬಹುಶಃ ಪೂಜಾ ತನ್ನ ಪಾತ್ರಗಳ ಆಯ್ಕೆಯಲ್ಲಿ ಎಡವಿದ್ದಾಳೆ ಎಂದರೆ ತಪ್ಪಾಗಲಾರದು. ಅಷ್ಟೇ ಅಲ್ಲ, ತನ್ನ ಮೈಮಾಟವನ್ನು ಕಾಪಾಡಿಕೊಳ್ಳುವಲ್ಲಿಯೂ ಈಕೆ ವಿಫಲವಾಗಿದ್ದಾಳೆ. 'ಮುಂಗಾರು ಮಳೆ'ಯಲ್ಲೇ ಸ್ವಲ್ಪ ದಪ್ಪಗಿದ್ದ ಪೂಜಾ ಈಗ ಊದಿಕೊಂಡು ಡಬ್ಬಲ್‌ಡಕ್ಕರ್ ತರಹ ಕಾಣಿಸುತ್ತಿದ್ದಾಳೆ. ಹೀಗಾಗಿ ಈಗ ಪಾಶ್ಚಾತ್ಯ ಉಡುಪುಗಳನ್ನು ಧರಿಸಿದಾಗ ಈಕೆಯನ್ನು ನೋಡುವುದೇ ತುಂಬಾ ಕಷ್ಟವಾಗಿದೆ.


'ಮುಂಗಾರು ಮಳೆ'ಯಿಂದ ಕನ್ನಡಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿ ಎರಡು ವರ್ಷಗಳ ಕಾಲ ಪೂಜಾ ಮೆರೆದಿದ್ದಳು. ಈಗ ಪೂಜಾ ಗಾಂಧಿ ನೇಪಥ್ಯಕ್ಕೆ ಸರಿಯುವ ಸಮಯ ಸನ್ನಿಹಿತವಾಗಿದೆ. ಇದರ ಸೂಚನೆಯನ್ನು ಅರಿತಿರುವ ಈಕೆ ತನ್ನ ತಂಗಿ ರಾಧಿಕಾ ಗಾಂಧಿಯನ್ನು ದೊಡ್ಡ ಸ್ಟಾರ್ ಮಾಡಲು ಈಗ ಹೆಣಗಾಡುತ್ತಿದ್ದಾಳೆ. ಅಕ್ಕ ಇಲ್ಲದಿದ್ದರೂ ಪರವಾಗಿಲ್ಲ ತಂಗಿಯೇ ಸಾಕು ಎಂದು ನಮ್ಮವರು ಮಣೆ ಹಾಕುತ್ತಾರೋ ನೋಡಬೇಕು.

■ ಶೆಣೈ

'ಗೆಳತಿ'ಯೊಂದಿಗೆ ಕಿಟ್ಟಿಯ ಪರೀಕ್ಷೆ!



ಮನೋಹರ್



ಕಿಟ್ಟಿ

'ಗಿರಿ', 'ಬೈಟು' ತರಹದ ಬೋರ್ಡಿಗಿಲ್ಲದ ಸಿನಿಮಾಗಳೊಂದಿಗೆ 'ಇಂತಿ ನಿನ್ನ ಪ್ರೀತಿಯ' ಎಂಬ ಮಹತ್ವಾಕಾಂಕ್ಷೆ ಚಿತ್ರದಲ್ಲೂ ಬಕ್ಕಾ ಬೋರಲು ಬಿದ್ದ ನಾಯಕ ನಟ ಶ್ರೀನಗರ ಕಿಟ್ಟಿ ಈಗ 'ಜನುಮದ ಗೆಳತಿ'ಯೊಂದಿಗೆ ಫೈನಲ್ ಎಕ್ಸಾಮಿಗೆ ಕುಳಿತಿದ್ದಾರೆ. ಸದ್ಯಕ್ಕೆ 'ಮಹರ್ಷಿ'ಯ ಸೋಲಿನಿಂದ ತನ್ನ ಕ್ರೇಜ್ ಕಳೆದುಕೊಂಡಿರುವ ಪೂಜಾ ಗಾಂಧಿಗೂ ಈ ಚಿತ್ರದ ಗೆಲುವು ಅನಿವಾರ್ಯವಾಗಿದೆ.

ಸಾಧಾರಣ ಯಶಸ್ಸು ಕಂಡ 'ಒರಟ ಐ ಲವ್ ಯೂ' ಮೂಲಕ ಚಿತ್ರನಿರ್ಮಾಣಕ್ಕೆ ಇಳಿದ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯವರ ಫ್ರೆಂಡ್ ಮನೋಹರ್ ಅವರಿಗೂ ಇದು ಎರಡನೇ ಸಿನಿಮಾ. ಇವರು ನಿರ್ಮಿಸಿರುವ ವಿಷ್ಣು ಅಭಿನಯದ ...' ಕೂಡ ಇನ್ನೇನು ತೆರೆಗೆ ಬರಲು ರೆಡಿಯಾಗಿರುವುದರಿಂದ ಮನೋಹರ್‌ಗೆ 'ಜನುಮದ ಗೆಳತಿ' ಒಲಿಯ...ಗಿದೆ. ಹಿಂದೆಮುಂದೆ ನೋಡದೆ 'ಒಳ್ಳೆ ಚಿತ್ರ ಮಾಡಬೇಕು' ಎಂದು ಹಣ ಸುರಿದಿರುವ ಮನೋಹರ್‌ರಂಥ ...ದಕನನ್ನು, ಕಿಟ್ಟಿಯಂಥ ಬಹುಮುಖ ಪ್ರತಿಭೆಯನ್ನು ಉಳಿಸಬೇಕಾದ ಜವಾಬ್ದಾರಿ 'ಗೆಳತಿ'ಯ ಮೇಲೆ ಬಿದ್ದಿದೆ.

ಜಗ್ಗಿ ಮಗ ಹೀರೋ ಅಂತೆ!



ಗುರುರಾಜ್




ಹಲವಾರು ದಿನಗಳಿಂದ ಜಗ್ಗೇಶ್ 'ನನ್ನ ಮಗನನ್ನು ಹೀರೋ ಮಾಡುತ್ತೇನೆ, ಆ ಚಿತ್ರವನ್ನು ಸ್ವತಃ ನಾನೇ ನಿರ್ಮಿಸಿ, ನಿರ್ದೇಶಿಸುತ್ತೇನೆ' ಎಂದು ಬೊಂಬಡಾ ಹೊಡೆದುಕೊಳ್ಳುತ್ತಿದ್ದರು. ತಮ್ಮ ಮುದ್ದುಮಗ ಗುರುರಾಜ್ ನಟನೆ ಕಲಿಯಲಿ ಎಂದು ಮುಂಬೈನಲ್ಲಿರುವ ಅನುಪಮ್ ಖೇರ್ ಅವರ ನಟನಾ ಶಾಲೆಗೂ ಸೇರಿಸಿದ್ದರು.


ಆದರೆ ಗುರುರಾಜ್ ನಟಿಸಲಿರುವ ಚಿತ್ರವನ್ನು ಜಗ್ಗೇಶ್ ನಿರ್ಮಿಸುತ್ತಿಲ್ಲ, ನಿರ್ದೇಶಿಸುತ್ತಿಲ್ಲ. ಬದಲಾಗಿ ಎಸ್ಟಾಬ್ಲಿಷ್ಡ್ ನಿರ್ದೇಶಕರೊಬ್ಬರ ಮಾರ್ಗದರ್ಶನದಲ್ಲಿ, ಎಸ್.ವಿ. ಬಾಬು ನಿರ್ಮಾಣದ ಚಿತ್ರದಲ್ಲಿ ಆತ ನಟಿಸಲಿದ್ದಾನೆ ಎಂಬ ಸುದ್ದಿ ಕೇಳಿಬಂದಿದೆ.

ಇದಕ್ಕೆ ಕಾರಣವಿದೆ. ಅದೇನೆಂದರೆ ಸದ್ಯಕ್ಕೆ ಜಗ್ಗೇಶ್ ಬಿಜೆಪಿಯ ಆಪರೇಷನ್ ಕ'ಮಲ' ದಲ್ಲಿ ಬಿದ್ದು ರಾಜಕಾರಣದಲ್ಲಿ ಸಿಕ್ಕಾಪಟ್ಟೆ ಬಿಜಿ ಆಗಿರುವುದು.

...ಣೇಶನ ಜಾಗಕ್ಕೆ ಅಜಯ್!



ಅಜಯ್



ಗೆದ್ದೆತ್ತಿನ ಬಾಲ ಹಿಡಿಯುವ ಗಾಂಧಿನಗರದವರ ಸಂಪ್ರದಾಯ ಮುಂದುವರೆದಿದೆ. ಕಳೆದೆರಡು ವರ್ಷಗಳಿಂದ ಕಾಮಿಡಿ ಗಣೇಶನನ್ನು 'ಇಂದ್ರ, ಚಂದ್ರ, ಗೋಲ್ಡು...' ಎಂದೆಲ್ಲಾ ಹೊಗಳಿ ಅಟ್ಟಕ್ಕೇರಿಸಿದ್ದ ಜನರೆಲ್ಲಾ ಈಗ ಗಣೇಶನ ಗುಂಗಿನಿಂದ ಹೊರಬಂದು ಮತ್ತೊಬ್ಬ ನಟನ ಬೆನ್ನತ್ತಿದ್ದಾರೆ.

ಈ ವರ್ಷ ಕನ್ನಡ ಚಿತ್ರರಂಗದಲ್ಲಿ ಮಣ್ಣುಪಾಲಾದ ಸುಮಾರು 170 ಕೋಟಿ ರೂಪಾಯಿಗಳಲ್ಲಿ ಗೋಲ್ಡನ್ ಸ್ಟಾರ್ ಗಣೇಶನದ್ದೇ ಹೆಚ್ಚಿನ ಶೇರು. ಗಣೇಶನನ್ನು ನಂಬಿ ಹಣ ಕಳಕೊಂಡ ಧೀರ ರಾಕ್‌ಲೈನ್ ವೆಂಕಟೇಶ್, ಕೊಬ್ರಿ ಮಂಜು, ಎಸ್.ವಿ. ಬಾಬುರಂಥವರೇ ಈಗ ಹಣೆಹಣೆ ಚಚ್ಚಿಕೊಳ್ಳುತ್ತಿದ್ದಾರೆ.

ಗಣೇಶನ ಜಾಗಕ್ಕೆ ಅಜಯ್

ಈ ವರ್ಷ ಸ್ಟಾರ್ ವ್ಯಾಲ್ಯೂ ಪಡೆದ ನಟನೆಂದರೆ 'ತಾಜ್‌ಮಹಲ್' ಚಿತ್ರದ ನಾಯಕ ಅಜಯ್. ಬರೀ ಒಂದು ಕೋಟಿ ರೂಪಾಯಿಯ ವೆಚ್ಚದಲ್ಲಿ ನಿರ್ಮಾಣಗೊಂಡ ಈ ಚಿತ್ರ ನಿರ್ಮಾಪಕನ ಮಡಿಲಿಗೆ ಸುರಿದಿರುವ ಲಾಭ ಸುಮಾರು 17 ಕೋಟಿ ರೂಪಾಯಿಗಳು. ಇದಲ್ಲದೆ ಚಿತ್ರದ ಡಬ್ಬಿಂಗ್ ರೈಟ್ಸು ಅಂತೆಲ್ಲಾ ನಿರ್ದೇಶಕ ಚಂದ್ರುಗೆ ಒಂದು ಕೋಟಿಗೂ ಅಧಿಕ ಲಾಭ ತಂದಿದೆ.

ಈಗ ಸಹಜವಾಗಿಯೇ ಚಿತ್ರರಂಗದ ಎಲ್ಲ ದೊಡ್ಡ ದೊಡ್ಡ ನಿರ್ಮಾಪಕರ ಕಣ್ಣು ಅಜಯ್ ಮೇಲೆ ಬಿದ್ದಿದೆ. ಈಗಾಗಲೇ ಅಣಜಿ ನಾಗರಾಜ್ ನಿರ್ಮಾಣದ 'ಜಾಜಿ ಮಲ್ಲಿಗೆ', ಚಂದ್ರು ನಿರ್ದೇಶನದ 'ಪ್ರೇಂ ಕಹಾನಿ'ಗಳಲ್ಲಿ ನಟಿಸುತ್ತಿರುವ ಅಜಯ್ ಮುಂದೆ ಏನಿಲ್ಲವೆಂದರೂ ಏಳೆಂಟು ಆಫರ್‌ಗಳಿವೆ. ಯಶಸ್ವಿ 'ಗಜ' ಚಿತ್ರದ ನಿರ್ದೇಶಕ ಮಾದೇಶ್ ಅವರು ರಿಮೇಕ್ ಚಿತ್ರವೊಂದು ಡಿಸೆಂಬರ್‌ನಲ್ಲಿ ಪ್ರಾರಂಭಿಸಲಿದ್ದು ಅದರಲ್ಲೂ ಅಜಯ್ ನಟಿಸುತ್ತಿದ್ದಾರೆ. ಬಹುಶಃ ಈ ಚಿತ್ರಕ್ಕೆ 'ಗುಬ್ಬಚ್ಚಿ ಗೂಡು' ಎಂಬ ಹೆಸರೇ ಅಂತಿಮವಾಗಬಹುದು. ಜೊತೆಗೆ ಓಂ ಪ್ರಕಾಶ್ ರಾವ್ ನಿರ್ದೇಶನದ ಚಿತ್ರವೊಂದಕ್ಕೆ ಅಜಯ್ ಈಗಾಗಲೇ ಸಹಿ ಹಾಕಿದ್ದಾನೆ.

ಇಷ್ಟೇ ಅಲ್ಲ, ರಾಕ್‌ಲೈನ್ ವೆಂಕಟೇಶ್, ಕನಕಪುರ ಶ್ರೀನಿವಾಸ್ ಹಾಗೂ ಕೊಬ್ರಿ ಮಂಜು ನಿರ್ಮಾಣದ ಚಿತ್ರಗಳಲ್ಲೂ ಈತನೇ ನಾಯಕನಂತೆ. 'ಗೋಲ್ಡ್' ಮೇಲೆ ಕೋಟಿ ಕೋಟಿ ಸುರಿದು ಪಾಪರ್ ಆಗುವುದಕ್ಕಿಂತ ಸ್ವಲ್ಪ ಚೌಕಾಶಿ ಮಾಡಿ ನಲವತ್ತು ಲಕ್ಷಕ್ಕೇ ಕೈಗೆಟುಕುತ್ತಿರುವ ಅಜಯ್‌ನನ್ನು ಹಾಕಿಕೊಂಡು ಸರಾಸರಿ ಒಂದೂವರೆ ಕೋಟಿಯೊಳಗೆ ಸಿನಿಮಾವನ್ನೇ ಮುಗಿಸಬಹುದು ಎಂಬ ಲೆಕ್ಕಾಚಾರ ನಿರ್ಮಾಪಕರದ್ದು.

ಹೀಗೆ ಕೋಟಿ ನಿರ್ಮಾಪಕರೆಲ್ಲಾ ಅಜಯ್‌ನ ಭುಜವೇರಿ ಕುಳಿತಿರುವುದನ್ನು ನೋಡಿದರೆ, ಬಹುಶಃ 2009ರಲ್ಲಿ ಗೋಲ್ಡನ್ ಸ್ಟಾರ್ ಗಣೇಶನ ಸ್ಥಾನಕ್ಕೆ ಈತನೇ ಬಂದರೂ ಆಶ್ಚರ್ಯವಿಲ್ಲ.

ಈಗ ಅಜಯ್‌ನ ಸ್ಟಾರ್ ವ್ಯಾಲ್ಯೂ ಹೆಚ್ಚುತ್ತಿದ್ದು ಅದರ ಲಾಭವನ್ನು ಪಡೆಯಲು ಮುಂದಾಗಿರುವವರಲ್ಲಿ ಈತ ನಟಿಸಿದ್ದ, ಎರಡೇ ದಿನಕ್ಕೇ ಎತ್ತಂಗಡಿಯಾಗಿದ್ದ 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು' ಎಂಬ ಪರಮ ದರಿದ್ರ ಸಿನಿಮಾದ ನಿರ್ಮಾಪಕ ಕೂಡ ಒಬ್ಬರು. ಇವರು ಈಗ ಈ ಚಿತ್ರವನ್ನು ಮತ್ತೊಮ್ಮೆ ರಿಲೀಸ್ ಮಾಡಲು ಸಜ್ಜಾಗುತ್ತಿದ್ದಾರೆ!

ಇವತ್ತು 'ರೈಸಿಂಗ್ ಸ್ಟಾರ್'ನಂತೆ ಕಾಣುತ್ತಿರುವ ಅಜಯ್ ಬರುವ ದಿನಗಳಲ್ಲಿ ಚಿತ್ರದ ಆಯ್ಕೆಯಲ್ಲಿ ಎಚ್ಚರ ವಹಿಸಬೇಕು. ಜೊತೆಗೆ ಉದ್ಯಮದವರೊಂದಿಗೆ ಯಾವುದೇ ಬಿಂಕ, ಬಿಗುಮಾನಗಳಿಲ್ಲದೆ ಈಗಿರುವಂತೇ ಉಳಿಯಬೇಕು.

ಕಳೆದ ಐದಾರು ವರ್ಷಗಳಿಂದ ಚಿತ್ರರಂಗದಲ್ಲಿದ್ದು ಹಲವಾರು ಸೋಲು-ಗೆಲುವುಗಳನ್ನು ಕಂಡಿರುವ ಅಜಯ್ ಯಶಸ್ಸನ್ನು ನೆತ್ತಿಗೇರಿಸಿಕೊಂಡು ಸ್ವಲ್ಪ ಯಾಮಾರಿದರೂ ಆತ ಮತ್ತೆ ಹಿಂದಕ್ಕೆ ಜಾರುವುದರಲ್ಲಿ ಅನುಮಾನವಿಲ್ಲ.

ಹಾಗಾಗುವುದಿಲ್ಲ ಎಂದು ಆಶಿಸೋಣ.

■ ಅರುಣ್.ಬಿ



ನಾನೇ ಸೂಪರ್ ಸ್ಟಾರ್ ಅಂದನಂತೆ ಲೂಜು!

ಈ ವರ್ಷ 'ತಾಜ್ ಮಹಲ್'ನ ಅಜಯ್‌ನನ್ನು ಬಿಟ್ಟರೆ, 'ನಂದ ಲವ್ಸ್ ನಂದಿತ' ಎಂಬ ಹಿಟ್ ಚಿತ್ರ ನೀಡಿದ ಯುವಕನೆಂದರೆ, ಅದು ಲೂಸ್ ಮಾದ ಅಲಿಯಾಸ್ ಯೋಗೀಶ.

ಈತ ಹೀರೋ ಆಗಿ ನಟಿಸಿದ ಮೊದಲ ಚಿತ್ರ ಜಯಭೇರಿ ಬಾರಿಸಿದ ನಂತರ 'ಅಂಬಾರಿ' ಮತ್ತು 'ಯೋಗಿ' ಸೇರಿದಂತೆ ನಾಲ್ಕು ಚಿತ್ರಗಳಿಗೆ ಸಹಿ ಹಾಕಿರುವ ಲೂಸ್ ಮಾದ ಈಗ ಸಖತ್ ಜೂಮ್‌ನಲ್ಲಿದ್ದಾನಲ್ಲದೆ, ತನ್ನ ಆಪ್ತರಲ್ಲಿ 'ಮುಂದಿನ ವರ್ಷ ನಾನೇ ಸೂಪರ್ ಸ್ಟಾರ್' ಎನ್ನುತ್ತಿದ್ದಾನಂತೆ.

ಇಷ್ಟರಲ್ಲೇ ಈತನ ಅಭಿಮಾನಿಗಳು ಯೋಗೀಶನಿಗೆ 'ಲೂಸ್ ಸ್ಟಾರ್' ಅನ್ನೋ ಬಿರುದನ್ನೂ ಕೊಡ್ತಾರಂತೆ! ■

ಕ್ಯಾಸೆಟ್‌ನಿಂದ ಎದ್ದುಬಂದ ಮಂಜುನಾಥ!





ಮೊನ್ನೆ ಪತ್ರಕರ್ತ ಸನತ್‌ಕುಮಾರ್ ನಿರ್ಮಿಸಿದ 'ಎದ್ದೇಳು ಮಂಜುನಾಥ' ಚಿತ್ರದ ಕ್ಯಾಸೆಟ್ ಬಿಡುಗಡೆ ಸಮಾರಂಭ ಪ್ರೆಸ್‌ಕ್ಲಬ್‌ನಲ್ಲಿ ವಿಜೃಂಭಣೆಯಿಂದ ನಡೆಯಿತು.

ಎರಡು ವರ್ಷಗಳ ಹಿಂದೆ ಇದೇ ಪ್ರೆಸ್‌ಕ್ಲಬ್‌ನಲ್ಲಿ ಈ ಚಿತ್ರವನ್ನು ಸನತ್‌ಕುಮಾರ್ ಘೋಷಿಸಿದ್ದರು. ಅಂದು ಈ ಚಿತ್ರದ ನಾಯಕ ಜಗ್ಗೇಶ್‌ಗೆ ಅಷ್ಟೇನೂ ಬೇಡಿಕೆಯಿರಲಿಲ್ಲ. ಆದರೂ ಇದು ಅವರ ವೃತ್ತಿ ಜೀವನದ 25ನೇ ವರ್ಷದ ಚಿತ್ರವೆಂದು ಪ್ರತಿಬಿಂಬಿಸಲಾಗಿತ್ತು. ಈ ಚಿತ್ರ ಮುಗಿಯುವುದರೊಳಗೆ ಜಗ್ಗೇಶ್ ಶಾಸಕರಾಗಿ, ಅನಂತರ ಮಾಜಿಯಾಗಿ, ಇದೀಗ ಕೆಎಸ್‌ಆರ್‌ಟಿಸಿ ಸಂಸ್ಥೆಯ ಉಪಾಧ್ಯಕ್ಷರಾಗಿ ಹೊಸ ಗೆಟಪ್‌ನಲ್ಲಿ ಕಾಣಿಸುತ್ತಿದ್ದಾರೆ.

ಕ್ಯಾಸೆಟ್ ಬಿಡುಗಡೆಗೆ ಯಾವುದೇ ತಾರೆಯರನ್ನಾಗಲಿ, ರಾಜಕಾರಣಿಗಳನ್ನಾಗಲಿ ಆಹ್ವಾನಿಸದೇ ಪತ್ರಕರ್ತ ಮಿತ್ರರಿಂದಲೇ ಕ್ಯಾಸೆಟ್ ಬಿಡುಗಡೆ ಮಾಡಿಸಿದ ನಿರ್ಮಾಪಕ ಸನತ್‌ಕುಮಾರ್ ಪತ್ರಕರ್ತರಿಗೆ ಗೌರವ ತೋರಿಸಿದರು. ಆದರೆ ಅನಂತರ ನಡೆದ ಪಾನ ಗೋಷ್ಠಿಯಲ್ಲಿ ಭಾಗವಹಿಸಿದ್ದ ಚಿತ್ರದ ನಿರ್ದೇಶಕ ಗುರುಪ್ರಸಾದ್ ಪತ್ರಕರ್ತರೆಲ್ಲರೂ ಕ್ಯಾಸೆಟ್‌ಅನ್ನು ಬಿಟ್ಟಿಯಾಗಿ ಪಡೆದುಕೊಳ್ಳುವ ಬದಲು ಕಾಸು ಕೊಟ್ಟು ಖರೀದಿಸಬೇಕು ಎಂದು ಅಪ್ಪಣೆ ಹೊರಡಿಸಿದರು. ಇವರ ಈ ವರ್ತನೆಗೆ ಬೇಸತ್ತ ಪತ್ರಕರ್ತರೆಲ್ಲರೂ ಹಣ ಕೊಟ್ಟು ಕ್ಯಾಸೆಟ್ ಪಡೆದುಕೊಂಡರು. ಆದರೆ ಹೀಗೆ ಹಣ ಪಡೆದ ಗುರುಪ್ರಸಾದ್ ಅದನ್ನು ಕ್ಯಾಸೆಟ್ ಖರೀದಿಸಿದ ಕಂಪೆನಿಗೆ ಇನ್ನೂ ತಲುಪಿಸಿಲ್ಲ ಎಂಬ ಸುದ್ದಿ ಇದೆ. 'ಮಠ'ದಿಂದ ಚಿತ್ರರಂಗಕ್ಕೆ ಬಂದ ಗುರು ಈ ರೀತಿ ಯದ್ವಾತದ್ವಾ ಮಾತಾಡುವುದರಲ್ಲಿ ನಂ 1. ಹೀಗಾಗಿ ಗುರುವಿನ ಈ ಮಾತನ್ನು ಯಾರೂ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ಅಂದು ಪಾನ ಗೋಷ್ಠಿಯಲ್ಲೂ ಸುಮಾರು ಒಂದು ಗಂಟೆ ಕಾಲ ಗುರು ಹೀಗೇ ಬೇಕಾಬಿಟ್ಟಿಯಾಗಿ ಮಾತನಾಡಿದರು. ಅದನ್ನೆಲ್ಲ ನಾವು ಇಲ್ಲಿ ಸೆನ್ಸಾರ್ ಮಾಡಿದ್ದೇವಷ್ಟೇ. ಅಂತೂ ಒಂದೇ ಸಮಾರಂಭದಲ್ಲಿ ಒಬ್ಬರು ಪತ್ರಕರ್ತರಿಗೆ ಆರತಿ ಮಾಡಿದರು; ಇನ್ನೊಬ್ಬರು ಮಂಗಳಾರತಿ ಮಾಡಿದರು.

ಗಂಗಾ ಕಾವೇ
ಬಂಡವಾಳಕ್ಕೂ ಕತ್ತ



ಕಳೆದೊಂದು ವರ್ಷದಿಂದ ನಿರಂತ ವಿವಾದಗಳಲ್ಲೇ ಮುಳುಗಿದ್ದ 'ಗಂಗಾ ಕಾ ಚಿತ್ರ ಈ ವಾರ ತೆರೆಕಂಡಿದೆ.

ಕನ್ನಡದಲ್ಲೇ ಬಂದಿದ್ದ 'ಉತ್ತರ ಧ್ರುವದಿಂ ಧ್ರುವಕೂ', ರವಿಚಂದ್ರನ್‌ರ 'ನಾನು ನನ್ ಹೆಂ ತೆಲುಗಿನ 'ದೇಶಂ ಮುದುರು' .... ಹೀಗೆ ಹಲ ಚಿತ್ರಗಳ ಧಾಟಿಯಲ್ಲೇ ಇರುವ ಈ ಚಿತ್ರದ ಕತೆ ನೋಡುಗರನ್ನು ಎಲ್ಲೂ ಕುತೂಹಲಕ್ಕೆ ದೂಡುವುದಿಲ್ಲ. ಬ ವೇಣು ಅವರ ಅದ್ಭುತ ಛಾಯಾಗ್ರಹಣ, ಗಂಗಾನದಿಯ ರಮ್ಯಮನೋಹರ ಫ್ರೇಮುಗಳು ಮನಸೂರೆಗೊಳಿಸ ಜೊತೆಗೆ ಕವಿತಾ ಲಂಕೇಶರ 'ತನನಂ ತನನಂ' ನಂತರ ಕೆ. ಕಲ್ಯಾಣ್ ಮತ್ತೊಮ್ಮೆ ಸಂಗೀತ ನಿರ್ದೇಶ ಮಿಂಚಿದ್ದಾರೆ.


'ಗಂಗಾ ಕಾವೇರಿ'ಯ ಡ್ರಾ ಬ್ಯಾಕ್ ಅದರ ನಾಯಕನಟ ಅಕ್ಷಯ್. ಯಾವ ಆ್ಯಂಗಲ್‌ನಿಂದ ನೋಡಿ ಅರ್ಧಂಭರ್ದ ಸುಲಿದಿಟ್ಟ ತೆಂಗಿನ ಕಾಯಿಯಂತೆ ಕಾಣುವ ಅಕ್ಷಯ್‌ನನ್ನು ಛಾಯಾಗ್ರಾಹಕ ವೇಣು ಎಲ್ಲೂ ಕ್ಲೋಸಪ್‌ನಲ್ಲಿ ತೋರಿಸದೆ, ವೈಡ್ ಆಂಗಲ್‌ನಲ್ಲೇ ತೋರಿಸಿರುವುದರಿಂದ ನೋಡುಗರಿಗೆ ಸ್ವಲ್ಪವಾದರೂ ರಿಲೀಫ್ ಸಿಗುತ್ತದೆ.



ಡಾ. ರಾಜ್‌ರೊಂದಿಗೆ ನಾಯಕಿಯಾಗಿದ್ದ ರೂಪಾದೇವಿ ಬಹಳ ವರ್ಷದ ನಂತರ ಮೊದಲ ಬಾರಿಗೆ ತಾಯಿಯಾಗಿ ಕಾಣಿಸಿಕೊಂಡಿದ್ದಾರೆ. ಇನ್ನು ಗಣೇಶ್ ಕಾಸರಗೋಡು ಮತ್ತು ಬಿ. ಗಣಪತಿ, ವಿಜಯಸಾರಥಿಯಂಥ ಹಿ ಪತ್ರಕರ್ತರ ಬೆಟಾಲಿಯನ್ನೇ ಚಿತ್ರದಲ್ಲಿದ್ದರೂ ಅದರಿಂದ ಏನೂ ಪ್ರಯೋಜನವಿಲ್ಲ.

ತನ್ನ ಪುತ್ರ ವ್ಯಾಮೋಹವನ್ನು ಬದಿಗೊತ್ತಿ ಬೇರೊಬ್ಬ ನಾಯಕನಟನನ್ನು ಹಾಕಿಕೊಂಡಿದ್ದರೆ, ನಿರ್ಮಾ ವೆಂಕಟಪ್ಪನವರಿಗೆ ಹಾಕಿದ ಬಂಡವಾಳವಾದರೂ ವಾಪಸ್ ಬರುತ್ತಿತ್ತು. ಆದರೆ ಈಗ ಅದೆಲ್ಲ 'ಗ ಕಾವೇರಿ'ಯರ ಪಾಲಾಗಿದೆ.

ಮಲೆಯಾಳಿ ಬಾಬುವಿನ
ಕನ್ನಡ ಪ್ರೇಮ!




"ಕನ್ನಡದ ಮಕ್ಕಳೆಲ್ಲ ಒಂದಾಗಿ ಬನ್ನಿ...." ಎಂದು ಮೊನ್ನೆ ನಿರ್ದೇಶಕ ದಿನೇಶ್‌ಬಾಬು ಅವರು ಕನ್ನಡ ಚಿತ್ರರಂಗದ ಗಣ್ಯರಿಗೆ ಕರೆ ನೀಡಿದ್ದಾರೆ. "ಕನ್ನಡ ಚಿತ್ರರಂಗ ಸುವರ್ಣ ಮಹೋತ್ಸವ ಆಚರಿಸುತ್ತಿರುವ ಈ ಶುಭ ಸಂದರ್ಭದಲ್ಲಿ ಕನ್ನಡಿಗರೆಲ್ಲ ಒಂದಾದರೆ ಅದೇ ದೊಡ್ಡ ಕೊಡುಗೆ, ಸ್ಮಾರಕ" ಎಂದಿದ್ದಾರೆ. ವಿಶೇಷವೆಂದರೆ ಈ ರೀತಿಯ ಆಲೋಚನೆ ಬಂದಿರುವುದು ನಮ್ಮ ಈ ಮಲೆಯಾಳಿ ಮನುಷ್ಯನಿಗೇ ವಿನಃ ಕನ್ನಡಿಗರಿಗಲ್ಲ.

ಬಾಬು ಮಾತಲ್ಲಿ ಅರ್ಥವಿದೆ. ಕೆಲ ತಿಂಗಳ ಹಿಂದೆ ರವಿಚಂದ್ರನ್ ಚಿತ್ರರಂಗದ ಎಲ್ಲಾ ನಾಯಕ-ನಾಯಕಿ, ಕಲಾವಿದರನ್ನು ಹಾಕಿಕೊಂಡು 'ಮದುವೆ ಮನೆ' ಎಂಬ ಅದ್ದೂರಿ ಚಿತ್ರ ಮಾಡಲು ಹೊರಟಿದ್ದರು. ಆಗ ನಮ್ಮವರೇ ತೆರೆಮರೆಯಲ್ಲಿದ್ದು 'ಮದುವೆ' ನಡೆಯದಂತೆ ನೋಡಿಕೊಂಡಿದ್ದರು. ಇಗ ಆ 'ಮದುವೆ'ಮನೆಯಲ್ಲಿ ಸೂತಕ ಕಳೆತುಂಬಿದೆ. ಆದ್ದರಿಂದ ಚಿತ್ರರಂಗದ ಎಲ್ಲರೂ ಮತ್ತೊಮ್ಮೆ ಜೊತೆಗೂಡುವ ಸಾಧ್ಯತೆಗಳು ಕಾಣಿಸುತ್ತಿಲ್ಲ.



ಚಿತ್ರರಂಗದಲ್ಲಿ ಒಗ್ಗಟ್ಟು ಇಲ್ಲ ಎಂಬುದಕ್ಕೆ ಇದೊಂದು ಪುಟ್ಟ ಉದಾಹರಣೆ. ಇಂತಹ ಕಥೆಗಳು ದಿನಕ್ಕೊಂದರಂತೆ ಗಾಂಧಿನಗರದಿಂದ ಕೇಳಿಬರುತ್ತಲೇ ಇದೆ.. ಇಂತಹ ಸಂದರ್ಭದಲ್ಲಿ ಚಿತ್ರರಂಗ ತನ್ನ ಅಮೃತ ಮಹೋತ್ಸವ ಆಚರಿಸಲು ಹೊರಟಿರುವುದು ಹಾಸ್ಯಾಸ್ಪದವೇ ಸರಿ. ಒಂದು ಅಪ್ರಿಯ ಆದರೂ ಅರ್ಥ ಪೂರ್ಣ ಸತ್ಯ ನುಡಿದ ಬಾಬುಗೆ ಅಭಿ ನಂದನೆಗಳು.

ಸಿಹಿಕಹಿ, ಕೊಬ್ಬರಿ ಮತ್ತು ವಿಷ್ಣು!



'ನಾನೇ ಬೇರೆ ನನ್ನ ಸ್ಟೈಲೇ ಬೇರೆ' - ಇದು ವಿಷ್ಣು ಅಭಿನಯದ ಸೆಟ್ಟೇರಲಿರುವ ಮುಂದಿನ ಚಿತ್ರ. ವಿಷ್ಣು ಪಟ್ಟದ ಶಿಷ್ಯ ಕೆ. ಮಂಜು ಈ ಚಿತ್ರವನ್ನು ನಿರ್ಮಿಸಲಿದ್ದು, ಮೊದಲ ಬಾರಿಗೆ ಕಿರುತೆರೆಯ ಹಾಸ್ಯ ಚಕ್ರವರ್ತಿ ಸಿಹಿಕಹಿ ಚಂದ್ರು ನಿರ್ದೇಶಿಸಲಿದ್ದಾರೆ ಎಂದು ಘೋಷಣೆಯಾಗಿತ್ತು. ಇದು ಹಾಸ್ಯ ಪ್ರಧಾನ ಕಥಾವಸ್ತು ಎಂದೂ ಅನೌನ್ಸ್ ಆಗಿತ್ತು.



ಆದರೆ ಈಗ ಈ ಚಿತ್ರದ ಸ್ವರೂಪದಲ್ಲಿ ಒಂದು ಸಣ್ಣ ಬದಲಾವಣೆಯಾಗಿದೆ. ಅದೇನೆಂದರೆ ಇಡೀ ಚಿತ್ರವನ್ನು ಹಾಸ್ಯದ ಬದಲು ಡಿಶುಂ ಡಿಶು ಮಸಾಲೆ ಚಿತ್ರವನ್ನಾಗಿ ನಿರ್ಮಿಸಲು ಮಂಜು ನಿರ್ಧರಿಸಿದ್ದಾರೆ. ಈ ಮಸಾಲೆ ಚಿತ್ರವನ ಹಾಸ್ಯ ಚಕ್ರವರ್ತಿ ಸಿಹಿಕಹಿ ಚಂದ್ರು ಅವರೇ ನಿರ್ದೇಶಿಸಲಿದ್ದಾರಂತೆ.

ಎಲ್ಲವೂ ನಿರ್ಧಾರವಾದ ನಂತರ ಈ ಬದಲಾವಣೆ ಯಾಕೆ? ಎಂದು ವಿಷ್ಣು ಮತ್ತು ಮಂಜು ಬಿಟ್ಟರೆ ಬೇರೆ ಯಾರಿಗೂ ಗೊತ್ತಿಲ್ಲ. ಹೀಗಾಗಿ ಸಿಹಿಕಹಿ ಚಂದ್ರು ಈಗ ವಿಷ್ಣುಗಾಗಿ ಹೊಸ ಕಥೆ ಹೆಣೆಯುವ ಕಾರ್ಯದಲ್ಲಿ ಮಗ್ನರಾಗಿದ್ದಾರೆ.

ಯಾಕೋ ಏನೋ, ಟಿ.ವಿ.ಯಿಂದ ಚಿತ್ರರಂಗಕ್ಕೆ ಬಂದವರಿಗೆಲ್ಲ ಇಲ್ಲಿ ಏನಾದರೂ ಒಂದು ಕಿರಿಕ್ ಎದುರಾಗುತ್ತಲೇ ಇರುತ್ತದ ಕಳೆದ ವರ್ಷ ಟಿ.ಎನ್. ಸೀತಾರಾಂ ಕೂಡ ರಮ್ಯಾಳನ್ನು ಹಾಕಿಕೊಂಡು 'ಮೀರ ಮಾಧವ ರಾಘವ' ಎಂಬ ಸಿನಿಮಾ ಮಾಡಿದಾಗಲೂ ಇಂತಹದ್ದೆ ಸಣ್ಣಪುಟ್ಟ ಕಿರಿಕ್‌ಗಳು ಎದುರಾಗಿದ್ದ

ಕುಂಬ್ಳೆ ಕುಣಿತ

ಮೊನ್ನೆ ತಾನೇ ಕ್ರಿಕೆಟ್ ಆಟಕ್ಕೆ ವಿದಾಯ ಹೇಳಿದ ಕನ್ನಡಿಗ ಅನಿಲ್ ಕುಂಬ್ಳೆ ಈಗ ಮುಖಕ್ಕೆ ಬಣ್ಣ ಹಚ್ಚಿಕೊಂಡು ಚಿತ್ರರಂಗಕ್ಕೆ ಪಾದಾರ್ಪಣೆ ಮಾಡುವ ಸುದ್ದಿ ಬಂದಿದೆ. ಈ ಸುದ್ದಿ ಕೇಳಿ ಕನ್ನಡಿಗರಾದ ನೀವೆಲ್ಲಾ ಸಂತೋಷಪಡುವ ಅಗತ್ಯವಿಲ್ಲ. ಯಾಕೆಂದರೆ ಅನಿಲ್ ಕುಂಬ್ಳೆ ನಟಿಸುತ್ತಿರುವುದು ಕನ್ನಡದಲ್ಲಲ್ಲ, ಹಿಂದಿ ಚಿತ್ರದಲ್ಲಿ.

ಕ್ರಿಕೆಟ್ ನಿರೂಪಕಿಯಾಗಿ ಕೋಟ್ಯಂತರ ಕ್ರಿಕೆಟ್ ಅಭಿಮಾನಿಗಳ ಹೃದಯಕ್ಕೆ ಲಗ್ಗೆಯಿಟ್ಟಿರುವ ಮಂದಿರಾ ಬೇದಿ ಜೊತೆ ಕುಂಬ್ಳೆ ಕುಣಿದು ಕುಪ್ಪಳಿಸಲಿದ್ದಾರೆ.

ಮಂದಿರಾ ತನ್ನ ವಿಶಿಷ್ಟ ಉಡುಪು ಮತ್ತು ಮಾತಿನ ಶೈಲಿಯಿಂದ ಎಲ್ಲರ ಗಮನ ಸೆಳೆದವಳು. ಕುಂಬ್ಳೆ ತನ್ನ ಜಂಟಲ್‌ಮನ್ ವರ್ತನೆಯಿಂದ ಎಲ್ಲರ ಮನ ಗೆದ್ದವರು. ಇವರಿಬ್ಬರ ಈ ಸಮಾಗಮ ಹೇಗಾಗುತ್ತೋ ನೋಡಬೇಕು.

ಕುಂಬ್ಳೆ ಕನ್ನಡ ಚಿತ್ರವೊಂದರಲ್ಲಿ ನಟಿಸಿದ್ದರೆ ಅದು ಅರ್ಥಪೂರ್ಣವಾಗಿರುತ್ತಿತ್ತು; ಆದರೆ ಕನ್ನಡ ಟಿವಿಗಳಿಗೂ ಸಂದರ್ಶನ ನೀಡದ ಕುಂಬ್ಳೆಯಂತಹ 'ಕನ್ನಡಿಗ' ಕನ್ನಡ ಚಿತ್ರಗಳಲ್ಲಿ ಹೇಗೆ ತಾನೆ ನಟಿಸಿಯಾರು? ಹೀಗಾಗಿ ಕನ್ನಡದ ಹೆಮ್ಮೆಯ ಪುತ್ರ ಕುಂಬ್ಳೆಯ ನಟನೆಯನ್ನು ನೋಡಬೇಕಾದರೆ ನೀವೆಲ್ಲಾ ಹಿಂದಿ ಚಿತ್ರ ನೋಡಬೇಕು.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-